ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 52
ಡಿಸೆಂಬರ್ 23, 2012

ಪುಟ 16 ರೂ. 5/-






ರಾಜಕೀಯ ಪರ್ಯಾಯಕ್ಕೆ ಜನಾಂದೋಲನಗಳೇ ದಾರಿ



ದೇಶದಲ್ಲಿ ಒಂದೇ ಒಂದು ವಾಲ್ ಮಾರ್ಟ್ ಸೂಪರ್ ಮಾರ್ಕೆಟ್ ಆರಂಭವಾಗಲು ಬಿಡೆವು

- ಪ್ರಕಾಶ್ ಕಾರಟ್



ಅಂಗವಿಕಲರಿಗಾಗಿ ಸಂವಿಧಾನ ತಿದ್ದುಪಡಿಯಾಗಲಿ - ಬೃಂದಾ



"ಉದಾರೀಕರಣ ನೀತಿಗಳ ದಾಳಿಯಿಂದ ಸಾಮಾಜಿಕ ನ್ಯಾಯವನ್ನು ರಕ್ಷಿಸಲು ಖಾಸಗಿ ರಂಗದಲ್ಲಿ ಮೀಸಲಾತಿ ಅಗತ್ಯ"



ಬಿಜೆಪಿ-ಕೆಜೆಪಿ ಪಕ್ಷಗಳ ನಡುವೆ ಮ್ಯಾಚ್ ಫಿಕ್ಸಿಂಗ್ ?

ಆರೋಗ್ಯದಿಂದ ಜನಾರೋಗ್ಯದೆಡೆಗೆ ಏಕೆ, ಹೇಗೆ?

ವೈಯಕ್ತಿಕ ಆರೋಗ್ಯದ ಸೂತ್ರಗಳು ಆರೋಗ್ಯ ಸುಧಾರಣೆಗೆ ಅತ್ಯಗತ್ಯ. ಈ ಸೂತ್ರಗಳನ್ನು ಈಗಾಗಲೇ ವೈದ್ಯರು ತಿಳಿಸುತ್ತಿದ್ದಾರೆ. ಅದಲ್ಲದೆ ವೈದ್ಯ ಸಾಹಿತ್ಯ ಹಾಗೂ ಪತ್ರಿಕೆಗಳು ಜನರಿಗೆ ತಿಳಿಸುತ್ತಾ ಬಂದಿವೆ. ಆದರೆ ಆರೋಗ್ಯ ಸುಧಾರಣೆಗೆ ಕೇವಲ ವೈಯಕ್ತಿಕ ಆರೋಗ್ಯದ ಸೂತ್ರಗಳು ಸಾಕಾಗುವುದಿಲ್ಲ. ಸಾರ್ವಜನಿಕ ಆರೋಗ್ಯ ಸುಧಾರಣೆಯ ವ್ಯವಸ್ಥೆ ಜಾರಿಯಾಗಬೇಕಾಗುತ್ತದೆ. ಇದು ಸರಕಾರದಿಂದಲೇ ಸಾಧ್ಯ. ಆದರೆ ಈ ವಿಷಯಗಳ ಚರ್ಚೆ ವಿರಳ ಹಾಗೂ ಜನರಿಗೆ ಅಪರಿಚಿತವಾಗಿದೆ.

ವಿಜ್ಞಾನ ಹಾಗೂ ತಂತ್ರಜ್ಞಾನ ಸಾರ್ವಜನಿಕ ಆರೋಗ್ಯ ಸುಧಾರಿಸಲು ಹೊಸ ಆಯಾಮವನ್ನೇ ಸೃಷ್ಟಿಸಿದೆ. ವಿಶ್ವ ಆರೋಗ್ಯ ಸಂಸ್ಥೆ 1977ರಲ್ಲಿ "2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ" ಎಂಬ ಕಾರ್ಯಕ್ರಮವನ್ನು ಜಾರಿಮಾಡಿತು ಹಾಗೂ ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಎಲ್ಲ ದೇಶಗಳ ಸರಕಾರಗಳಿಗೆ ಕರೆ ನೀಡಿತು. ಆದರೆ ಭಾರತವನ್ನು ಸೇರಿ ಹಲವಾರು ದೇಶಗಳು ಈ ಕರೆಯನ್ನು ಜಾರಿ ಮಾಡಲಿಲ್ಲ! ಇದಕ್ಕೆ ಮುಖ್ಯ ಕಾರಣ ಜಾಗತೀಕರಣ, ಖಾಸಗೀಕರಣ ನೀತಿಯ ಬಗ್ಗೆ ಸರಕಾರ ಗಮನಹರಿಸಿದ್ದು. ಜಾಗತೀಕರಣ ನೀತಿಯನ್ನು ಭಾರತದ ಮೇಲೆ ಹೇರಲಾಗಿತ್ತು, ಭಾರತ ಅದನ್ನು ಅನಿವಾರ್ಯವಾಗಿ ಒಪ್ಪಬೇಕಾಗಿತ್ತು.



ಈ ಹಂತದಲ್ಲಿ ಅಂದರೆ 2000 ಇಸವಿಯ ಹೊತ್ತಿಗೆ ಆರೋಗ್ಯ ಕ್ಷೇತ್ರದ ಬಗ್ಗೆ ಆಸಕ್ತಿಯುಳ್ಳ ಹಲವು ವ್ಯಕ್ತಿಗಳು ಹಾಗೂ ಸಂಘಟನೆಗಳು ಒಟ್ಟುಗೂಡಿ ಜನಾರೋಗ್ಯ ಸುಧಾರಣೆ ಹೇಗೆ ಎಂಬುದರ ಬಗ್ಗೆ ಚಿಂತನೆಯನ್ನು ನಡೆಸಿದ್ದವು. ಇದರ ಪರಿಣಾಮವಾಗಿಯೇ ಜಾಗತಿಕ ಮಟ್ಟದಲ್ಲಿ ಜನಾರೋಗ್ಯ ಆಂದೋಲನ (PEOPLES HEALTH MOVEMENT) ಜಾರಿಗೆ ಬಂದಿತು. ಇದರ ಮುಖ್ಯ ಉದ್ದೇಶ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಜಾರಿಗೆ ತರುವುದು. ಇದನ್ನು ಜಾರಿಗೆ ತರಲು ಸರಕಾರ, ವಿಶ್ವ ಆರೋಗ್ಯ ಸಂಸ್ಥೆಯ ಪ್ರಾಥಮಿಕ ಆರೋಗ್ಯ ಪಾಲನೆಯ ಎಂಟು ಅಂಶಗಳ ಸೂತ್ರವನ್ನು ಜಾರಿಗೆ ತರುವುದು.

ಜನಾರೋಗ್ಯ ಆಂದೋಲನವನ್ನು ಭಾರತ ಮಟ್ಟದಲ್ಲಿಯೂ ಜಾರಿಗೊಳಿಸಲಾಯಿತು– ಅದುವೇ ಜನಸ್ವಾಸ್ಥ ಅಭಿಯಾನ. ಕರ್ನಾಟಕ ಮಟ್ಟದಲ್ಲಿಯೂ ಜನಾರೋಗ್ಯ ಆಂದೋಲನ ಜಾರಿಗೆ ಬಂದಿತು. ಜನಾರೋಗ್ಯ ಸುಧಾರಣೆಯಲ್ಲಿ ಇದೊಂದು ನಿರ್ಣಾಯಕ ಹೆಜ್ಜೆ.

ಜನಸ್ವಾಸ್ಥ ಅಭಿಯಾನ ಜಾರಿಗೆ ಬಂದ ನಂತರ ಅದು ಭಾರತ ಸರಕಾರದ ಮೇಲೆ ಒತ್ತಡ ತಂದಿತು. ಅದರ ಪರಿಣಾಮವಾಗಿ 2005ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಜಾರಿಗೆ ಬಂದಿತು. ಈ ಯೋಜನೆಯ ಮುಖ್ಯ ಉದ್ದೇಶ ಶಿಶುಮರಣ, ಮಾತೃಮರಣ ಸಂಖ್ಯೆ, ಅಪೌಷ್ಠಿಕತೆಯನ್ನು ಕಡಿಮೆ ಮಾಡುವುದಾಗಿತ್ತು. ಈ ಯೋಜನೆಯಲ್ಲಿ ಆರೋಗ್ಯದ ಮೇಲೆ ಖರ್ಚು ಮಾಡಲಾಗುತ್ತಿದ್ದ ಹಣವನ್ನು ಹೆಚ್ಚಿಸುವುದು (ಒಟ್ಟು ಆಂತರಿಕ ಉತ್ಪನ್ನದ 0.9–3.0%), ಈ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತರನ್ನು ನೇಮಿಸಲಾಯಿತು. ಗ್ರಾಮೀಣ ಆರೋಗ್ಯ, ನೈರ್ಮಲ್ಯ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಗಳು ಗ್ರಾಮೀಣ ಜನರ ಮಧ್ಯೆ ಕೆಲಸ ಮಾಡುವುದರಿಂದ ಗ್ರಾಮೀಣ ಜನರ ಆರೋಗ್ಯ ಸುಧಾರಣೆ ಸಾಧ್ಯತೆಯನ್ನು ಹೆಚ್ಚಿಸಲಾಯಿತೆಂದು ಹೇಳಬಹುದು.



ಈಗ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಐದು ವರ್ಷ ಪೂರೈಸಿದೆ. ಆ ಹಂತದಲ್ಲಿ ಅದರ ಸಾಧನೆಯನ್ನು ಅವಲೋಕನ ಮಾಡಿದಾಗ, ಅದು ನಿರೀಕ್ಷಿತ ಮಟ್ಟ ತಲುಪಿಲ್ಲವೆಂಬ ತೀರ್ಮಾನಕ್ಕೆ ಬರಲಾಯಿತು. ಸರಕಾರದ ಆರೋಗ್ಯ ಕಾರ್ಯಕ್ರಮ ಏಕೆ ಗುರಿ ಸಾಧಿಸಿಲ್ಲವೆಂಬುದನ್ನು ವಿಶ್ಲೇಷಿಸಿದಾಗ ಈ ಕೆಲವು ಅಂಶಗಳು ಎದ್ದು ಕಾಣುತ್ತವೆ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ನಿರ್ಲಕ್ಷ!

ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿವೆ. ಈ ಕೇಂದ್ರಗಳು ಕೇವಲ ಚಿಕಿತ್ಸಾ ಕೇಂದ್ರಗಳಾಗಿದ್ದು, ಇತರ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಸೂತ್ರಗಳನ್ನು ನಿರ್ಲಕ್ಷಿಸಿವೆ. ಇದಲ್ಲದೆ ಅನೇಕ ಕೇಂದ್ರಗಳಲ್ಲಿ ಉಪಯೋಗ ಶುಲ್ಕವನ್ನು ವಿಧಿಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಭ್ರಷ್ಟಾಚಾರವೂ ಕಂಡುಬರುತ್ತಿದೆ. ಚಿಕಿತ್ಸೆ ನಿರಾಕರಣೆಯಾಗುತ್ತದೆ. ಜನರು ಈಗಿನ ದಿನಗಳಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೋಗುವ ಬದಲು ಖಾಸಗೀ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಆದರೆ ಇಲ್ಲಿ ಚಿಕಿತ್ಸೆ ದುಬಾರಿ ಹಾಗೂ ಅನೇಕ ವೇಳೆ ಅನಗತ್ಯ. ಇದರಿಂದಾಗಿ ಜನರು ಚಿಕಿತ್ಸೆಯಿಂದ ದೂರ ಉಳಿಯುತ್ತಿದ್ದಾರೆ. ಆರೋಗ್ಯ ಸುಧಾರಣೆ ಕೇವಲ ವೈದ್ಯಕೀಯ ವಿಷಯಗಳಿಗೆ ಗಮನಹರಿಸದೇ ಸಾಮಾಜಿಕ, ಆರ್ಥಿಕ, ವೈಜ್ಞಾನಿಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇದು ಸಾಧ್ಯವಾಗಿಲ್ಲ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ **ಔಷಧಿ ದೊರಕುವಿಕೆಗೂ** ಮಹತ್ವವಿದೆ. ವಿಶ್ವ ಆರೋಗ್ಯ ಸಂಸ್ಥೆ 1977 ರಲ್ಲಿಯೇ ಅಗತ್ಯ ಔಷಧಿ ಪಟ್ಟಿಯನ್ನು ತಯಾರಿಸಿದೆ. ಆದರೆ ಮಾರುಕಟ್ಟೆಯಲ್ಲಿ ಅಗತ್ಯ ಔಷಧಿಗಳ ಕೊರತೆಯಿದ್ದು, ಅನಗತ್ಯ ಹಾಗೂ ಅಪಾಯಕಾರಿ ಔಷಧಿಗಳು ಹೆಚ್ಚಿನ ಪ್ರಮಾಣದಲ್ಲಿ ದೊರಕುತ್ತಿವೆ. ಇದಕ್ಕೆ ಕಾರಣ ಔಷಧಿ ನೀತಿ, ಜನಪರವಾಗಿರದೇ ಇರುವುದು.

ಆರೋಗ್ಯ ಸಾಧನೆಗೆ ಪೌಷ್ಠಿಕ ಆಹಾರ, ನೈರ್ಮಲ್ಯ ಅಗತ್ಯ ಔಷಧಿಗಳು, ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಮುಂತಾದವುಗಳನ್ನು ಆಧಾರ ಸ್ತಂಭಗಳೆನ್ನುವರು. ಭಾರತದಲ್ಲಿ ಸಂಪೂರ್ಣ **ನೈರ್ಮಲ್ಯ ಆಂದೋಲನ** ಜಾರಿಯಾದರೂ, ನಾವು ನೈರ್ಮಲ್ಯ ಸಾಧನೆಯಲ್ಲಿ ಹಿಂದಿದ್ದೇವೆ. ಮಲಹೊರುವ ಪದ್ಧತಿಯು ನಿಷೇಧವಾಗಿದ್ದರೂ ಈಗಲೂ ನಿಂತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಬಯಲು ಪ್ರದೇಶಕ್ಕೆ ಮಲಮೂತ್ರ ವಿಸರ್ಜನೆಗೆ ಹೋಗುವವರ ಸಂಖ್ಯೆ ಇನ್ನೂ ಕಡಿಮೆಯಾಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಘನತ್ಯಾಜ್ಯ ವಿಲೇವಾರಿಗೆ ಗಮನಹರಿಸಿಲ್ಲ. ಇದರಿಂದಾಗಿ ಇಂದು ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಿವೆ.

ಪೌಷ್ಠಿಕ ಆಹಾರ ದೊರಕದಿರುವುದು.

ಪೌಷ್ಠಿಕ ಆಹಾರ ಆರೋಗ್ಯ ನಿರ್ಧಾರಕಗಳಲ್ಲೊಂದು ಇತ್ತೀಚೆಗೆ ಅಪೌಷ್ಠಿಕತೆಯಿಂದಾದ ಸಾವುಗಳು ಕರ್ನಾಟಕದಲ್ಲಿ ವರದಿಯಾಗಿದೆ. ಸರ್ವೋಚ್ಚ ನ್ಯಾಯಾಲಯವು ಅದರ ಬಗ್ಗೆ ಟಿಪ್ಪಣಿ ಮಾಡಿದೆ. ಆದರೂ ಸರಕಾರ ಬಿಪಿಎಲ್ ಕುಟುಂಬಕ್ಕೆ ಕೇವಲ 25 ಕೆಜಿ ಆಹಾರ ಧಾನ್ಯವನ್ನು ನೀಡಲು ಮುಂದಾಗಿದೆ. ಅಗತ್ಯಕ್ಕಿಂತ ಹೆಚ್ಚು ಆಹಾರಧಾನ್ಯ ಗೋದಾಮುಗಳಲ್ಲಿ ಶೇಖರಣೆಯಾಗಿದೆ, ಹಾಗೂ ಗೋದಾಮುಗಳ ಹೊರಗಡೆ ಕೊಳೆತು ಹೋಗುತ್ತಿರುವುದನ್ನು ದೂರದರ್ಶನದಲ್ಲಿ ನೋಡಿದ್ದೇವೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಕೇವಲ ಅಕ್ಕಿ, ಗೋಧಿ ಎರಡರ ಬಗ್ಗೆ ಗಮನಹರಿಸುತ್ತ ಇತರೇ ಆಹಾರ ಪದಾರ್ಥಗಳ ಬಗ್ಗೆ ನಿರ್ಲಕ್ಷ್ಯ ತೋರಿಸಿದೆ. ಬಿಸಿಯೂಟದ ಬಗ್ಗೆ ಟೀಕೆ ಟಿಪ್ಪಣಿಗಳಿವೆ. ಇದರಿಂದಾಗಿ ಅಪೌಷ್ಠಿಕತೆ ತಾಂಡವವಾಡುತ್ತಿದೆ.

ಅನೈತಿಕತೆ :

ಇತ್ತೀಚಿಗಿನ ದಿನಗಳಲ್ಲಿ ವೈದ್ಯವೃತ್ತಿ ವಿಜ್ಞಾನ ಹಾಗೂ ತಂತ್ರಜ್ಞಾನದ ದುರ್ಬಳಕೆಯಲ್ಲಿ ಮುಂದಾಗಿದೆ! ಇದರ ಪರಿಣಾಮವೇ ಕಿಡ್ನಿ ಕಳ್ಳತನ ಹಾಗೂ ಹೆಣ್ಣು ಭ್ರೂಣ ಹತ್ಯೆ ಇತ್ತೀಚಿಗಿನ ಜನಗಣತಿಯ (2011) ಪ್ರಕಾರ ಸ್ತ್ರೀ ಸಂಖ್ಯೆಯಲ್ಲಿ ಇಳಿತ (914/1000) ಕಂಡು ಬಂದಿದೆ. ಸಾವಿರಾರು ವರ್ಷಗಳಿಂದ ಇರುವ ನೈಸರ್ಗಿಕ ಸಮತೋಲನವನ್ನು ನಾವು ಏರುಪೇರು ಮಾಡುತ್ತಿರುವುದು ಅಪಾಯದ ಸಂಕೇತವಲ್ಲವೇ?

ಆರೋಗ್ಯದ ಹಕ್ಕು :

ಇಂದು ಆರೋಗ್ಯ ವಿಷಯ ಕೇವಲ ಆರೋಗ್ಯ ಸುಧಾರಿಸುವ ವಿಷಯವಲ್ಲ. ಆರೋಗ್ಯ ಹಕ್ಕಿನ ವಿಷಯ. ಈ ಅಗತ್ಯತೆಗೆ ಸರಕಾರ ಸಜ್ಜಾಗಬೇಕಿದೆ.

ಈ ಎಲ್ಲ ವಿಷಯಗಳನ್ನು ಜನರು ಗಮನಿಸಿ ಆರೋಗ್ಯ ಸುಧಾರಣೆಗೆ ಸರಕಾರವನ್ನು ಎಚ್ಚರಗೊಳಿಸಬೇಕಾಗಿದೆ. ಇಲ್ಲಿ ಸಿನಿಕತೆಗೆ ಸ್ಥಳವಿಲ್ಲ. ಆರೋಗ್ಯದಿಂದ ಜನಾರೋಗ್ಯದೆಡೆಗೆ ಜಾರಿಯಾದಾಗ ಮಾತ್ರ ಜನಾರೋಗ್ಯ ಸಾಧಿಸಿದಂತೆ. ಈ ವಿಷಯದ ಬಗ್ಗೆ ವೈದ್ಯ ಲೇಖನಗಳು ಅಗತ್ಯ. ವೈದ್ಯರು ಕೇವಲ ಆಹಾರ, ಔಷಧಿಗಳಾವವು ಎಂದು ಬರೆಯುವುದರೊಂದಿಗೆ ಅದಕ್ಕೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ ಅಂಶಗಳನ್ನು ಬರೆಯಬೇಕಾಗುತ್ತದೆ. ಮಾಧ್ಯಮಗಳು ಈ ವಿಷಯವನ್ನು ಕೇವಲ ಕುತೂಹಲತೆಗೆ ಉಪಯೋಗಿಸುತ್ತಾರೆ. ಆದರೆ ನಾವು ಈ ವಿಷಯಗಳನ್ನು ಉಪಯೋಗಿಸಿ ಜನರಿಗೆ ತಿಳಿಸುವ ಪ್ರಯತ್ನಮಾಡಬೇಕಿದೆ. ಆಗಲೇ ಬದಲಾವಣೆ ಸಾಧ್ಯ.

ಡಾ|| ಪ್ರಕಾಶ್ ಸಿ.ರಾವ್
ಕ್ಲಿನಿಕ್ ಅಪರ್ಣ, 4/3 ಮೊದಲನೇ
ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು
ಮೊ: 9632726177

ತುರನೂರ ಗ್ರಾಮ ಪಂಚಾಯತ್: ಅಧ್ಯಕ್ಷರಾಗಿ ಸಿಪಿಐ(ಎಂ)ನ ನಾಗಪ್ಪ ಸಂಗೊಳ್ಳಿ ಆಯ್ಕೆ

ಎರಡನೇ ಅವಧಿಗೆ ನಡೆದ ತುರನೂರ ಗ್ರಾಮ ಪಂಚಾಯತ್ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಯಾದ ಕಾಂ. ನಾಗಪ್ಪ ಲಕ್ಕಪ್ಪ ಸಂಗೊಳ್ಳಿ ಯವರು ಆಯ್ಕೆಯಾಗಿದ್ದಾರೆ.

ಸತತವಾಗಿ ರಾಮದುರ್ಗ ನಗರದಲ್ಲಿ ಹಾಗೂ ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುತ್ತಿರುವ, ಜನರ ಧ್ವನಿಯಾಗಿ ಕೆಲಸ ಮಾಡುತ್ತಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ಒಟ್ಟು 20 ಸದಸ್ಯರಲ್ಲಿ 12 ಸದಸ್ಯರ ಮತಗಳಿಂದ ಆಯ್ಕೆಯಾಗಿದ್ದಾರೆ. ಅದೇ ರೀತಿ 12 ಮತಗಳಿಂದ ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿಯಾದ ಶ್ರೀಮತಿ ಭೀಮಾಕ್ಷಿ ಸಿದ್ದಪ್ಪ ಗುದಗಿರವರು ಆಯ್ಕೆಯಾಗಿದ್ದಾರೆ.

ಜನಪರ ಕೆಲಸಗಳನ್ನು ಗುರ್ತಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಕಾರಣರಾದ ತುರನೂರ ಪಂಚಾಯತ್ ಸದಸ್ಯರನ್ನು ಹಾಗೂ ಪಂಚಾಯತ್ ವ್ಯಾಪ್ತಿಯ ಜನತೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಮದುರ್ಗ ತಾಲೂಕಾ ಸಮಿತಿ ಅಭಿನಂದಿಸಿದೆ.

ವರದಿ: ಗೈಬು ಜೈನೆಖಾನ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅನಧೀಕೃತ ಮನೆಗಳ ಸಕ್ರಮ ಮಸೂದೆ ಅಂಗೀಕಾರ ಸ್ವಾಗತಾರ್ಹ

ಗ್ರಾಮೀಣ ಭಾಗದ ಸರ್ಕಾರಿ ಜಾಗಗಳಲ್ಲಿ ವಸತಿ ರಹಿತರು ಅನಧೀಕೃತವಾಗಿ ನಿರ್ಮಿಸಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸುವ 'ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ-2012' ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರವಾದದ್ದು ಸ್ವಾಗತಾರ್ಹವಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ಸಾವಿರಾರು ಬಡ ದಲಿತ ಕೃಷಿಕೂಲಿಕಾರ ಕುಟುಂಬಗಳಿಗೆ ಅನುಕೂಲವಾಗಲಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

ವಿಧಾನ ಮಂಡಲದ ಹಿಂದಿನ ಅಧಿವೇಶನದಲ್ಲಿ ಪಾಸಾದ ಈ ಮಸೂದೆಯನ್ನು ಭೂಗಳ್ಳರಿಗೆ ಅದರಿಂದ ಅನುಕೂಲವಾಗುತ್ತದೆ ಎಂದು ಅನುಮಾನ ವ್ಯಕ್ತಪಡಿಸಿ ರಾಜ್ಯಪಾಲರು ವಾಪಸ್ ಕಳುಹಿಸಿದ್ದರು. ರಾಜ್ಯಪಾಲರ ಸಲಹೆ ಮೇರೆಗೆ ಮಸೂದೆಯನ್ನು ವಿಧಾನ ಮಂಡಲದಲ್ಲಿ ಮತ್ತೊಮ್ಮೆ ಮಂಡಿಸಿ ವಿಸ್ತೃತ ಚರ್ಚೆ ನಡೆಸಲಾಗಿದೆ. ಪ್ರತಿ ಪಕ್ಷಗಳ ಸದಸ್ಯರೂ ತಮ್ಮ ಸಲಹೆಗಳನ್ನು ನೀಡಿದ್ದಾರೆ. ಆ ಸಲಹೆಗಳನ್ನು ಆಧರಿಸಿ ಅಗತ್ಯ ಎನಿಸಿದರೆ ಕೆಲ ತಿದ್ದುಪಡಿಗಳನ್ನು ಮಾಡಿ ಮಸೂದೆಯನ್ನು ಜಾರಿಗೆ ತರಲಾಗುವುದು ಎಂದು ಸರ್ಕಾರ ಹೇಳಿಕೊಂಡಿದೆ.

31 ಡಿಸೆಂಬರ್ 2011 ಕ್ಕಿಂತ ಮೊದಲು ಸರ್ಕಾರಿ ಜಮೀನಿನಲ್ಲಿ ನಿರ್ಮಾಣವಾಗಿರುವ ಮನೆಗಳಿಗೆ ಮಾತ್ರ ಈ ಕಾನೂನು ಅನ್ವಯವಾಗಲಿದೆ ಎಂದು ಹೇಳಲಾಗಿದೆ. ಕಾಯ್ದೆ ಅನ್ವಯವಾಗಲು ನಿಗದಿಗೊಳಿಸಲಾದ ಅವಧಿಯನ್ನು ಒಂದು ವರ್ಷ ಹಿಂದಕ್ಕೆ ಒಯ್ಯುವ ಬದಲಾಗಿ ಮಸೂದೆ ವಿಧಾನಮಂಡಲದಲ್ಲಿ ಪಾಸಾದ ದಿನದವರೆಗಾದರೂ ಮುಂದಕ್ಕೆ ತರುವುದು ಅಗತ್ಯವಾಗಿದೆ. ಅರ್ಜಿದಾರರು ನಿಗದಿತ ಅವಧಿ ಪೂರ್ವದಿಂದ ಸಂಬಂಧಪಟ್ಟ ಸರ್ಕಾರಿ ಜಾಗದಲ್ಲಿ ವಾಸಮಾಡುತ್ತಿರುವುದಕ್ಕೆ ಸಾಕ್ಷಾಧಾರಗಳನ್ನು ಒದಗಿಸಬೇಕು ಎಂಬ ಷರತ್ತನ್ನು ತೆಗೆದು ಹಾಕಿ ಸಧ್ಯ ಅವರು ಸರ್ಕಾರಿ ಜಾಗದಲ್ಲಿ ವಾಸ ಇರುವುದನ್ನೇ ಆಧಾರವೆಂದು ಪರಿಗಣಿಸುವಂತಾಗಬೇಕು. 2,400 ಚದರ ಅಡಿ ವಿಸ್ತೀರ್ಣ ಮಿತಿಯೊಳಗಿನ ನಿವೇಶನಗಳನ್ನು ಮಾತ್ರ ಸಕ್ರಮಗೊಳಿಸಲಾಗುವುದು ಎಂಬ ಸರ್ಕಾರದ ಭರವಸೆ ಸ್ವಾಗತಾರ್ಹವಾಗಿದೆ. ಆದರೆ ಶ್ರೀಮಂತರು ತಮ್ಮ ಕುಟುಂಬದ ಸದಸ್ಯರ ಹೆಸರುಗಳಲ್ಲಿ ಅಥವ ಬೇನಾಮಿ ಹೆಸರುಗಳಲ್ಲಿ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಸರ್ಕಾರಿ ಭೂಮಿ/ನಿವೇಶನಗಳನ್ನು ನಿರ್ದಾಕ್ಷಿಣ್ಯವಾಗಿ ಸ್ವಾಧೀನಪಡಿಸಿ ಅರ್ಹ ವಸತಿ ರಹಿತ ಕುಟುಂಬಗಳಿಗೆ ವಿತರಣೆ ಮಾಡಬೇಕು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಬಹಳಷ್ಟು ಸರ್ಕಾರಿ ಭೂಮಿಯನ್ನು ಶ್ರೀಮಂತ ಜಮಿನ್ದಾರರು ಒತ್ತುವರಿ ಮಾಡಿಕೊಂಡು, ತಮ್ಮ ಗದ್ದೆಗಳಲ್ಲಿ ದುಡಿಯಲು ಬೇಕಾಗುವ ಕೂಲಿಕಾರರಿಂದ ಸಾವಿರಾರು ರೂ. ಹಣವನ್ನು ಪಡೆದು ಮನೆಗಳನ್ನು ಕಟ್ಟಿಕೊಳ್ಳಲು ಬಿಟ್ಟಿದ್ದಾರೆ. ಜಮಿನ್ದಾರನಿಗೆ ಹಣ ಕೊಡಲು ಸಾಧ್ಯವಾಗದ ಕೂಲಿಕಾರನಿಗೆ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ಅವರು ಬಿಡುವುದಿಲ್ಲ. ಗಾಳೆಮ್ಮಗುಡಿ ಕ್ಯಾಂಪ್‌ನ ಸುಮಾರು 4 ಎಕರೆ ಭೂಮಿಯಲ್ಲಿ ಸುಮಾರು 30 ವರ್ಷಗಳ ಹಿಂದೆ ಗ್ರಾಮ ಪಂಚಾಯತಿಯಿಂದ ನಿವೇಶನ ರಹಿತ ದಲಿತ ಕೂಲಿಕಾರ ಕುಟುಂಬಗಳಿಗೆ ನಿವೇಶನಗಳನ್ನು ವಿತರಣೆ ಮಾಡಿದ ದಾಖಲೆಗಳನ್ನೆ ನಾಪತ್ತೆ ಮಾಡಿ ಕಂದಾಯ ಅಧಿಕಾರಿಗಳು ಶಾಮೀಲಾಗಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಆ ಒಟ್ಟು ಭೂಮಿ ಖಾಸಗಿ ಮಾಲಿಕತ್ವದ ಭೂಮಿ ಎಂದು ಸಾಧಿಸುವ ಪ್ರಯತ್ನ ನಡೆದಿದೆ. ಇಂತಹ ಅಕ್ರಮಗಳು ರಾಜ್ಯದ ಇತರ ಭಾಗಗಳಲ್ಲಿಯೂ ನಡೆದಿರುವ ಸಾಧ್ಯತೆ ಇದೆ. ಇಂತಹ ಎಲ್ಲ ಪ್ರಕರಣಗಳನ್ನು ಬಯಲಿಗೆಳೆದು ಶ್ರೀಮಂತರು ಕಬಳಿಸಿರುವ ಸರ್ಕಾರಿ ಭೂಮಿಯನ್ನು/ ನಿವೇಶನಗಳನ್ನು ಸ್ವಾಧೀನಪಡಿಸಿ ಅರ್ಹ ನಿವೇಶನರಹಿತ ಬಡವರಿಗೆ ವಿತರಣೆ ಮಾಡಲು ಸರ್ಕಾರ ಮುಂದಾಗಬೇಕು.

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸರ್ಕಾರಿ ಜಾಗಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವ ಸಾವಿರಾರು ಕುಟುಂಬಗಳು ಹಕ್ಕು ಪತ್ರಗಳಿಗಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಸರ್ಕಾರದ ಪ್ರಸಕ್ತ ತೀರ್ಮಾನದಿಂದಾಗಿ


ಪುಟ 4 ಕ್ಕೆ

ಬಿಜೆಪಿ-ಕೆಜೆಪಿಗಳ ನಡುವೆ ಮ್ಯಾಚ್ ಫಿಕ್ಸಿಂಗ್?

ಕೈ, ಕೈ ಕದನಕ್ಕಿಳಿದಿದ್ದವರೀಗ ವಿಶ್ರಾಂತಿ ಪಡೆಯುತ್ತಿದ್ದಾರೆ. ಇನ್ನೇನು ಸರಕಾರ ಪತನವಾಯಿತು, ಚುನಾವಣೆ ಬಂದೇ ಬಿಟ್ಟಿತು, ಬೆಳಗಾವಿ ಅಧಿವೇಶನ ಅರ್ಧದಲ್ಲೇ ಬರ್ಖಾಸ್ತು ಆಗಲಿದೆ ಎಂದೆಲ್ಲಾ ಸುದ್ದಿ ಹರಿಯ ಬಿಟ್ಟವರಿಗೆ ನಿರಾಶೆಯಾಗುವಂತೆ ಈ ನಾಯಕರು ಅಚ್ಚರಿ ಹುಟ್ಟಿಸಿದ್ದಾರೆ. ಹಾಗಾದರೆ ಇಲ್ಲೊಂದು 'ಮ್ಯಾಚ್ ಫಿಕ್ಸಿಂಗ್ ' ಆಗಿದೆಯಾ?. ಇಲ್ಲವೆಂದರೆ 'ಕೆಜೆಪಿ ಪಕ್ಷದ ರಾಜಕೀಯ ಸಮಾವೇಶಕ್ಕೆ ಹೋದವರನ್ನು ಬಾಣಲೆಗೆ ಹಾಕಿ ಹುರಿಯುತ್ತೇವೆ' ಎಂದು ಸದಾನಂದಗೌಡರು ಹೇಳಿ ದಿನವೂ ಕಳೆದಿರಲಿಲ್ಲ. ಸಮಾವೇಶಕ್ಕೆ ಹಿಂದಿನ ದಿನವೇ ಯಡ್ಡಿ ನಿಷ್ಠರಾದ ಸಚಿವ ಪುಟ್ಟಸ್ವಾಮಿ ಸ್ಥಾನ ಕಸಿದುಕೊಂಡು ಮತ್ತು ತುಮಕೂರಿನ ಸಂಸದ ಬಸವರಾಜುರವರನ್ನು ಅಮಾನತುಗೊಳಿಸಿ ಮೀಸೆ ತಿರುವಿ ಸೆಡ್ಡು ಹೊಡೆದಿದ್ದರಲ್ಲಾ! ಆದರೀಗ ಬಾಣಲೆಯಲ್ಲಿ ಹುರಿಯುವುದಿರಲಿ ತಮ್ಮ ವಿರೋಧಿಗಳತ್ತ ಹೂಬಾಣವನ್ನೇ ಬಿಟ್ಟಿದ್ದಾದರೂ ಹೇಗೆ?.

ಬಾಚಿ ದೋಚುವವರಿಗೆಲ್ಲಿ ನೀತಿ-ನಿಯತ್ತು ?

ಇತ್ತ ಬಿಜೆಪಿಯ ಈಶ್ವರಪ್ಪ, ಅನಂತಕುಮಾರ್ ಬಣ, ಅತ್ತ ಯಡಿಯೂರಪ್ಪನವರ ಬಣ ಬುಸುಗುಡುವುದನ್ನೇನು ನಿಲ್ಲಿಸಿಲ್ಲ. ಆದರೆ ಯಡಿಯೂರಪ್ಪನವರ ನೂತನ 'ಕರ್ನಾಟಕ ಜನತಾ ಪಕ್ಷ (ಕೆಜೆಪಿ)' ದ ಹಾವೇರಿ ಸಮಾವೇಶಕ್ಕೆ ಹೋದ ಬಿಜೆಪಿ 14+7 ಶಾಸಕರನ್ನು, ಕೆಲವು ಸಂಸದರನ್ನು ವಜಾ ಮಾಡುವುದಾಗಿ ಹೇಳಿತ್ತಿದ್ದ ಬಿಜೆಪಿ ನಾಯಕರು ಕೊನೆಗೆ ನೋಟೀಸು ನೀಡುವುದನ್ನೂ ಮಾಡಲಿಲ್ಲ. ಅದೂ ಅವರ ರಾಷ್ಟ್ರೀಯ ನಾಯಕರ ಕೋರ್ ಕಮಿಟಿಯಲ್ಲೇ ಕ್ರಮ ಕೈಗೊಳ್ಳದೇ ಕಾದು ನೋಡುವ ತಂತ್ರ(!) ಅನುಸರಿಸುವುದಾಗಿ ತೀರ್ಮಾನಿಸಿರುವರೆಂದರೆ ಶಿಸ್ತಿನ ಪಕ್ಷದ ದೌರ್ಬಲ್ಯ ಎಂತಹ ಪ್ರಪಾತವನ್ನು ತಲುಪಿದೆ ಎಂಬುದನ್ನು ಮತ್ತು ಅವರಲ್ಲಿರುವ ಅಧಿಕಾರ ದಾಹದ ಹಪಾಹಪಿತನವನ್ನು ಅರಿಯಬಹುದು. ಆಳುವ ಪಕ್ಷದ ಶಾಸಕರಾಗಿದ್ದುಕೊಂಡು ಅದರ ವಿರೋಧಿ ಇನ್ನೊಂದು ಪಕ್ಷದ ಸಂಘಟನಾ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೂ ಏನೂ ಕ್ರಮವಹಿಸಲಿಲ್ಲವೆಂದರೆ ವಿಚಿತ್ರವೇ ಸರಿ!



ಆದ್ದರಿಂದಲೇ ಯಡಿಯೂರಪ್ಪನವರು ಹೇಳಿದಂತೆ ಬೆಂಬಲಿಗ ಶಾಸಕರಿಂದ ರಾಜೀನಾಮೆ ಕೊಡಿಸಲೂ ಇಲ್ಲ, ಈಶ್ವರಪ್ಪನವರು ಅವರನ್ನು ವಜಾ ಮಾಡಲೂ ಇಲ್ಲ! ಅಂದರೆ ಬೆದರಿಕೆ ಮತ್ತು ಗುಟುರು ಹಾಕಿದ ಇಬ್ಬರಿಗೂ ಸರಕಾರ ಹೋಗುವುದಾಗಲೀ, ವಿಧಾನ ಸಭೆ ವಿಸರ್ಜನೆಯಾಗಿ ಹೊಸ ಜನಾದೇಶ ಪಡೆಯಲು ಚುನ್ನಾವಣೆ ಎದುರಿಸುವುದಾಗಲಿ ಬೇಕಿಲ್ಲ. ಸಿಕ್ಕಿರುವ ಅವಕಾಶವನ್ನು ಕಳೆದುಕೊಳ್ಳದೇ ಸಿಕ್ಕಿದ್ದನ್ನೆಲ್ಲಾ ಬಾಚಿ, ದೋಚಿ ಗಂಟು ಕಟ್ಟಿ, ಚುನಾವಣೆಗೂ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳುವ ಹಂಚಿಕೆ!

ಹೊಸ ಪಕ್ಷದ ಉದಯದಲ್ಲಿ

ಡಾ. ಯಡಿಯೂರಪ್ಪನವರಿಗೆ ಇನ್ನು ಬಿಜೆಪಿಯಲ್ಲಿದ್ದು 'ಉಳಿಗಾಲ'ವಿಲ್ಲವೆಂಬುದು ಖಾತ್ರಿಯಾಗುತ್ತಿರುವಂತೆ ಹೊಸ ಮಾರ್ಗಗಳ ಅನ್ವೇಷಣೆಯಲ್ಲಿ ಹೊಸ ಪಕ್ಷವನ್ನು ಆಶ್ರಯಿಸಿದ್ದು. ಕಳೆದ ವರುಷದಲ್ಲಿ ನೊಂದಾವಣೆಯಾದರೂ ಈಗ ಅದರ ಅಧ್ಯಕ್ಷತೆ ವಹಿಸಿಕೊಳ್ಳಲು ಹಾವೇರಿಯಲ್ಲಿ ಸಮಾವೇಶವನ್ನು ಏರ್ಪಡಿಸಿದ್ದು. ಹೀಗಾಗಿ 'ತಾನು ಕಟ್ಟಿ ಬೆಳೆಸಿದ ಪಕ್ಷ' ಬಿಜೆಪಿಯಿಂದ ಉಚ್ಚಾಟನೆಗೆ ಕಾದು ಆಗದೇ ಅನಿವಾರ್ಯವಾಗಿ ಹೊರನಡೆದದ್ದು. ಸಮಾವೇಶದ ಸಿದ್ಧತೆಯಾಗಿ ಶಾಸಕತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದು. ತನ್ನ ಸಂಘಟನಾ ಶಕ್ತಿ ಮತ್ತು ಪ್ರಭಾವ ಕ್ರೋಢೀಕರಣದಲ್ಲಿ ಬಹು ನಿರೀಕ್ಷಿತ ಡಿಶೆಂಬರ್ 11 ರ ಹಾವೇರಿ ಸಮಾವೇಶ ಇಂಬು ಕೊಟ್ಟಿದೆ. ತನ್ನ ಬೆಂಬಲಿಗ ಶಾಸಕರು, ಮಂತ್ರಿಗಳಿಂದ ಜನ, ಹಣ ತೊಡಗಿಸಿ ಬಲ ಪ್ರದರ್ಶಿಸಲು ಸಾಧ್ಯವಾಗಿದೆ. ಹಾವೇರಿ ಸ್ವತಃ ಉದಾಸಿಯವರ ಕ್ಷೇತ್ರ. ಆರಂಭದಿಂದಲೂ ಲೋಕೋಪಯೋಗಿ ಖಾತೆಯಂತಹ ಒಳ್ಳೇ ಆದಾಯದ ಖಾತೆಯನ್ನೇ ಅನುಭವಿಸುತ್ತಾ, ಮಗನನ್ನೂ ಸಂಸದನನ್ನಾಗಿಸಿದ ಅವರಿಗೆ ಇದು ಋಣ ತೀರಿಸುವ ಸಂದರ್ಭವಾಗಿ ಬಂದಿತ್ತು. ಒಟ್ಟಾರೆ ಈ ಸಮಾವೇಶ ಯಡ್ಡಿ ವಿರೋಧಿಗಳಿಗೆ ಒಂದಿಷ್ಟು ಬಿಸಿ ಮುಟ್ಟಿಸಿದೆ. ಸಮಾವೇಶಕ್ಕೆ 4-5 ಲಕ್ಷ ಜನರನ್ನು ಪಾಲ್ಗೊಳಿಸುವುದಾಗಿ ಹೇಳಿಕೊಂಡಿದ್ದರೂ ಸುಮಾರು ಒಂದು ಲಕ್ಷದ ಅಂಚಿನಲ್ಲಿ ಕರೆದು ತರಲಾಗಿದೆ. ಇದು ರಾಜ್ಯದ ರಾಜಕೀಯ ಬೆಳವಣಿಗೆಯಲ್ಲಿ ಗಮನಾರ್ಹವಾದ ಸಂಗತಿ ನಿಜ. ಹಾಗೇ 'ರಾಷ್ಟ್ರೀಯ ಮಟ್ಟದಲ್ಲಿ ಕಿತ್ತಾಟದಲ್ಲಿ ಶಿಥಿಲಗೊಳ್ಳುತ್ತಿರುವ ಬಿಜೆಪಿಗೆ ಇದು ಒಂದು ಹೊಡೆತವೂ ಆಗಿದೆ. ಅದರರ್ಥ ಬಿಜೆಪಿಯ ಅಪಾಯ ಕಡಿಮೆಯಾಗಿದೆ ಎಂದೂ ಅಲ್ಲ.

ಕೆಜೆಪಿ ಪಕ್ಷದ ಸ್ಥಾಪನೆ ಮತ್ತು ಅದಕ್ಕೆ ಯಡಿಯೂರಪ್ಪನವರ ಚಾಲನೆ ರಾಜ್ಯದಲ್ಲಿ ಬಿಜೆಪಿಯ ಶಕ್ತಿಯನ್ನು ಮುರಿದಿರುವುದು ನಿಜ. ಈ ಸಮಾವೇಶ ಇತ್ಯಾದಿಗಳು ಮುಂಬರಲಿರುವ ಚುನಾವಣಾ ತಂತ್ರದ ಭಾಗವಾಗಿಯೇ ಇವೆ. ಹಾಗೇ ಬಹುತೇಕ ಎಲ್ಲಾ ಪಕ್ಷಗಳೂ ತಮ್ಮದೇ ಲೆಕ್ಕಾಚಾರದಲ್ಲಿ ಸಿದ್ಧವಾಗುತ್ತಿವೆ. ಯಡಿಯೂರಪ್ಪ ಸ್ವತಃ ತಾವೇ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದಾಗಿ ಹೇಳಿಕೊಳ್ಳುತ್ತಿದ್ದರೂ ಅಂತರಂಗದಲ್ಲಿ ಬಲವಿಲ್ಲ. ಹೀಗಾಗಿ

ಪುಟ 4 ಕ್ಕೆ

ಬಿಜೆಪಿ–ಕೆಜೆಪಿಗಳ ನಡುವೆ....

ಪುಟ 3 ರಿಂದ

ನೆಂಟಸ್ತನದ ಹುಡುಕಾಟವಿದೆ. ಬಹಳ ಮುಖ್ಯವಾಗಿ ಕೆಜೆಪಿಯಿಂದಾಗುವ ಲಾಭವನ್ನು ನೆಚ್ಚಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಹೊಂಚು ಹಾಕಿ ಕುಳಿತಿದೆ. ಹತ್ತಾರು ಹಗರಣಗಳ ಮಣ ಭಾರದಿಂದ ತತ್ತರಿಸುತ್ತಿರುವ ಯಡಿಯೂರಪ್ಪನ ದೌರ್ಬಲ್ಯಗಳನ್ನೇ ಬಳಸಿ ಶಕ್ತಿ ಪಡೆಯುವ ಲೆಕ್ಕಾಚಾರದಲ್ಲಿದೆ. ಉಳಿದಂತೆ ಜೆಡಿಎಸ್ ಮತ್ತು ಬಿಎಸ್‌ಆರ್ ಪಕ್ಷಗಳು ತಮ್ಮ ನೆಲೆಗೆ ಇವರು ಕೈ ಹಾಕಬಹುದೇ ಎಂದು ಚಿಂತಿತವಾಗಿವೆ . ಬಿಜೆಪಿಗೆ ಚುನಾವಣೆ ಮೊದಲು, ನಂತರದಲ್ಲಿಯೂ ಒಳ ಲೆಕ್ಕಾಚಾರಗಳಿವೆ. ಅದರ ಈಗಿನ ನಡೆ ಇನ್ನೂ ಸ್ಪಷ್ಟವಿಲ್ಲ.

ಕೆಜೆಪಿ ಪರ್ಯಾಯ ಹೇಗಾದೀತು?

ಇದೇನೇ ಇದ್ದರೂ ಒಂದು ಸಮಾವೇಶ , ಓಡಾಟ ಹಾರಾಟದ ಸಭೆಗಳೇ ಕೆಜೆಪಿ ಪಕ್ಷಕ್ಕೆ ಬಲವಾಗಲೀ, ಗೆಲುವಾಗಲೀ ತರುವುದಿಲ್ಲ. ಕರ್ನಾಟಕದ ರಾಜಕಾರಣದಲ್ಲಿ ಅಧಿಕಾರದಲ್ಲಿದ್ದು ನಂತರ ತಮ್ಮದೇ ವ್ಯಕ್ತಿಗತ ಕಾರಣಗಳಿಗೆ ಹೊಸ ಪಕ್ಷವನ್ನು ಕಟ್ಟಿದವರಿಗೆ ದೀರ್ಘ ರಾಜಕೀಯ ಭವಿಷ್ಯವೇನೂ ಉಳಿದಿಲ್ಲ. ಅಧಿಕಾರಕ್ಕೆ ಬರಲಾಗಿಲ್ಲ. ಯಡಿಯೂರಪ್ಪನವರು ತಮ್ಮದು ಪ್ರಾದೇಶಿಕ ಪಕ್ಷವೆಂದೂ, ರಾಷ್ಟ್ರೀಯ ಪಕ್ಷಗಳು ರಾಜ್ಯದ ಜನರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವುದರಿಂದ ತಮಗೆ ಭವಿಷ್ಯವಿದೆಯೆಂದು ಹೇಳುತ್ತಾರೆ. ಆದರೆ ಇವರೇ ಅಧಿಕಾರದಲ್ಲಿದ್ದಾಗ ಪ್ರಾದೇಶಿಕ ಪಕ್ಷಗಳು ಕಂಟಕವೆಂದೂ, ಜೆಡಿ(ಎಸ್) ಪಕ್ಷವನ್ನು ನಾಶಗೊಳಿಸಿಯೇ ಸಿದ್ಧವೆಂದು ಸಮರ ಸಾರಿದ್ದರು. ಇದಕ್ಕೆ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಕೈಜೋಡಿಸಲೂ ಕರೆ ನೀಡಿದ್ದರು. ಆಗ ಬಿಜೆಪಿಯೇ ಪರಿಹಾರವೆಂದಿದ್ದ ಯಡ್ಡಿ ಈಗ ಪ್ರಾದೇಶಿಕ ಪಕ್ಷವೇ ಪರಿಹಾರ ಎನ್ನುವಲ್ಲಿ ಇವರಿಗೆ ಏನಂತಹ ಸೈದ್ಧಾಂತಿಕ ಬೆಳವಣಿಗೆ ಆಗಿದೆ. ವಿಚಾರದ ಮಿಂಚು ಹೊಳೆದಿದೆ?

ಹಾಗೆ ನೋಡಿದರೆ ಕೆಜೆಪಿಗೆ ತನ್ನದೇ ಆದ ಒಂದು ಛಾಪು ಇಲ್ಲವಾಗಿದೆ. ತಮ್ಮದು ಕಲ್ಯಾಣ ಕರ್ನಾಟಕದ ನಿರ್ಮಾಣದ ಧ್ಯೇಯ ಎನ್ನುತ್ತಾರೆ. ಆದರೆ ಅದನ್ನು ಹೇಗೆ ಸಾಧಿಸುತ್ತಾರೆ? ಈಗಾಗಲೇ ಕರ್ನಾಟಕವನ್ನು ದಿವಾಳಿಯೆಬ್ಬಿಸಿದ ಜಾಗತಿಕರಣ, ಉದಾರೀಕರಣದ ವಿನಾಶಕಾರಿ ನೀತಿಗಳು ತಮ್ಮ ನಾಯಕತ್ವದಲ್ಲಿ ಜಾರಿಯಾಗಬೇಕು ಎಂದು ಬಯಸುತ್ತಾರೆ. ಆದರಿಂದ ಲೂಟಿ ಹೊಡೆಯುವ ಅವಕಾಶ ಮತ್ತೂ ತಮ್ಮದೇ ಇರಬೇಕೆನ್ನುತ್ತಾರೆ. ಹಸಿವು, ಆತ್ಮಹತ್ಯೆಗಳಿಗೆ ನೂಕಿದ ಈ ನೀತಿಗಳಿಂದ ಕಲ್ಯಾಣ ಕರ್ನಾಟಕ ನಿರ್ಮಾಣವಾಗಲು ಸಾಧ್ಯವೇ? ಒಂದು ಪ್ರಣಾಳಿಕೆಯಲ್ಲಿ ಎಲ್ಲವನ್ನೂ ಬರೆದು ಬಿಟ್ಟರೆ ಕಲ್ಯಾಣವಾಗಿ ಬಿಡುತ್ತದೆಯೇ? ಇಂತಹ ಕಲ್ಯಾಣ ಖಂಡಿತಕ್ಕೂ ಜನರದ್ದದಲ್ಲ, ಅದು ಯಡ್ಡಿ ರೆಡ್ಡಿ ಚಡ್ಡಿ ಬಳಗ, ಕಾರ್ಪೋರೇಟ್ ಕಂಪನಿಗಳದ್ದು ಅಷ್ಟೇ..ಕರ್ನಾಟಕವನ್ನು ಲೂಟಿ ಹೊಡೆಯುವ ಅವಕಾಶಕ್ಕಾಗಿ ನಡೆದಿರುವ ಸ್ಪರ್ದೆ ಅಷ್ಟೇ.

ತಾನು ಮಾತನಾಡುತ್ತಿರುವುದು ಪೊಳ್ಳು ಸುಳ್ಳು ಎಂಬುದು ಯಡಿಯೂರಪ್ಪನವರಿಗೆ ಗೊತ್ತಿಲ್ಲದ್ದೇನಲ್ಲ. ತನ್ನ ಧ್ಯೇಯ, ಜನರ ಮೇಲೆ ನಂಬಿಕೆ ಇದ್ದರೆ ಗುಡಿ ಗುಂಡಾರಗಳನ್ನು ಯಾಕೆ ಸುತ್ತಬೇಕಿತ್ತು? ತಪ್ಪು ಕಾಣಿಕೆ ಸಲ್ಲಿಸಬೇಕಿತ್ತು? ಬಿಜೆಪಿ ಸರಕಾರದಲ್ಲಿ ಅಪಾರ ಲೂಟಿ ಹೊಡೆದು, ಇತರರರಿಗೂ ಹೊಡೆಯಲು ಅವಕಾಶ ನೀಡಿ ಹಗರಣಗಳು ನಡೆದು ಕ್ರಿಮಿನಲ್ ಮೊಕದ್ದಮೆಗಳಿಂದ ಜೈಲು ಸೇರಿ ಮತ್ತೆ ಸೇರಲು ಹತ್ತಾರು ಅವಕಾಶಗಳು ಕೂಗಿ ಕರೆಯುತ್ತಿರುವಾಗ, ಅಲ್ಲಿಂದ ಪಾರಾಗುವ ಚಿಂತೆಯೇ ಮತ್ತೇ ಹೇಗಾದರೂ ಅಧಿಕಾರದಲ್ಲಿರಬೇಕೆಂಬುದಕ್ಕೆ ಕಾರಣವೇ ಹೊರತು ಕಲ್ಯಾಣ ಕರ್ನಾಟಕದ ನಿರ್ಮಾಣದ ಕನಸಲ್ಲ. ಸಿಬಿಐ ತನಿಖೆಯಲ್ಲಿರುವುದರಿಂದ ಇದಕ್ಕೆ ಕೇಂದ್ರದಲ್ಲಿರುವ ಕಾಂಗ್ರೆಸ್‌ನ ಕೃಪೆ ಬೇಕೆಂದು ಬಲ್ಲ ಯಡ್ಡಿಯವರು ಅವರ ದಾಳದಂತೆ ವರ್ತಿಸುತ್ತಿರುವುದೂ ಗುಟ್ಟೇನಲ್ಲ.

ಅಧಿಕಾರಕ್ಕಾಗಿ ಹಲವು ವೇಷಗಳು

ಇದಕ್ಕಾಗಿ ತಾನೇ ಲಿಂಗಾಯತರ ಏಕೈಕ ರಕ್ಷಕನೆಂದೂ ಜಾತಿವಾದವನ್ನು ಇನ್ನಷ್ಟು ಉದ್ರೇಕಗೊಳಿಸಲು ಪ್ರಯತ್ನಿಸುತ್ತಿರುವುದು. ಅದಕ್ಕೆ ಕೆಲವು ಮಠಾಧೀಶರನ್ನು ಬಳಸುತ್ತಿರುವುದು. ಆದರೆ ಎಲ್ಲಾ ಲಿಂಗಾಯತರು ತಮ್ಮ ಕೈಯಲ್ಲೇ ಇದ್ದಾರೆಂದು ಭಾವಿಸುವುದು ಕೇವಲ ಭ್ರಮೆ. ಇದು ಹಾವೇರಿ ಸಮಾವೇಶದ ಸಂದರ್ಭದಲ್ಲೇ ಸ್ಪಷ್ಟವಾಗಿದೆ. ಲಿಂಗಾಯತರೇನು ಇವರ ಕೈಯಲ್ಲಿ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಇದೇ ಹಾವೇರಿಯಲ್ಲೇ ಬೀಜ, ಗೊಬ್ಬರ ಕೇಳಿದ ರೈತರ ಮೇಲೆ ಗುಂಡು ಹಾರಿಸಿ ಕೊಂದದ್ದು ಬಲಿಯಾದ ರೈತ ಲಿಂಗಾಯತನೇ ಆಗಿದ್ದನಲ್ಲವೇ?

ಯಡಿಯೂರಪ್ಪ ಹೊರಗೆ ಏನೇ ಹೇಳಿಕೊಂಡರೂ ಜಾತಿ ಹೇಳಿದಾಕ್ಷಣ ಲಿಂಗಾಯತರಾಗಲೀ, ಕಲ್ಯಾಣವೆಂದಾಕ್ಷಣ ಓಟುಗಳ ಸುರಿಮಳೆಯಾಗುದಿಲ್ಲವೆಂಬುದು ಚೆನ್ನಾಗಿ ಗೊತ್ತಿದೆ. ಆದ್ದರಿಂದಲೇ ಇತರೆ ಜನಾಂಗಗಳ ಓಟಿಗಾಗಿ ವೇಷ ಬದಲಿಸಬೇಕಿದೆ. ತಮ್ಮ ಹಳೆಯ ಕೋಮುವಾದಿ ಇಮೇಜು ಕಳೆದುಕೊಳ್ಳದೇ ಅಲ್ಪಸಂಖ್ಯಾತರು, ಇತರರು ಹತ್ತಿರ ಸುಳಿಯಲಾರರು ಎಂದೇ ಸೆಕ್ಯುಲರ್ ಆಗಿ ಪರಿವರ್ತಿತರಾಗಿದ್ದಾರೆ. ಈ ಕಾರಣದಿಂದಲೇ ಅದರ ಪ್ರದರ್ಶನವನ್ನು ಮಾಡಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ತಮ್ಮ ಪಕ್ಷ ಆರೆಸ್ಸೆಸ್‌ನ ಆದರ್ಶಗಳನ್ನು ಬಿಟ್ಟಿಲ್ಲವೆಂದು ಹೇಳಿದ್ದ ಯಡಿಯೂರಪ್ಪನವರ ಮಗನ ಹೇಳಿಕೆಯನ್ನು ತಿದ್ದುವ ಪ್ರಯತ್ನಗಳು ಹೊರ ಈಗ ಬಂದದ್ದು.

ಇವಲ್ಲದೇ ತನ್ನ ಇಮೇಜು ಹೆಚ್ಚಿಸಿಕೊಳ್ಳಲು ಆ ಮೂಲಕ ಕೆಲವರಿಗಾದರೂ ಟೋಪಿ ಹಾಕುವ ಲೆಕ್ಕಾಚಾರದಲ್ಲಿ ಕೆಜೆಪಿ ಪಕ್ಷ ತನ್ನ ಪ್ರಣಾಳಿಕೆಗೆ ಡಾ.ಅನಂತಮೂರ್ತಿಯಂತಹವರ ಸಲಹೆಗಳನ್ನು ಕೇಳಿದೆ. ಪ್ರಗತಿಪರ ಚಿಂತಕರಾದ ಪ್ರೊ.ಚಂಪಾರಂತಹವರು ಪ್ರಾದೇಶಿಕ ಪಕ್ಷದ ಗುಂಗಿನಲ್ಲಿ ಯಡಿಯೂರಪ್ಪನವರಲ್ಲಿ ಪರಿಹಾರ ಕಾಣುತ್ತಿರುವುದು ಸಹ ವಿಪರ್ಯಾಸ. ಇನ್ನು ಸೈದ್ಧಾಂತಿಕ, ರಾಜಕೀಯ ಸ್ಪಷ್ಟತೆಯೇ ಇಲ್ಲದ ಕೆಲವು ರೈತ ಚಳುವಳಿಗಾರರು ಯಡ್ಡಿ ಬೆನ್ನು ಹತ್ತಿರುವುದು ಸಹಜ.!

ಈಗ ಕುತೂಹಲವಿರುವುದು ಕಾಂಗ್ರೆಸ್ ಮತ್ತು ಬಿಜೆಪಿಯ ನಡೆ ಹೇಗಿರುತ್ತವೆ ಎಂಬುದರಲ್ಲಿ. ಬಿಜೆಪಿಯು ಬಂಡಾಯ ಹೂಡಿ ಯಡಿಯೂರಪ್ಪನವರೊಂದಿಗೆ ಗುರುತಿಸಿ ಕೊಂಡವರನ್ನು ಉಚ್ಚಾಟಿಸಿದ್ದೇ ಆದಲ್ಲಿ ಸರಕಾರ ಪತನಗೊಳ್ಳಬಹುದು ಎಂಬ ಅಂಜಿಕೆ. ಅಧಿಕಾರದಲ್ಲಿ ಇಲ್ಲವಾದರೆ ಹಣ ಮತ್ತು ಮುಖ್ಯವಾಗಿ ಆಡಳಿತದ ಮೇಲಿನ ನಿಯಂತ್ರಣ ಇಲ್ಲವಾದರೆ ಅಧಿಕಾರಕ್ಕೆ ಬರಲು ಬುಡಮೇಲು ತಂತ್ರಗಳನ್ನು ಮಾಡಲಾಗುವುದಿಲ್ಲವೆಂಬ ಲೆಕ್ಕಾಚಾರ. ಅಸ್ಥಿರತೆ, ಬಹುಮತವಿಲ್ಲದ ಕಾರಣದಿಂದಲೇ ಕೇಂದ್ರವು ಸರಕಾರವನ್ನು ವಜಾ ಮಾಡಿ ಬಿಟ್ಟರೆ?. ಹೀಗಾಗಿ ಅವಕ್ಕೆಲ್ಲಾ ಅವಕಾಶ ಕೊಡದೇ ಒಟ್ಟಾರೆ ಏನನ್ನಾದರೂ ಬಲಿ ಕೊಟ್ಟಾದರೂ ಕೊನೆ ಕ್ಷಣದವರೆಗೂ ಅಧಿಕಾರದಲ್ಲಿರಲು ಪ್ರಯತ್ನಗಳು ನಡೆದಿವೆ. ಇದೇ ಹೊತ್ತಿನಲ್ಲಿ ರಾಜಕೀಯವಾಗಿ ಈಗಲೂ ನಿಷ್ಕ್ರಿಯವಾಗಿರುವ ಕಾಂಗ್ರೆಸ್ ಪಕ್ಷವು ಬಿಜೆಪಿಯ ಒಡಕಿನ ಲಾಭ ತಾನೇ ಪಡೆಯಬಹುದೆಂದೂ ಯಡಿಯೂರಪ್ಪನೊಂದಿಗೆ ಮ್ಯಾಚ್ ಫಿಕ್ಸಿಂಗಿಗೂ ಕೈಚಾಚಿ ಕುಳಿತಿದೆ. ಇವರೆಲ್ಲರೂ ಸೇರಿ ಮೂರನೆಯ ಅಥವಾ ನಾಲ್ಕನೆಯ ಶಕ್ತಿ ತಲೆ ಎತ್ತದಂತೆಯೂ ವರ್ತಿಸಬಹುದು. ಇದರಲ್ಲಿ ಜೆಡಿ(ಎಸ್) ಈ ಹಿಂದೆ ಇದ್ದ ಉತ್ಸಾಹ ಕಳೆದುಕೊಂಡು ನಿರ್ವಹಣೆಯ ರಾಜಕೀಯ ಲೆಕ್ಕಾಚಾರದಲ್ಲಿ ಕುಳಿತಂತಿದೆ.

ಇಂದು ಇಂತಹ ಸಂಯೋಜನೆಗಳು ಪರ್ಯಾಯವಲ್ಲ. ಜನತೆಯ ವಿಶ್ವಾಸ ಹಾಗೂ ಬಹುಮತವನ್ನೇ ಕಳೆದುಕೊಂಡಿರುವ ಬಿಜೆಪಿ ಸರಕಾರ ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆಯನ್ನು ಕಳೆದು ಕೊಂಡಿದೆ. ಆದ್ದರಿಂದ ಕೂಡಲೇ ರಾಜೀನಾಮೆ ಕೊಟ್ಟು ತೊಲಗಬೇಕು. ಚುನಾಯಿತ ಸರಕಾರ ಬರಬೇಕು. ಈ ದಿಕ್ಕಿನಲ್ಲಿ ಜನತೆಯ ಆಂದೋಲನಗಳು ನಡೆದು ಪರ್ಯಾಯ ರೂಪುಗೊಳ್ಳಬೇಕು.

ಅನಧೀಕೃತ ಮನೆಗಳ ಸಕ್ರಮ....

ಪುಟ 3 ರಿಂದ

ಅವರೆಲ್ಲರಿಗೂ ಹಕ್ಕು ಪತ್ರಗಳ ವಿತರಣೆ ಆಗಬೇಕು. ಆದರೆ ಉತ್ತರಕನ್ನಡ, ಶಿವಮೊಗ್ಗ, ಕೊಡಗು ಮೊದಲಾದ ಜಿಲ್ಲೆಗಳಲ್ಲಿ ಅರಣ್ಯ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಇರುವರು, ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಕರ್ನಾಟಕ ಭೂ ಕಂದಾಯ ತಿದ್ದುಪಡಿ ಮಸೂದೆಯಿಂದ ಅವರಿಗೆ ಪ್ರಯೋಜನವಾಗದು. ರಾಜ್ಯ ಸರ್ಕಾರ ಆ ಕುರಿತು ವಿಶೇಷ ಮುತುವರ್ಜಿವಹಿಸಿ ಅಂತಹ ಭೂಮಿಯನ್ನು ಅರಣ್ಯ ವ್ಯಾಪ್ತಿಯಿಂದ ಮುಕ್ತಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕಾಗಿದೆ. ಹಲವು ದಶಕಗಳಿಂದ ಅತಂತ್ರ ಸ್ಥಿತಿಯಲ್ಲಿ ಇರುವ ಇವರು ಆದಿವಾಸಿ ಗಿರಿಜನರೂ ಸೇರಿದಂತೆ ದಲಿತ, ಹಿಂದುಳಿದ ಹಾಗೂ ಆರ್ಥಿಕವಾಗಿ ದುರ್ಬಲ ವಿಭಾಗಗಳಿಗೆ ಸೇರಿದವರಾಗಿದ್ದಾರೆ.

ಸರ್ಕಾರದ ಅಂಕಿಅಂಶಗಳ ಪ್ರಕಾರವೇ ರಾಜ್ಯದಲ್ಲಿ 16 ಲಕ್ಷ ಜನ ಯಾವುದೇ ನಿವೇಶನವನ್ನು ಹೊಂದಿರದ ನಿವೇಶನ ರಹಿತರಿದ್ದಾರೆ. ಕುಟುಂಬಗಳ ಸಂಖ್ಯೆ ಬೆಳೆಯುತ್ತಿದಂತೆ ವಸತಿ ಸಮಸ್ಯೆಯೂ ಸಹಜವಾಗಿ ಬೆಳೆಯುತ್ತದೆ. ಸರ್ಕಾರ ರಾಜ್ಯದ ಎಲ್ಲಾ ನಿವೇಶನ ರಹಿತರಿಗೆ ನಿವೇಶನಗಳನ್ನು ಒದಗಿಸಲು ಭೂಮಿಯನ್ನು ಕಂಡುಕೊಳ್ಳಬೇಕಾಗಿದೆ. ಕೈಗಾರಿಕೆಗಳ, ಹೆದ್ದಾರಿಗಳ ವಿಮಾನ ನಿಲ್ದಾಣಗಳ ಹೆಸರಿನಲ್ಲಿ ಸರ್ಕಾರ ಖಾಸಗಿ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಎಷ್ಟೊಂದು ಆಸಕ್ತಿ ತೋರುತ್ತಿದೆ! ಅಷ್ಟೇ ಆಸಕ್ತಿ ನಿವೇಶನ ರಹಿತ ಬಡವರಿಗೆ ನಿವೇಶನಗಳನ್ನು ಒದಗಿಸಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ. ನಿವೇಶನಗಳಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಅನಿವಾರ್ಯವಾದಾಗ, ಅವರ ಒಪ್ಪಿಗೆ ಪಡೆದು, ಅವರಿಗೆ ಒಪ್ಪಿಗೆಯಾಗುವ ಬೆಲೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ಅಗತ್ಯ ಕಾನೂನು ಹಾಗೂ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು.


ನಗರ ಪ್ರದೇಶಗಳಿಗೂ ಈ ಕಾಯ್ದೆ ಅನ್ವಯವಾಗುವಂತೆ ಸೂಕ್ತ ಮಾರ್ಪಾಡು ಮಾಡಬೇಕು. ಪುರಸಭೆ, ನಗರಸಭೆ, ನಗರಪಾಲಿಕೆ ಹಾಗೂ ಮಹಾನಗರ ಪಾಲಿಕೆಗಳ ನಿರ್ದಿಷ್ಟ ವ್ಯಾಪ್ತಿಯೊಳಗಿನ ಅನಧೀಕೃತ ಮನೆ ನಿವೇಶನಗಳನ್ನು ಸಕ್ರಮಗೊಳಿಸುವಂತಿಲ್ಲ ಎಂಬ ಷರತನ್ನು ತೆಗೆದು ಹಾಕಬೇಕು.

ಆಹಾರ ಭದ್ರತೆಗಾಗಿ ಐದು ಕೋಟಿ ಸಹಿ ಸಂಗ್ರಹ

ನವೆಂಬರ್ 12ರಂದು ನವದೆಹಲಿಯಲ್ಲಿ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ನಾಯಕ ಸಭೆ ನಡೆಯಿತು. ಪ್ರಕಾಶ್ ಕಾರಟ್, ಎ.ಬಿ. ಬರ್ಧನ್, ಎಸ್. ಸುಧಾಕರ ರೆಡ್ಡಿ, ಸೀತಾರಾಂ ಯೆಚೂರಿ, ದೇಬಬ್ರತ ಬಿಸ್ವಾಸ್, ಎಸ್. ರಾಮಚಂದ್ರನ್ ಪಿಳ್ಳೆ, ಡಿ. ರಾಜ ಮತ್ತು ಅಬನಿ ರಾಯ್ ಹಾಜರಿದ್ದ ಈ ಸಭೆಯ ಬಳಿಕ ಈ ಕೆಳಗಿನ ಹೇಳಿಕೆಯನ್ನು ಪ್ರಕಟಿಸಲಾಯಿತು.

ಎಡಪಕ್ಷಗಳ ನೇತೃತ್ವದಲ್ಲಿ ಸಾರ್ವತ್ರಿಕ ವಿತರಣ ವ್ಯವಸ್ಥೆ-ರೇಷನ್ ವಿತರಣಾ ವ್ಯವಸ್ಥೆಗಾಗಿ ಮತ್ತು ಎಲ್ಲ ನಾಗರಿಕರಿಗೂ ಆಹಾರ ಸಿಗುವಂತೆ ಮಾಡುವ ಪರಿಣಾಮಕಾರಿ ಆಹಾರ ಭದ್ರತಾ ಕಾನೂನಿಗಾಗಿ ಪ್ರಬಲ ಆಂದೋಲನವನ್ನು ರೂಪಿಸಲು ಈ ಸಭೆಯಲ್ಲಿ ನಿರ್ಧರಿಸಲಾಯಿತು.

2012ರ ಜುಲೈನಿಂದ ಸೆಪ್ಟೆಂಬರ್‌ವರೆಗೆ ನಡೆದ ಆಹಾರ ಭದ್ರತಾ ಚಳವಳಿಗೆ ಸಮಾಜದ



ವಿವಿಧ ವಲಯಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದನ್ನು ಈ ಸಭೆಯಲ್ಲಿ ಗಮನಿಸಲಾಯಿತು.

ಈ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ಮತ್ತು ವಿಶಾಲ ಜನಸಮುದಾಯದತ್ತ ಕೊಂಡೊಯ್ಯಲು ಎಡಪಕ್ಷಗಳು ನಿರ್ಧರಿಸಿದ್ದು, ದೇಶವ್ಯಾಪಿ ಬೃಹತ್ ಸಹಿ ಸಂಗ್ರಹಣಾ ಚಳವಳಿಯನ್ನು ನಡೆಸಲು ತೀರ್ಮಾನಿಸಿವೆ. ಈ ಚಳವಳಿಯಲ್ಲಿ ಐದು ಕೋಟಿ ಜನರ ಸಹಿಯನ್ನು ಸಂಗ್ರಹಿಸಲಾಗುವುದು. ಡಿಸೆಂಬರ್ 2012ರಿಂದ ಜನವರಿ 2013ರ ವರೆಗೆ ಎರಡು ತಿಂಗಳಲ್ಲಿ ಎಡಪಕ್ಷಗಳ ಸದಸ್ಯರು ಮತ್ತು ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಆಹಾರದ ಹಕ್ಕಿಗಾಗಿ ವಿವಿಧ ಬೇಡಿಕೆಯನ್ನು ಒಳಗೊಂಡ ಮನವಿ ಪತ್ರಕ್ಕೆ ಸಹಿ ಸಂಗ್ರಹಿಸಬೇಕು ಎಂದು ಕರೆ ನೀಡಿದೆ.

ಸಹಿ ಸಂಗ್ರಹ ಚಳವಳಿಯ ಮನವಿ ಪತ್ರವನ್ನು ಅಂತಿಮವಾಗಿ ಕೇಂದ್ರ ಸರ್ಕಾರಕ್ಕೆ ನೀಡಲಾಗುವುದು. ಈ ಪತ್ರದಲ್ಲಿ ಒಳಗೊಂಡಿರುವ ಬೇಡಿಕೆಗಳು ಹೀಗಿವೆ.

ಬಿಪಿಎಲ್ ಮತ್ತು ಎಪಿಎಲ್ ಎಂಬ ತಾರತಮ್ಯ ಮಾಡದೆ ಎಲ್ಲರಿಗೂ ಆಹಾರ ಧಾನ್ಯಗಳ ಪೂರೈಕೆ ಮಾಡುವ ಸಾರ್ವತ್ರಿಕ ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ಜಾರಿಗೊಳಿಸಬೇಕು

35 ಕೆ.ಜಿ. ಆಹಾರ ಧಾನ್ಯವನ್ನು ಕಿ.ಲೋ.ವೊಂದಕ್ಕೆ 2 ರೂಪಾಯಿಗೆ ಮೀರದ ಕ್ರಯದಲ್ಲಿ ಸಾಮಗ್ರಿಗಳನ್ನು ಪೂರೈಸಬೇಕು. ಇದನ್ನು ಆಹಾರ ಭದ್ರತಾ ಕಾಯ್ದೆಯಡಿ ನೀಡಲು ಕ್ರಮ ಕೈಗೊಳ್ಳಬೇಕು.

ಸಾರ್ವಜನಿಕ ವಿತರಣ ವ್ಯವಸ್ಥೆಯಲ್ಲಿ ಯಾವುದೇ ನಗದು ವರ್ಗಾವಣೆ ವ್ಯವಸ್ಥೆ ಇರಬಾರದು.

ಬಾಗೇಪಲ್ಲಿ ಸಿಐಟಿಯು ಪ್ರಥಮ ಸಮ್ಮೇಳನ: ಕನಿಷ್ಟ ವೇತನ, ಸೇವಾ ಭದ್ರತೆಗೆ ಒತ್ತಾಯ

ಖಾಸಗೀಕರಣ, ಉದಾರೀಕರಣ ನೀತಿಗಳಿಂದ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ, ಕನಿಷ್ಠ ಸೇವಾಭದ್ರತೆಯೂ ದೊರೆಯದಂತಾಗಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ರಾಜ್ಯ ಘಟಕದ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಸಮ್ಮೇಳನದಲ್ಲಿ ಟೀಕಿಸಿದರು. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಬಾಗೇಪಲ್ಲಿ ತಾಲ್ಲೂಕು ಪ್ರಥಮ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕಾರ್ಮಿಕರ ಕಾನೂನುಗಳ ತಿದ್ದುಪಡಿ ಮಾಡಿ ಸೇವಾಭದ್ರತೆ, ಸೌಲಭ್ಯವನ್ನು ವಂಚಿಸುತ್ತಲೇ ಬರುತ್ತಿದ್ದಾರೆ. ಪ್ರತಿಯೊಬ್ಬರಿಗೂ ಮೂಲ ಸೌಕರ್ಯ ಕಲ್ಪಿಸುವ ಮಾತನಾಡುವ ಸರ್ಕಾರಗಳು, ಕಾರ್ಮಿಕರಿಗೆ ಏಕೆ ಮೂಲ ಸೌಕರ್ಯ ಕಲ್ಪಿಸುತ್ತಿಲ್ಲ ಎಂದು ಪ್ರಶ್ನಿಸಿದರು. ಜಿಲ್ಲೆಯ ಅಂಗನವಾಡಿ ಕೇಂದ್ರಗಳನ್ನು ವೇದಾಂತ ಟ್ರಸ್ಟ್‌ಗೆ ವಹಿಸುವ ಕ್ರಮ ಖಂಡನಾರ್ಹ ಎಂದರು.

ರಾಜ್ಯದಲ್ಲಿ 10 ವರ್ಷಗಳಿಗೆ ಎರಡು ವರ್ಷ ಮಾತ್ರವೇ ಮಳೆ ಎಂಬ ಪರಿಸ್ಥಿತಿ ಇದೆ. ಬರಗಾಲ ಶಾಶ್ವತವಾಗಿರುವಾಗ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಇದರ ಶಾಶ್ವತ ಪರಿಹಾರ ಬೇಕಿಲ್ಲವಾಗಿದೆ. ಬರಗಾಲ ಇದ್ದರೆ ತಮಗೂ ತಮ್ಮ ಹಿಂಬಾಲಕರಿಗೂ ಲಾಭವೆಂಬಂತೆ ಸರ್ಕಾರ ನಡೆಸುವವರು ವರ್ತಿಸುತ್ತಿದ್ದಾರೆ. ಪಶ್ಚಿಮ ಘಟ್ಟಗಳಲ್ಲಿ ಸುರಿದು ಅರಬ್ಬಿ ಸಮುದ್ರದ ಪಾಲಾಗುವ ಸಾವಿರಾರು ಟಿಎಂಸಿ ಮಳೆ ನೀರನ್ನು ಬರಪೀಡಿತ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಮುಂತಾದ ಜಿಲ್ಲೆಗಳಿಗೆ ಹರಿಸಿ ಶಾಶ್ವತ ಕುಡಿಯುವ ನೀರು-ನೀರಾವರಿ ಒದಗಿಸಲು ಅವಕಾಶವಿದ್ದರೂ ಇದನ್ನೂ ಗಂಭೀರವಾಗಿ ಪರಿಗಣಿಸಿಲ್ಲ. ರಾಜ್ಯ ಸರ್ಕಾರ ಕೂಡಲೇ ಶಾಶ್ವತ ನೀರಾವರಿ ಯೋಜನೆಯ ಬಗ್ಗೆ ಗಮನ ಹರಿಸಬೇಕಿದೆ ಎಂದರು.

ಸಿಐಟಿಯು ಜಿಲ್ಲಾ ಘಟಕ ಅಧ್ಯಕ್ಷ ಸಿದ್ದಗಂಗಪ್ಪ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿ ಹಾಗೂ ಮೂಲ ಸೌಲಭ್ಯ ಕಲ್ಪಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜನವರಿಯಲ್ಲಿ 'ಅಂಗನವಾಡಿ ಕೇಂದ್ರ ಬಂದ್' ಮಾಡಲಾಗುವುದು ಎಂದರು.

ತಾಲ್ಲೂಕು ಅಂಗನವಾಡಿ ನೌಕರರ ಸಂಘ, ಆಶಾ ಕಾರ್ಯಕರ್ತೆಯರ ಸಂಘ, ಹಮಾಲಿ ಸಂಘ, ಬಿಸಿಯೂಟ ನೌಕರರ ಸಂಘ, ಗ್ರಾಮ ಪಂಚಾಯಿತಿ ನೌಕರರ ಸಂಘ, ಟೋಲ್‌ಗೇಟ್ ವರ್ಕರ್ಸ್ ಯೂನಿಯನ್‌ನ ಮುಂತಾದ ಅಸಂಘಟಿತ ಕಾರ್ಮಿಕರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಿಐಟಿಯು ಜಿಲ್ಲಾ ಮುಖಂಡ ಮುಸ್ತಾಫ, ಭಾಗ್ಯಮ್ಮ ಜಿಲ್ಲಾ ಘಟಕದ ಉಪಾಧ್ಯಕ್ಷ ವೆಂಕಟೇಶ್‌ಬಾಬು, ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷೆ ವಿಜಯಭಾರತಿ, ಖಜಾಂಚಿ ರಾಧಮ್ಮ, ಬಿಸಿಯೂಟ ನೌಕರರ ಸಂಘದ ಗೋವಿಂದಮ್ಮ, ಕಾರ್ಯದರ್ಶಿ ಸುರೇಶ್‌ಸಿಂಗ್ ಇತರರು ಉಪಸ್ಥಿತರಿದ್ದರು.

ಪಶ್ಚಿಮ ಬಂಗಾಳ: ವಿಧಾನ ಸಭೆಯೊಳಗೇ ಸಿಪಿಐ(ಎಂ) ಶಾಸಕರ ಮೇಲಿನ ಹಲ್ಲೆ

ಸಿಪಿಐ(ಎಂ) ಶಾಸಕರ ಮೇಲೆ ಪಶ್ಚಿಮ ಬಂಗಾಳದ ವಿಧಾನಸಭಾ ಅಧಿವೇಶನದಲ್ಲಿ ಆಡಳಿತರೂಢ ತೃಣಮೂಲ ಕಾಂಗ್ರೆಸ್‌ನ ಶಾಸಕರಿಂದ ದೈಹಿಕ ಹಲ್ಲೆನಡೆದಿದ್ದು ಈ ಹಲ್ಲೆಯಲ್ಲಿ ಸಿಪಿಐ(ಎಂ) ಶಾಸಕರುಗಳಾದ ಗೌರಂಗ ಚಟರ್ಜಿ ಮತ್ತು ದೇಬೋಲಿನ ಹೆಂಬ್ರಾಮ್ ಎಂಬುವವರು ತೀವ್ರವಾಗಿ ಗಾಯಗೊಂಡಿದ್ದು ಅವರುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಸದನದೊಳಗೆ ಅನುಚಿತ ವರ್ತನೆ ತೋರಿಸಿರುವ ಆಡಳಿತಾರೂಢ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವ ಬದಲಾಗಿ ಸಿಪಿಐ(ಎಂ)ನ ಮೂವರು ಶಾಸಕರನ್ನು ಪ್ರಸಕ್ತ ಅಧಿವೇಶನದಿಂದಲೇ ಅಮಾನತು ಮಾಡುವ ಮೂಲಕ ಆಡಳಿತರೂಢ ತೃಣಮೂಲ ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷಗಳ ಸಾಂವಿಧಾನಿಕ ಹಕ್ಕುಗಳನ್ನು ನಿರಾಕರಿಸಿದೆ. ಶಾಸನ ಸಭೆಗಳಲ್ಲಿ ವಿರೋಧ ಪಕ್ಷಗಳನ್ನು ನಡೆಸಿಕೊಳ್ಳುವ ಆಡಳಿತರೂಢ ತೃಣಮೂಲ ಕಾಂಗ್ರೆಸ್‌ನ ಇಂತಹ ಸಂವಿಧಾನ ವಿರೋಧಿ ಮತ್ತು ಪ್ರಜಾತಂತ್ರ ವಿರೋಧಿ ನಡವಳಿಕೆಯನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ. ಹಾಗೂ ಸಿಪಿಐ(ಎಂ) ಶಾಸಕರ ವಿರುದ್ಧ ಕೈಗೊಂಡಿರುವ ಅಸಾಂವಿಧಾನಿಕ ಅಮಾನತು ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಒತ್ತಾಯಿಸಿದೆ. ಅಲ್ಲದೇ ಶಾಸನ ಸಭೆಗಳಲ್ಲಿ ಪ್ರತಿಪಕ್ಷಗಳ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಬೇಕೆಂದು ಆಗ್ರಹಿಸಿದೆ.

ಜೊತೆಗೆ ಈ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ಸಂಘಟನೆಯು ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ ಹಲ್ಲೆಗೊಳಗಾಗಿರುವ ಸಿಪಿಐಎಂನ ಶಾಸಕರೂ ಮತ್ತು ಮಾಜಿ ಸಚಿವರಾದ ಬುಡಕಟ್ಟು ಮಹಿಳೆ ದೇಬೋಲಿನ ಹೆಂಬ್ರಾಮ್‌ರನ್ನು ತೃಣಮೂಲ ಕಾಂಗ್ರೆಸ್‌ನ ಪುರುಷ ಶಾಸಕರು ಎಳೆದಾಡಿರುವುದು



ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಂತ ಅನಾಗರಿಕವಾದದ್ದಾಗಿದ್ದು ಶಾಸನ ಸಭೆಯಲ್ಲಿ ಕೆಲವೇ ಕೆಲವು ಬುಡಕಟ್ಟು ಶಾಸಕರಿದ್ದು ಈ ವಿಭಾಗದ ಜನರನ್ನು ಪ್ರತಿನಿಧಿಸುವ ಶಾಸಕರ ಮೇಲೆ ಹಲ್ಲೆ ನಡೆಸುವ ಮೂಲಕ ಆಡಳಿತರೂಢ ತೃಣಮೂಲ ಕಾಂಗ್ರೆಸ್ ಮತ್ತು ಮುಖ್ಯಮಂತ್ರಿ ಮಮತಾಬ್ಯಾನರ್ಜಿಯವರ ನೈಜ ಬಣ್ಣ ಬಯಲಾಗಿದೆ ಎಂದು ಆರೋಪಿಸಿದ್ದಾರೆ. ಮತ್ತು ಸಿಪಿಐಎಂ ಶಾಸಕರ ಮೇಲೆ ಅಲ್ಲಿ ನಡೆಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

"ಡಿಸೆಂಬರ್ 6: ಕರಾಳ ಕೃತ್ಯವನ್ನು ಎಂದೂ ಮರೆಯಲು ಅಸಾಧ್ಯ"

ಮಂಗಳೂರು ಸೌಹಾರ್ದ ದಿನಾಚರಣೆಯಲ್ಲಿ ಕಾಂ. ಮಾಧವ



ವರದಿ : ವಾ.ಉ.

ಹಿಂದೂತ್ವವಾದಿ ಶಕ್ತಿಗಳು ಕೋಮುದ್ವೇಷದ ಪ್ರಚಾರ ನಡೆಸಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಧ್ವಂಸ ಮಾಡಿ 20 ವರ್ಷಗಳಾಗಿವೆ. ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಜತನದಿಂದ ಕಾಪಾಡಿಕೊಂಡು ಬಂದ ಜಾತ್ಯಾತೀತತೆ ಮತ್ತು ಸೌಹಾರ್ದತೆಗೆ ಮರ್ಮಾಘಾತ ನೀಡಿದ ಈ ಕರಾಳ ಕೃತ್ಯವನ್ನು ಎಂದೂ ಮರೆಯಲು ಅಸಾಧ್ಯ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಹೇಳಿದರು.

ಸಿಪಿಐ(ಎಂ) ಮಂಗಳೂರು ನಗರ ಸಮಿತಿ ವತಿಯಿಂದ ನಡೆದ ಸೌಹಾರ್ದ ಸಂಕಲ್ಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

★

ವಿವೇಕಾನಂದರ ಪ್ರಗತಿಪರ ಚಿಂತನೆಗಳ ಬಗ್ಗೆ ಎಸ್‌ಎಫ್‌ಐ ವಿಚಾರಗೋಷ್ಠಿ

ಸ್ವಾಮೀ ವಿವೇಕಾನಂದರ 150ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸಾಹಿತಿ ಅಧ್ಯಾಪಕ ಗಣ್ಯರನ್ನೊಳಗೊಂಡ ಆಚರಣ ಸಮಿತಿಯೊಂದನ್ನು ರಚಿಸಲಾಗಿದ್ದು, ಸಮಿತಿ ವತಿಯಿಂದ ಡಿಸೆಂಬರ್ 8 ರಂದು ಮಂಗಳೂರಿನಲ್ಲಿ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಜಿಲ್ಲೆಯ ವಿವಿಧ ಕಾಲೇಜುಗಳ ಮುನ್ನೂರು ವಿದ್ಯಾರ್ಥಿಗಳಲ್ಲದೆ ಸಾರ್ವಜನಿಕರೂ ಇಡೀ ದಿನದ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದರು; ಚರ್ಚೆ ಸಂವಾದಗಳಲ್ಲೂ ಭಾಗವಹಿಸಿ ವಿಚಾರಗೋಷ್ಠಿಗಳನ್ನು ಯಶಸ್ವಿಗೊಳಿಸಿದರು.

ಹಿರಿಯ ಚಿಂತಕ ಜ.ಹೊ.ನಾರಾಯಣ ಸ್ವಾಮಿ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ಆಚರಣ ಸಮಿತಿಯ ಗೌರವಾಧ್ಯಕ್ಷ ಪ್ರೊ.ಕೆ.ರಾಜೇಂದ್ರ ಉಡುಪ, ಕಾರ್ಯಾಧ್ಯಕ್ಷ ನ್ಯಾಯವಾಗಿ ಯಶವಂತ ಮರೋಳಿ, ಎಸ್‌ಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷ ಅನಂತ ನಾಯ್ಕ್ ಆಚರಣ ಸಮಿತಿ ಪ್ರಧಾನ ಕಾರ್ಯದರ್ಶಿ ಜೀವನ್‌ರಾಜ್ ಕುತ್ತಾರ್. ಎಸ್‌ಎಫ್‌ಐ ದ.ಕ.ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ರಜಾಕ್ ಮೊಂಟೆಪದವು ವೇದಿಕೆ ಮೇಲಿದ್ದರು.

ಮೊದಲ ಗೋಷ್ಠಿಯಲ್ಲಿ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ವಿವೇಕಾನಂದರ ರಾಜಕೀಯ ಸಾಮಾಜಿಕ ಚಿಂತನೆಗಳ ಬಗ್ಗೆ ವಿಚಾರ ಮಂಡನೆ ಮಾಡಿದರು. ಪ್ರೊ.ನಾಗಪ್ಪ ಗೌಡ ಪ್ರತಿಕ್ರಿಯೆ ನೀಡಿದರು. ಹಿರಿಯ ಶಿಕ್ಷಣ ತಜ್ಞ ಸಿ.ಎಚ್.ಕೃಷ್ಣ ಶಾಸ್ತ್ರಿ ಬಾಳಿಲ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎರಡನೆ ಗೋಷ್ಠಿಯಲ್ಲಿ ಹಿರಿಯ ಚಿಂತಕರಾದ ಪ್ರೊ.ಕೆ.ಎಸ್.ಭಗವಾನ್ ಅವರು 'ವೈದಿಕತೆಯ ವಿರುದ್ಧ ವಿವೇಕಾನಂದರು' ಎಂಬ ವಿಷಯದ ಕುರಿತು ವಿಚಾರ ಮಂಡಿಸಿದರು. ಪ್ರೊ.ಹಯವದನ ಉಪಾಧ್ಯ ಪ್ರತಿಕ್ರಿಯೆ ನೀಡಿದರು. ಚಿಂತಕ ಅದಮಾರು ಶ್ರೀಪತಿ ಆಚಾರ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಆಚರಣ ಸಮಿತಿಯಿಂದ ಪ್ರೌಢಶಾಲೆ, ಪದವಿಪೂರ್ವ ಮತ್ತು ಪದವಿ ವಿದ್ಯಾರ್ಥಿಗಳಿಗೆ ವಿವೇಕಾನಂದರನ್ನು ಕುರಿತಾಗಿ ಏರ್ಪಡಿಸಿದ ಭಾಷಣ ಮತ್ತು ಪ್ರಬಂಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. ಸುಮಾರು ನೂರರಷ್ಟು ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿ ಯುವಜನರ ಮಧ್ಯೆ ಇತ್ತೀಚಿನ ವರ್ಷಗಳಲ್ಲಿ ಕರಾವಳಿಯಲ್ಲಿ ನಡೆದ ಪರಿಣಾಮಕಾರಿ ವಿಚಾರ ಸಂಕಿರಣದಲ್ಲಿ ಇದು ಪ್ರಮುಖವಾದುದು ಎಂದು ಹೇಳಲು ಅರ್ಹವಾಗಿ ಈ ವಿಚಾರ ಸಂಕಿರಣ ನಡೆದಿರುತ್ತದೆ.

★

ವಿಶ್ವ ಮಾನವ ಹಕ್ಕು ದಿನ– ಕೈಕೋಳ ತೊಟ್ಟು ವಿಶಿಷ್ಟ ಪ್ರತಿಭಟನೆ

ರಾಜ್ಯದಲ್ಲಿ ಮಾನವ ಹಕ್ಕುಗಳನ್ನು ದಮನಿಸುವ ರೀತಿಯಲ್ಲಿ ಆಡಳಿತ ನಡೆಸಲಾಗುತ್ತಿದೆ. ವಿದ್ಯಾರ್ಥಿ ವಿಠಲ ಮಲೆಕುಡಿಯನನ್ನು ಕೈಕೋಳ ತೊಡಿಸಿ ಪರೀಕ್ಷೆ ಬರೆಯಿಸಿದ ಸರಕಾರ, ಇತ್ತೀಚೆಗೆ ಕಸ್ತೂರಿ ಚಾನಲ್ ವರದಿಗಾರ ನವೀನ್ ಸೂರಿಂಜೆಯನ್ನು ಸಂಘ ಪರಿವಾರದ ಹಿಂದೂ ಜಾಗರಣ ವೇದಿಕೆ ಸದಸ್ಯರು ಮಂಗಳೂರು ಹೋಂ ಸ್ಟೇಯಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆಸಿದ ಅಮಾನುಷ ದಾಳಿ ದಾಂದಲೆಯ ವಾಸ್ತವ ಘಟನೆಯ ಚಿತ್ರಣವನ್ನು ಜನರಿಗೆ ತೋರಿಸಿಕೊಟ್ಟಿರುವುದಕ್ಕೆ



ಆರೋಪಿಯಾಗಿ ಜೈಲಿಗೆ ತಳ್ಳಿದ್ದು ಮಾತ್ರವಲ್ಲ ಕೈಕೋಳ ತೊಡಿಸಿ ಒಯ್ಯುವ ಮೂಲಕ ರಾಜ್ಯದಲ್ಲಿ ಮಾನವ ಹಕ್ಕುಗಳನ್ನು ದಮನಿಸುವ ಕಾರ್ಯದಲ್ಲಿ ತೊಡಗಿದೆ. ರಾಜ್ಯದ ಬಿಜೆಪಿ

ಕುಂದಾಪುರ: ಪುರಸಭೆ ವ್ಯಾಪ್ತಿಯ ನಿವೇಶನ ರಹಿತರ ವಾರ್ಡು ಮಟ್ಟದ ಬೃಹತ್ ಸಮಾವೇಶ

ಬಂಗಾರ ಬಂಗ್ಲೆ ಕೇಳಲಿಕ್ಕೆ ನಿವೇಶನರಹಿತರು ಬಂದಿಲ್ಲ. ಒಂದು ತುಂಡು ಭೂಮಿ ಹಕ್ಕು ಕೊಡಿ ಎಂಬ ಬೇಡಿಕೆಗಾಗಿ ಹೋರಾಡಲು ಬಂದಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಹೇಳಿದರು. ಅವರು 25 ನವೆಂಬರ್ 2012 ರಂದು ಕುಂದಾಪುರ ಕಾರ್ಮಿಕ ಭವನದಲ್ಲಿ ಪುರಸಭಾ ವ್ಯಾಪ್ತಿಯ ಬಡ ನಿವೇಶನ ರಹಿತ ಅರ್ಜಿದಾರರ ವಾರ್ಡುಮಟ್ಟದ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಕುಂದಾಪುರ ಪುರಸಭಾ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಕಪ್ರಕೃಕೂಸಂ) ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಪುರಸಭಾ ವ್ಯಾಪ್ತಿಯ ಮದ್ದುಗುಡ್ಡೆ, ಚರ್ಚ್ ರಸ್ತೆ, ಒಂಭತ್ತು ದಂಡಿಗೆ, ಫೇರಿರಸ್ತೆ, ಭಗವಾನ್ ಬಿಲ್ಡಿಂಗ್ ರಸ್ತೆ, ವೆಸ್ಟ್ ಬ್ಲಾಕ್ ರಸ್ತೆ ಪ್ರದೇಶದ ಬಡ ನಿವೇಶನ ರಹಿತರ ಸಮಾವೇಶದಲ್ಲಿ, ಪುರಸಭಾ ವ್ಯಾಪ್ತಿಯ ಎಲ್ಲಾ ಅರ್ಜಿದಾರರು ಒಳಗೊಂಡು ಅಗಸ್ಟ್ 2 ರಂದು ಸಾಮೂಹಿಕವಾಗಿ ಪುರಸಭಾ ಕಛೇರಿ ಮುತ್ತಿಗೆ ಹಾಕುವುದರ ಮೂಲಕ ಸಲ್ಲಿಸಿದ 1323 ಅರ್ಜಿಗಳನ್ನು ಹಕ್ಕು ಪತ್ರ ಕೊಡುವುದಕ್ಕೆ ಒತ್ತಾಯಿಸುವ ಮುಂದಿನ ಹೋರಾಟವನ್ನು ತೀವ್ರಗೊಳಿಸಲು 14 ಡಿಸೆಂಬರ್ 2012 ಶುಕ್ರವಾರ ಪುರಸಭಾ ಕಛೇರಿ ಎದುರು ನಿವೇಶನ ರಹಿತರಿಂದ ಬೃಹತ್ ಧರಣಿ ಮುಷ್ಕರ ಹೋರಾಟ ಚಳವಳಿಯನ್ನು



ಹಮ್ಮಿಕೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ವೆಂಕಟೇಶ ಕೋಣಿ ಸಮಾವೇಶವನ್ನು ಉದ್ದೇಶಿಸಿ ಮಾತಾನಾಡುತ್ತಾ, ಕುಂದಾಪುರ ಪುರಸಭೆಯಿಂದ ವಾಜಪೇಯಿ ನಗರ ವಸತಿ ಯೋಜನೆಯಡಿ ಸ್ವೀಕರಿಸಿದ್ದ 847 ಅರ್ಜಿಗಳನ್ನು ಕಳೆದ 3 ವರ್ಷಗಳಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ನಿವೇಶನ ರಹಿತರ ಪಟ್ಟಿಯನ್ನು ಸಿದ್ದಪಡಿಸದೇ ಮೀನಾಮೇಷ ಎಣಿಸುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು. ಈ ನಿಟ್ಟಿನಲ್ಲಿ ಪುರಸಭಾ ವ್ಯಾಪ್ತಿಯ ಬಡ ನಿವೇಶನರಹಿತ ಅರ್ಜಿದಾರರಿಗೆ ನ್ಯಾಯ ಒದಗಿಸಲು ಬೀದಿಗಿಳಿದು ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಸರಕಾರವನ್ನು ಎಚ್ಚರಿಸಿದರು.

ಪುರಸಭಾ ವ್ಯಾಪ್ತಿಯ ನಿವೇಶನ ರಹಿತ ಹೋರಾಟ ಸಮಿತಿಯ ಸಂಚಾಲಕರು, ಪುರಸಭೆ ಮಾಜಿ ಅಧ್ಯಕ್ಷ ವಿ. ನರಸಿಂಹ, ಗುಣರತ್ನ, ಹಾಲಿ ಉಪಾಧ್ಯಕ್ಷೆ ಕಲಾವತಿ, ಕೆ. ಶಂಕರ, ಎ.ಅಶ್ವಂತ್ ಕುಮಾರ್, ಮಹಾಬಲ ವಡೇರಹೋಬಳಿ, ಹೆಚ್. ನರಸಿಂಹ, ಕೂಲಿಕಾರರ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ಕೋಶಾಧಿಕಾರಿ ನಾಗರತ್ನ ಉಪಸ್ಥಿತರಿದ್ದರು. ಪುರಸಭಾ ವ್ಯಾಪ್ತಿಯ ನಿವೇಶನ ರಹಿತರ ವಾರ್ಡುಮಟ್ಟದ ಹೋರಾಟ ಸಮಿತಿಗೆ ಬಾಲಕೃಷ್ಣ ಕೆ.ಎಮ್. ಅಧ್ಯಕ್ಷ, ಸುಧಾಕರ ಕಾಂಚನ್ ಕಾರ್ಯದರ್ಶಿ ಇವರನ್ನೊಳಗೊಂಡು 21 ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ವರದಿ: ವೆಂಕಟೇಶ ಕೋಣಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರಕಾರಗಳು ಒಂದು ಅಲ್ಪಮತವನ್ನು ಸದನದಲ್ಲಿ ಬಹುಮತವಾಗಿ ಪರಿವರ್ತಿಸುವ ತಂತ್ರದಲ್ಲಿ ನಿಷ್ಣಾತವಾಗಿವೆ. 'ಬಹುಮತವನ್ನು ತಯಾರಿಸುವ' ಇಂತಹ ಪರಿಣತಿ ಈ ಹಿಂದೆಯೂ ಬಯಲಿಗೆ ಬಂದಿತ್ತು. ಈ ಬಾರಿ ಸಂಸತ್ತಿನ ಚರ್ಚೆಗಳಲ್ಲಿ ಬಹಿರಂಗವಾಗಿಯೇ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಯನ್ನು ವಿರೋಧಿಸಿದವರು ಸಂಖ್ಯಾತ್ಮಕವಾಗಿ ಬಹುಮತದಲ್ಲಿದ್ದರು. ಆದರೆ, ಮತದಾನದ ವೇಳೆಯಲ್ಲಿ ಎಲ್ಲವೂ ತಿರುವು ಮುರುವು. ಆದರೂ ಯುಪಿಎ-2 ಸರಕಾರ ತನ್ನ ನಿರ್ಧಾರವನ್ನು ವಾಲ್‌ಮಾರ್ಟ್‌ನ ವಶೀಲಿಬಾಜಿ ಮತ್ತು ಇತರ ಚಟುವಟಿಕೆಗಳು, ಫೆಮಾ ನಿಯಮಾವಳಿಯ ತಿದ್ದುಪಡಿಗಳು ಈ ಎಲ್ಲ ಸಂಗತಿಗಳು ಮುಂದಿನ ಬಜೆಟ್ ಅಧಿವೇಶನದ ವೇಳೆ ಇತ್ಯರ್ಥಗೊಳ್ಳುವವರೆಗೆ ಕಾರ್ಯಗತಗೊಳಿಸುವಂತಿಲ್ಲ.

ಬಹುಮತ 'ತಯಾರಿ' ಏನೋ ಆಯಿತು
ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಮಾತ್ರ ಜಾರಿಯಾಗುವಂತಿಲ್ಲ

ಸೀತಾರಾಮ ಯೆಚೂರಿ

ಯುಪಿಎ-2 ಸರಕಾರ, ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, ಸಂಸತ್ತಿನ ಎರಡೂ ಸದನಗಳಲ್ಲಿ ವಾಲ್‌ಮಾರ್ಟ್ ವ್ಯವಹಾರ ಕುರಿತಂತೆ ತನಿಖೆ ನಡೆಸುವುದಾಗಿ ಪ್ರಕಟಿಸಲೇ ಬೇಕಾಗಿ ಬಂದಿದೆ. ಅಮೆರಿಕಾದ ಸೆನೆಟಿಗೆ ಜಾಗತಿಕ ಚಿಲ್ಲರೆ ವ್ಯಾಪಾರದ ದೈತ್ಯ ಕಂಪನಿ ವಾಲ್‌ಮಾರ್ಟ್ ಸಲ್ಲಿಸಿದ ಮಾಹಿತಿಯ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಲಾಬ್ಬಿ ಮಾಡುವ ಅಂದರೆ ತನ್ನ ಪರ ಶಾಸಕರ ಮನವೊಲಿಸುವ ವಶೀಲಿಬಾಜಿ ಚಟುವಟಿಕೆಗಳಿಗಾಗಿ 125 ಕೋಟಿ ರೂ.ಗಳನ್ನು ಖರ್ಚು ಮಾಡಿದೆ; ಇದರಲ್ಲಿ "ಭಾರತದಲ್ಲಿ ಹೂಡಿಕೆಗಳಿಗೆ ಮಾರುಕಟ್ಟೆ ಅವಕಾಶಗಳನ್ನು ಹೆಚ್ಚಿಸುವುದಕ್ಕೆ" ಸಂಬಂಧ ಪಟ್ಟ ಪ್ರಶ್ನೆಗಳೂ ಸೇರಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದ್ದು ಈ ಬಗ್ಗೆ ಒಂದು ಸ್ವತಂತ್ರ ಮತ್ತು ಸಮಯಬದ್ಧ ತನಿಖೆ ನಡೆಸಬೇಕೆಂಬ ಒತ್ತಾಯದ ಮೇಲೆ ಎರಡೂ ಸದನಗಳು ಮುಂದೂಡಲ್ಪಟ್ಟಿದ್ದವು.

ವಾಲ್‌ಮಾರ್ಟ್ ಪ್ರಕಾರ ಸದ್ಯಕ್ಕೆ ಭಾರತದ ಚಿಲ್ಲರೆ ಮಾರಾಟ ಮಾರುಕಟ್ಟೆಯ ಮೌಲ್ಯ ಸುಮಾರು 500 ಬಿಲಿಯ ಡಾಲರುಗಳು, ಅಂದರೆ 25ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು, 2020 ರ ವೇಳೆಗೆ ಇದು ದುಪ್ಪಟ್ಟಾಗುವ ನಿರೀಕ್ಷೆ ಇದೆಯಂತೆ. ಈ ತನಿಖೆಯನ್ನು ಬಜೆಟ್ ಅಧಿವೇಶನದ ಆರಂಭಕ್ಕೆ ಮೊದಲು ಪೂರ್ಣಗೊಳಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.


ಕಾನೂನುಬಾಹಿರ ಹೂಡಿಕೆ ?

ಇದೇ ವಾಲ್‌ಮಾರ್ಟ್ ಅಂಗಡಿಗಳ ಸರಣಿ ಹೊಂದಿರುವ ಮತ್ತು ತನ್ನ ಪಾಲುದಾರ ಭಾರತೀಯ ಕಂಪನಿ ಭಾರ್ತಿ ಎಂಟರ್‌ಪ್ರೈಸಸ್‌ನಲ್ಲಿ "ಗುಪ್ತ ರೀತಿಯಲ್ಲಿ ಮತ್ತು ಕಾನೂನುಬಾಹಿರವಾಗಿ" 100 ಮಿಲಿಯ ಡಾಲರುಗಳನ್ನು ಹೂಡಿದೆ ಎಂಬ ಆಪಾದನೆಗಳ ತನಿಖೆ ನಡೆಸಬೇಕು ಎಂದು ವಾಣಿಜ್ಯ ಮಂತ್ರಾಲಯ ರಿಝರ್ವ್ ಬ್ಯಾಂಕನ್ನು ಕೇಳಿರುವ ಬೆನ್ನ ಹಿಂದೆಯೇ ಈ ತನಿಖೆ ಬರುತ್ತಿದೆ. ಮಾಧ್ಯಮದ ವರದಿಗಳ ಪ್ರಕಾರ ಈ ಹೂಡಿಕೆ ಅದಕ್ಕೆ ಈ ಜಂಟಿ ಕಂಪನಿಯಲ್ಲಿ 49ಶೇ. ಪಾಲು ಕೊಡುತ್ತದೆ. ಸದ್ಯಕ್ಕೆ ಭಾರ್ತಿ ಸರಣಿ 12 ರಾಜ್ಯಗಳಲ್ಲಿ 186 ಬಹುಬ್ರಾಂಡ್ ಚಿಲ್ಲರೆ ಮಾರಾಟ ಸ್ಟೋರುಗಳನ್ನು ನಡೆಸುತ್ತಿದೆ. ಮಾರ್ಚ್ 2010 ರ ವೇಳೆಗಾಗಲೇ ವಾಲ್‌ಮಾರ್ಟ್ 100ಮಿಲಿಯ ಡಾಲರುಗಳನ್ನು (ಆಗಿನ ವಿನಿಮಯ ದರದಲ್ಲಿ 455 ಕೋಟಿ ರೂ.ಗಳು) ಹೂಡಿತ್ತು. ಈ ಹೂಡಿಕೆ ಮಾಡಿದ್ದು ಕಾನೂನು ಪ್ರಕಾರ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ನಿಷೇಧವಿದ್ದ ಸಮಯದಲ್ಲಿ. ಇಂತಹ ಕಾನೂನುಬಾಹಿರ ಬಂಡವಾಳ ಪೂರೈಕೆ ಡಿಸೆಂಬರ್ 31, 2009 ರ ವೇಳೆಗೆ 43 ಸ್ಟೋರುಗಳನ್ನು ಹೊಂದಿದ್ದ ಭಾರ್ತಿ ಚಿಲ್ಲರೆ ಮಾರಾಟ ಸರಣಿ ಡಿಸೆಂಬರ್ 31, 2011 ರ ವೇಳೆಗೆ 132 ಸ್ಟೋರುಗಳಿಗೆ ಹೆಚ್ಚಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟಿತು. ಈ ಅವಧಿಯಲ್ಲಿ ಅದರ ವಹಿವಾಟು ಕೂಡ 132 ಕೋಟಿ ರೂ.ಗಳಿಂದ 8 ಪಟ್ಟಾಗಿ 1,023 ಕೋಟಿರೂ.ಗಳಿಗೇರಿತು.

ಸರಕಾರ ತನಿಖೆ ನಡೆಸುವ ತನ್ನ ನಿರ್ಣಯವನ್ನು ಪ್ರಕಟಿಸುತ್ತಿದ್ದಾಗಲೇ 'ಪ್ಯಾಟ್ಟನ್ ಬೊಗ್ಸ್' ಎಂಬ ವಶೀಲಿಬಾಜಿ ಕಂಪನಿಯನ್ನು ಅಮೆರಿಕಾದಲ್ಲಿನ ಭಾರತೀಯ ರಾಯಭಾರಿ ಕಚೇರಿ 2008ರಲ್ಲಿ ಭಾರತ-ಅಮೆರಿಕ ಪರಮಾಣು ವ್ಯವಹಾರವನ್ನು ಕುದುರಿಸುವಲ್ಲಿ ನೆರವಾಗಲು ನೇಮಿಸಿ ಕೊಂಡಿತ್ತು ಎಂಬ ಸುದ್ದಿಯೂ ಬಂತು(ಇಂಡಿಯನ್ ಎಕ್ಸ್‌ಪ್ರೆಸ್, ಡಿಸೆಂಬರ್ 12). ಇದು ಜಾಗತಿಕ ಚಿಲ್ಲರೆ ಮಾರಾಟ ಸರಣಿ ಕಂಪನಿ ವಾಲ್‌ಮಾರ್ಟ್ ತನ್ನ ಕೆಲಸ ಮಾಡಿಸಿಕೊಳ್ಳಲು ನೇಮಿಸಿಕೊಂಡಿರುವ ವಶೀಲಿಬಾಜಿ ಕಂಪನಿಗಳಲ್ಲಿ ಒಂದು.

"ಹುಷಾರಿನ" ಕ್ರಿಯೆಗಳು !

"ನಾವು ಅಮೆರಿಕ ಭಾರತ ವ್ಯವಹಾರ ಮಂಡಳಿ(ಯುಎಸ್‌ಐಬಿಸಿ)ಗಾಗಿ ಭಾರತ-ಅಮೆರಿಕ ನಾಗರಿಕ ಪರಮಾಣು ಪ್ರತಿಪಾದನಾ ಮುತುವರ್ಜಿಯನ್ನು ಪ್ರತಿಪಾದಿಸಿದೆವು. ಇದರ ಫಲಿತಾಂಶವಾಗಿ ಅಮೆರಿಕಾದ ಕಾಂಗ್ರೆಸ್ ಹೆನ್ರಿ ಹೈಡ್ ಶಾಂತಿಯುತ ಅಣು ವಿದ್ಯುತ್ ಶಾಸನ, 2006ನ್ನು ಪಾಸು ಮಾಡಿತು. ಮತ್ತು ಅಮೆರಿಕ-ಭಾರತ ನಾಗರಿಕ ಪರಮಾಣು ಒಪ್ಪಂದಕ್ಕೆ 2008ರಲ್ಲಿ ಸಹಿ ಬಿತ್ತು. ಇದೊಂದು ಮೈಲಿಗಲ್ಲೆನಿಸಿದ ಒಪ್ಪಂದ" ಎಂದು 'ಪ್ಯಾಟ್ಟನ್ ಬೊಗ್ಸ್' ತನ್ನ ಅಂತರ್ಜಾಲ ತಾಣದಲ್ಲಿ ಹೇಳಿಕೊಂಡಿದೆ.



ತಮ್ಮ ಸಂಸ್ಥೆ "ಭಾರತೀಯ ಸರಕಾರದ ಅತ್ಯುನ್ನತ ಹಂತಗಳಲ್ಲಿ ಸಂಬಂಧಗಳನ್ನು ಇಟ್ಟುಕೊಂಡಿದ್ದು, ಅವರೊಂದಿಗೆ ನಾವು ಮಾಡುತ್ತ ನಮ್ಮ ಗಿರಾಕಿಗಳ ಹಿತಗಳನ್ನು ಆಯಕಟ್ಟಿನಲ್ಲಿ, ಪರಿಣಾಮಕಾರಿಯಾಗಿ ಪ್ರತಿಪಾದಿಸಲು ಮತ್ತು ಪರಿಹರಿಸಲು ನಿಕಟವಾಗಿ ಮತ್ತು ಹುಷಾರಿನಿಂದ ಕೆಲಸ ಮಾಡುತ್ತೇವೆ" ಎಂದೂ ಅದು ಹೇಳುತ್ತದೆ.

"ನಾವು ಅವರ ವ್ಯವಹಾರಗಳ ಅಗತ್ಯಗಳು ಭಾರತ ಸರಕಾರದೊಂದಿಗೆ ಸಂಧಿಸುವ ವಿಷಯಗಳಲ್ಲಿ ಇತರ ವಾಣಿಜ್ಯ ಹಿತಗಳನ್ನು ಪ್ರತಿನಿಧಿಸುತ್ತೇವೆ. ಉದಾಹರಣೆಗೆ, ನಮ್ಮ ಚಟುವಟಿಕೆಗಳಲ್ಲಿ, ಭಾರತೀಯ ಆಮದು ಸುಂಕದರಗಳನ್ನು ಇಳಿಸುವ ಅಥವ ನಿರ್ಮೂಲಗೊಳಿಸುವ ಉದ್ದೇಶದ ಪ್ರತಿಪಾದನಾ ಪ್ರಯತ್ನಗಳನ್ನು ನಡೆಸುವುದು, ಭಾರತದ ರಾಷ್ಟ್ರೀಯ ಮತ್ತು ರಾಜ್ಯ ಸರಕಾರಗಳಿಂದ ಲೈಸೆನ್ಸ್‌ಗಳು ಸಿಗುವಲ್ಲಿ ಅನುಕೂಲ ಕಲ್ಪಿಸುವುದು ಮತ್ತು ಹೆಚ್ಚೆಚ್ಚು ಆಕರ್ಷಕವಾಗುತ್ತಿರುವ ಭಾರತೀಯ ವಾಣಿಜ್ಯ ಮತ್ತು ಚಿಲ್ಲರೆ/ಬಳಕೆದಾರ ಮಾರುಕಟ್ಟೆಗಳಿಗೆ ಹೊಸದಾಗಿ ಪ್ರವೇಶಿಸುವವರಿಗೆ, ಸಂಪನ್ಮೂಲಗಳನ್ನು/ಸಂಬಂಧಗಳನ್ನು ಬೆಳೆಸಲು, ಮಾರುಕಟ್ಟೆ ಪಡೆಯಲು ನೆರವಾಗುವುದು ಸೇರಿವೆ" ಎಂದು 'ಭಾರತದಲ್ಲಿ ಕ್ರಿಯೆಗಳು' ಎಂಬ ಉಪಶಿರೋನಾಮೆಯ ಅಡಿಯಲ್ಲಿ ಈ ವೆಬ್‌ತಾಣ ಹೇಳುತ್ತದೆ.

ಬುಡಕ್ಕೆ ಹೋಗಬೇಕಾಗಿದೆ

ಕುತೂಹಲದ ಸಂಗತಿಯೆಂದರೆ, ಭಾರತದಲ್ಲಿ ಈ ಹಿಂದೆ ಅಮೆರಿಕಾದ ರಾಯಭಾರಿಯಾಗಿದ್ದ ಫ್ರಾಂಕ್ ವಿಸ್ನರ್ 2009ರಲ್ಲಿ ಈ ಸಂಸ್ಥೆಗೆ ವಿದೇಶ ವ್ಯವಹಾರಗಳ ಸಲಹೆಗಾರನಾಗಿ ಸೇರಿದ್ದಾರೆ. ಉನ್ನತ ಹಂತಗಳ ಅಮೆರಿಕನ್ ಕಾರ್ಪೊರೇಟ್ ಅಧಿಕಾರಿಗಳು ಉನ್ನತ ಹಂತಗಳಲ್ಲಿನ ಭಾರತೀಯ ಅಧಿಕಾರಿಗಳನ್ನು, ಮತ್ತು ಪ್ರಧಾನ ಮಂತ್ರಿಗಳು ಮತ್ತು ಇತರ ಪ್ರಮುಖ ಮಂತ್ರಿಗಳೂ ಸೇರಿದಂತೆ ರಾಜಕೀಯ ಮುಖಂಡರನ್ನು ಕೂಡ ಭೇಟಿ ಮಾಡುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಜಾಗತಿಕ ಕಾರ್ಪೊರೇಟ್ ದೈತ್ಯರು ತಮ್ಮ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಭಾರತೀಯ ಮಾರುಕಟ್ಟೆಯನ್ನು ಇನ್ನಷ್ಟು ತೆರೆಸಿಕೊಳ್ಳಲು ಕಾತುರರಾಗಿದ್ದಾರೆ. ಆದ್ದರಿಂದ ಈ ವಿಷಯದ ಬುಡಕ್ಕೆ ಹೋಗುವುದು ಅತ್ಯಗತ್ಯ. ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಹಿಂಜರಿತ ಮುಂದುವರಿಯುತ್ತಿದ್ದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತನ್ನ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವ ಅವಕಾಶಗಳನ್ನು ಸೀಮಿತಗೊಳಿಸುತ್ತಿರುವ ಸನ್ನಿವೇಶದಲ್ಲಿ ಇದಕ್ಕೆ ವಿಶೇಷ ಮಹತ್ವ ಬಂದಿದೆ. 2013 ರಲ್ಲಿ ಯುರೋಪಿಯನ್ ಒಕ್ಕೂಟದ ಆರ್ಥಿಕ ಬೆಳವಣಿಗೆ ಸೊನ್ನೆಯಿರುತ್ತದೆ. ಅಮೆರಿಕಾದ ಆರ್ಥಿಕ ಹೆಚ್ಚೆಂದರೆ ಒಂದು ಶೇಕಡಾ ಇರಬಹುದು ಎಂದು ಅಂದಾಜು ಮಾಡಲಾಗಿದೆ.

ಈ ತನಿಖೆ ವಾಲ್‌ಮಾರ್ಟ್‌ನ ಅಂತರ್ರಾಷ್ಟ್ರೀಯ ಕಾರುಬಾರುಗಳು ತೀವ್ರ ಪರೀಕ್ಷೆಗೆ ಒಳಗಾಗಿರುವ ಸಂದರ್ಭದಲ್ಲಿ

ಪುಟ 11 ಕ್ಕೆ

"ದೇಶದೊಳಗೆ ಒಂದೇ ಒಂದು ವಾಲ್‌ಮಾರ್ಟ್ ಸೂಪರ್ ಮಾರ್ಕೆಟನ್ನೂ ಆರಂಭಿಸಲೂ ಬಿಡುವುದಿಲ್ಲ"

ಪ್ರಕಾಶ್ ಕಾರಟ್

ಅದು ಡಿಸೆಂಬರ್ 11 ರ ಬೆಳಿಗ್ಗೆ. ಸ್ಥಳ ಬೆಂಗಳೂರು ನಗರದ ಸ್ವಾತಂತ್ರ್ಯ ಉದ್ಯಾನವನ. ಅಲ್ಲಿ ಬೃಹತ್ ಚಪ್ಪರದಡಿ ನೆರೆದ ಜನ. ರಾಜ್ಯದ ನಾನಾ ಜಿಲ್ಲೆ ತಾಲ್ಲೂಕುಗಳಿಂದ ಬಂದು ನೆರೆದ ಜನ. 'ಕಾಂಗ್ರೆಸ್ ಬಿಜೆಪಿಗಳನ್ನು ಕಿತ್ತೊಗೆಯಿರಿ– ಜನತೆಯನ್ನು ರಕ್ಷಸಿ' ಎಂಬ ಘೋಷಣೆಯಡಿ ರಾಜಕೀಯ ಜಾಗೃತಿಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರ್ನಾಟಕ ರಾಜ್ಯಾದ್ಯಂತ ನಡೆಸಿದ ರಾಜಕೀಯ ಜಾಥಾಗಳ ಸಮಾರೋಪ ಹಾಗೂ ರಾಜ್ಯ ಮಟ್ಟದ ರಾಜಕೀಯ ಸಮಾವೇಶ. ಅಲ್ಲಿ ಮಾತನಾಡಿದ ಮುಖಂಡರು ನೀಡಿದ ವಿಶ್ಲೇಷಣೆ ಏನು ? ಮಂಡಿಸಿದ ವಿಚಾರಗಳೇನು. ಮುಂದಿನ ಜನಪರ ಹೋರಾಟಗಳ ರೂಪು ರೇಷೆ ಏನು ಓದಿ.

ವರದಿ : ಲಿಂಗರಾಜು

ಕೇಂದ್ರದ ಯುಪಿಎ ಸರ್ಕಾರವು ಶ್ರೀಮಂತರ ಪರವಾದ ನೀತಿಗಳನ್ನು ಜಾರಿಗೊಳಿಸಲು ಬಡವರನ್ನು ಬಲಿಪಶುಗೊಳಿಸುತ್ತಿರುವುದರಿಂದ ಜನರು ಪರ್ಯಾಯವನ್ನು ಕಟ್ಟುವುದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಪ್ರತಿಪಾದಿಸಿದರು.

'ಕಾಂಗ್ರೆಸ್ ಬಿಜೆಪಿಗಳನ್ನು ಕಿತ್ತೊಗೆಯಿರಿ– ಜನತೆಯನ್ನು ರಕ್ಷಸಿ' ಎಂಬ ಘೋಷಣೆಯಡಿ ರಾಜಕೀಯ ಜಾಗೃತಿಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರ್ನಾಟಕ ರಾಜ್ಯಾದ್ಯಂತ ನಡೆಸಿದ ರಾಜಕೀಯ ಜಾಥಾಗಳ ಸಮಾರೋಪ ಹಾಗೂ ರಾಜ್ಯ ಮಟ್ಟದ ರಾಜಕೀಯ ಸಮಾವೇಶವನ್ನು ಉದ್ಘಾಟಿಸಿ ಕಾರಾಟ್ ಮಾತನಾಡುತ್ತಿದ್ದರು. ದೇಶದೊಳಗೆ ಒಂದೇ ಒಂದು ವಾಲ್ ಮಾರ್ಟ್ ಸೂಪರ್ ಮಾರ್ಕೆಟ್ ಅನ್ನು ಆರಂಭಿಸಲೂ ಸಹ ಎಡಪಕ್ಷಗಳು ಬಿಡುವುದಿಲ್ಲ ಎಂದೂ ಪ್ರಕಾಶ್ ಕಾರಟ್ ಅವರು ಇದೇ ಸಂದರ್ಭದಲ್ಲಿ ಘೋಷಿಸಿದರು.

ಆಮ್ ಆದ್ಮಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರ್ಕಾರ ಸತತ ಮೂರು ವರ್ಷಗಳಿಂದ ಏರುತ್ತಿರುವ ಆಹಾರ ಪದಾರ್ಥಗಳು ಸೇರಿದಂತೆ ಆಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಯಲು ವಿಫಲವಾಗಿದೆ. ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿಗೆ ಸತತವಾಗಿ ಮೂರು ವರ್ಷಗಳ ಕಾಲ ನಿರಂತರವಾಗಿ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಲೇ ಇವೆ. ಈ ಪರಿಯ ಬೆಲೆ ಏರಿಕೆಯಿಂದ ಜನಸಾಮಾನ್ಯರು ಸಂಕಷ್ಟಕ್ಕೀಡಾಗಿದ್ದಾರೆ. ಇಂದು ಜನರು ಸ್ವಾತಂತ್ರ್ಯದ ನಂತರದಲ್ಲಿ ಭಾರಿ ದುಬಾರಿ ಜೀವನ ನಡೆಸಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ಆದರೆ ಯುಪಿಎ ಸರ್ಕಾರಕ್ಕೆ ಇದರ ಬಗ್ಗೆ ಗಮನವೇ ಇಲ್ಲ. ಬದಲಿಗೆ ವಿದೇಶಿ ದೊಡ್ಡಬಂಡವಾಳಗಾರರಿಗೆ ರತ್ನಗಂಬಳಿ ಹಾಸುವುದರಲ್ಲಿ ಅದು ತಲ್ಲೀನವಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ದೇಶವು ಇಂದು ಕೃಷಿ ಕ್ಷೇತ್ರದಲ್ಲಿ ಭಾರಿ ಬಿಕ್ಕಟ್ಟು ಎದುರಿಸುತ್ತಿದೆ. ಜನರು ತಮ್ಮೂರಲ್ಲಿ ಕೆಲಸ ಸಿಗದೆ ನಗರ ಪ್ರದೇಶಗಳತ್ತ ಗುಳೇ ಹೋಗುತ್ತಿದ್ದಾರೆ. ಬಿಕ್ಕಟ್ಟಿನಿಂದ ಪಾರಾಗಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ದೇಶದ ಲಕ್ಷಾಂತರ ಜನರು ನಲುಗುತ್ತಿದ್ದಾರೆ. ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ರೈತರು, ಕೃಷಿ ಕಾರ್ಮಿಕರು ಅತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾರೆ. ಆದರೆ ಈ ಸರ್ಕಾರಗಳಿಗೆ ಇದ್ಯಾವುದರ ಪರಿವೆ ಇಲ್ಲ. ಆರ್ಥಿಕ ಸುಧಾರಣೆ ನೆಪದಲ್ಲಿ ಬಡವರ ಬದುಕನ್ನು ಇನ್ನಷ್ಟು ದುರ್ಬರಗೊಳಿಸುತ್ತಿವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.



ನಿರುದ್ಯೋಗ:

90 ರ ದಶಕದಿಂದ ಆರಂಭವಾಗಿರುವ ಆರ್ಥಿಕ ಸುಧಾರಣೆಗಳ ಪರಿಣಾಮದಿಂದ ಏರುತ್ತಿರುವ ನಿರುದ್ಯೋಗವನ್ನು ನಿವಾರಿಸಲು ಈ ಸರ್ಕಾರಗಳು ವಿಫಲವಾಗಿವೆ. ದೇಶದ ಜನಸಂಖ್ಯೆಯ ಆರ್ಧದಷ್ಟಿರುವ ಯುವಜನರು ಪ್ರಧಾನವಾಗಿ ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅದರಲ್ಲಿಯೂ ಅಸಂಘಟಿತ ವಲಯದಲ್ಲಿರುವ ಯುವಜನರ ಪರಿಸ್ಥಿತಿ ಕೆಟ್ಟದ್ದಾಗಿದೆ. ಆರ್ಥಿಕ ಸುಧಾರಣೆಗಳ ಪರಿಣಾಮದಿಂದ ಹೆಚ್ಚುತ್ತಿರುವ ನಿರುದ್ಯೋಗ ದಿಂದ ಯುವಜನರು ನಲುಗುತ್ತಿದ್ದಾರೆ.

ಕೆಲಸವಿಲ್ಲದ ಯುವಜನರ ಪಾಡು ಒಂದು ಕಡೆಯಾದರೆ ಕೆಲಸ ಮಡುತ್ತಿರುವವರ ಪಾಡು ಮತ್ತಷ್ಟು ಹೀನಾಯವಾಗಿದೆ. ಯಾವ ಸೌಲಭ್ಯವಿಲ್ಲದೆ ಲಕ್ಷಾಂತರ ಜನರು ದುಡಿಯುತ್ತಿದ್ದಾರೆ. ಕನಿಷ್ಟ ಕೂಲಿಯೂ ಇಲ್ಲದೆ, ಇಪಿಎಫ್ ಮತ್ತಿತರ ಯಾವ ಸೌಲಭ್ಯ ಇಲ್ಲದೆ ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಯುತ್ತಿದ್ದಾರೆ. ಅವರಿಗೆ ಸಿಕ್ಕಿರುವ ಕೆಲಸವಾದರೂ ಎಂಥದ್ದು. ಯಾವ ಭದ್ರತೆಯೂ ಇಲ್ಲದ್ದು. ಯಾವ ಸೌಲಭ್ಯವೂ ಇಲ್ಲದ್ದು. ಗುತ್ತಿಗೆ, ಹಂಗಾಮಿ ಕೆಲಸಗಳು. ಎಸ್‌ಎಂಎಸ್ ಮೂಲಕ ಕೆಲಸದಿಂದ ಕಿತ್ತು ಹಾಕುವ ಕೆಲಸಗಳನ್ನು, ಅಂಥ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲಾಗುತ್ತಿದೆ. ಇದೇ ಇವರ ಅರ್ಥಿಕ ಸುಧಾರಣೆಯ ಫಲಿತಾಂಶ ಎಂದೂ ಕಾರಾಟ್ ಅವರು ಜನವಿರೋಧಿ ನೀತಿಗಳನ್ನು ಖಂಡಿಸಿದರು.

ಏರುತ್ತಿರುವ ಬೆಲೆಗೆ ತಕ್ಕಂತೆ ಕೂಲಿ ಸಿಗದಿರುವುದರಿಂದ ಕೆಲಸ ಮಾಡುತ್ತಿರುವವರೂ ಕೂಡ ತತ್ತರಿಸಿದ್ದಾರೆ. ರೈತರು, ಕೃಷಿ ಕೂಲಿ ಕಾರ್ಮಿಕರು, ಕೂಲಿಕಾರರು, ಕಾರ್ಮಿಕರು ಎಲ್ಲರೂ ಬೆಲೆ ಏರಿಕೆಯಿಂದ ತತ್ತರಿಸಿರುವಾಗ ಕೇಂದ್ರ ಸರ್ಕಾರ ಮತ್ತೆ ಸುಧಾರಣೆ ಹೆಸರಿನಲ್ಲಿ ಜನರ ಜೀವನವನ್ನು ಗಂಭೀರ ಆಪಾಯಕ್ಕೆ ತಳ್ಳುತ್ತಿದೆ.

ಬಂಡವಾಳಿಗರಿಗೆ ತೆರಿಗೆ ವಿನಾಯಿತಿ

ಕಳೆದ ಬಜೆಟ್‌ನಲ್ಲಿ ಶ್ರೀಮಂತರಿಗೆ, ಬಂಡವಾಳಗಾರರರಿಗೆ ಸುಮಾರು 5.2 ಲಕ್ಷ ಕೋಟಿಯಷ್ಟು ತೆರಿಗೆ ವಿನಾಯಿತಿ ನೀಡಿದ ಯುಪಿಎ–2 ಸರ್ಕಾರವು ಬಡವರಿಗೆ ನೀಡುವ ಸಬ್ಸಿಡಿಯಲ್ಲಿ ಕಡಿತ ಮಾಡುತ್ತಿದೆ. ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆಗಳ ಮೇಲಿನ ಸಬ್ಸಿಡಿಯನ್ನು ಕಡಿತ ಮಾಡಿದೆ. ಇದರಿಂದ ಬೆಲೆ ಏರಿಕೆ ಮತ್ತಚ್ಚು ಹೆಚ್ಚಾಗಿದೆ.

ಇದು ಸಾಲದು ಎಂಬಂತೆ ಸಾರ್ವತ್ರಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತಿರುವ ಆಹಾರ ಪದಾರ್ಥಗಳ ಮೇಲಿನ ಸಬ್ಸಿಡಿಯನ್ನೂ ಸಹ ಕಡಿತಗೊಳಿಸುತ್ತಿದೆ. ಸಬ್ಸಿಡಿ ಮೂಲಕ ವಿತರಣೆಯನ್ನು ನಿಲ್ಲಿಸಿ ಸಬ್ಸಿಡಿಯನ್ನು ಜನರಿಗೆ ನಗದು ರೂಪದಲ್ಲಿ ನೀಡಲು ಸರ್ಕಾರ ತೀರ್ಮಾನಿಸಿದೆ. ಈ ಮೂಲಕ ಮತ್ತಷ್ಟು ಬಡವರ ಹಣವನ್ನೂ ಲೂಟಿ ಮಾಡಲು ಸರ್ಕಾರ ನಿರ್ಧರಿಸಿದಂತಿದೆ. ಮಾರುಕಟ್ಟೆಯಲ್ಲಿ ಆಹಾರ ವಸ್ತುಗಳ ಬೆಲೆ ನಿರಂತರವಾಗಿ ಏರುತ್ತಿರುತ್ತವೆ. ಆದರೆ ಸಬ್ಸಿಡಿ ಮಾತ್ರ ನಿಗದಿಯಾಗಿರುವಷ್ಟೇ ಇರುತ್ತದೆ. ಈ ಮೂಲಕ ಸರ್ಕಾರ ಜನರು ತಿನ್ನುವ ಅನ್ನದ ಮೇಲೂ ಕಣ್ಣು ಹಾಕಿದೆ ಎಂದರು.

ಯುಪಿಎ –2 ಸರ್ಕಾರ ಶ್ರೀಮಂತರ ಪರವಾದ ನೀತಿಗಳನ್ನು ಜಾರಿಗೊಳಿಸುವ ಮೂಲಕ ಭೂಮಿ, ಆಹಾರ ಪದಾರ್ಥಗಳು, ಆನಿಲ, ಪೆಟ್ರೋಲಿಯಂ ಸೇರಿದಂತೆ ಸಾಧ್ಯವಿರುವ ಎಲ್ಲಾ ಸಂಪತ್ತುಗಳನ್ನು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿದೆ. ಕೃಷ್ಣಾ–ಗೋದಾವರಿ ಕಣಿವೆಯ ಪೆಟ್ರೋಲಿಯಂ ನಿಕ್ಷೇಪದ ಹಂಚಿಕೆ ಹಗರಣದಿಂದ ಆರಂಭವಾಗಿ 2ಜಿ, ಕಲ್ಲಿದ್ದಲು, ಎಸ್=ಬ್ಯಾಂಡ್, ಕಾಮನ್ವೆಲ್ತ್ ಕ್ರೀಡಾಕೂಟ ಮತ್ತಿತರ ಹಗರಣಗಳ ಮೂಲಕ ಜನರ ಹಣವನ್ನು ಲೂಟಿ ಮಾಡಲಾಗಿದೆ.

ಇದರ ಜತೆಗೆ ಜೀವನ ನಡೆಸಲು ಸಣ್ಣ ಅಂಗಡಿ ನಡೆಸುವವರ ಮೇಲೂ ಸರ್ಕಾರ ಕಣ್ಣು ಹಾಕಿದ್ದು, ಚಿಲ್ಲರೆ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆಗೆ ಅವಕಾಶ ನೀಡುವ ಮೂಲಕ ಸುಮಾರು 4 ಕೋಟಿ ಚಿಲ್ಲರೆ ವ್ಯಾಪಾರಿ ಕುಟಂಬಗಳನ್ನು ಸರ್ಕಾರ ಬೀದಿಗೆ ತಳ್ಳುತ್ತಿದೆ. ವಿದೇಶಿ ಸೂಪರ್ ಮಾರ್ಕೆಟ್‌ಗಳ ಸರಣಿ ಬಹು ಬ್ರಾಂಡ್ ಸೂಪರ್ ಮಾಲ್‌ಗಳ ಆಗಮನದಿಂದ ಈ 4 ಕೋಟಿ ಕುಟುಂಬಗಳು ಕೆಲಸ ಕಳೆದುಕೊಂಡು ಜೀವನ ನಡೆಸುವುದು ಕಷ್ಟಕರವಾಗಲಿದೆ. ಈ ಸಣ್ಣ ಅಂಗಡಿಗಳನ್ನು ನಡೆಸುತ್ತಿರುವವರು ಯಾರು? ಬಹುತೇಕರು ದಲಿತರು ಹಾಗೂ ಅಲ್ಪಸಂಖ್ಯಾತರು.

ಚಿಲ್ಲರೆ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆಯಿಂದ ಈ ಸಮುದಾಯದ 4 ಕೋಟಿ ಕಟುಂಬಗಳ ಕನಿಷ್ಠ 20 ಕೋಟಿ ಜನರ ಜೀವನ ನಿರ್ವಹಣೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದರೆ ಸರ್ಕಾರ ಉದ್ಯೋಗ ಸೃಷ್ಟಿಯಾಗುತ್ತದೆ, ರೈತರ ಬೆಳೆಗಳಿಗೆ ಉತ್ತಮ ಬೆಲೆ ಸಿಗುತ್ತದೆ ಎಂದು ಹೇಳುತ್ತಿರುವುದು ವಾಲ್‌ಮಾರ್ಟ್ ಇರುವ ಯಾವುದಾದರೂ ಜಾಗದಲ್ಲಿ ಸರ್ಕಾರ ಹೇಳುವ ಕೆಲಸ ಆಗಿಯೇ ಇಲ್ಲ. ಅಲ್ಲಿ ಆಗದಿರುವುದು ಇಲ್ಲಿ ಆಗುತ್ತದೆ ಎಂದು ಸರ್ಕಾರ ಜನರಿಗೆ ಸುಳ್ಳು ಹೇಳುವ ಮೂಲಕ ಮೋಸ ಮಾಡುತ್ತಿದೆ ಎಂದರು.

ಈ ವರ್ಷದ ಸೆಪ್ಟಂಬರ್ 23 ರಂದು ದೇಶದ 8 ಪಕ್ಷಗಳು ಈ ಎಫ್‌ಡಿಐ ವಿರುದ್ಧ ಹೋರಾಟ ನಡೆಸಿವೆ. ಈ ಹೋರಾಟ ಮುಂದುವರೆಯುತ್ತದೆ. ದೇಶದೊಳಗೆ ಒಂದೇ ಒಂದು ವಾಲ್ ಮಾರ್ಟ್ ಮಳಿಗೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಆರಂಭಿಸಲೂ ಕೂಡ ಎಡಪಕ್ಷಗಳು ಬಿಡುವುದಿಲ್ಲ. ಆ ಮೂಲಕ 4 ಕೋಟಿ ಕುಟುಂಬಗಳ 20 ಕೋಟಿ ಜನರ ಬದುಕನ್ನು ರಕ್ಷಿಸುವ ಕೆಲಸವನ್ನು ಎಡಪಕ್ಷಗಳು ಮಾಡಲಿವೆ ಎಂದು ಘೋಷಿಸಿದರು.

ಯುಪಿಎ ಸರ್ಕಾರವು ಇಷ್ಟೆಲ್ಲಾ ಅನಾಚಾರಗಳನ್ನು ಮಾಡುತ್ತಿದ್ದರೂ ದೊಡ್ಡ ವಿರೋಧ ಪಕ್ಷವಾದ ಬಿಜೆಪಿಯು ಯಾವ ರಚನಾತ್ಮಕವಾದ ಹೋರಾಟಗಳನ್ನು ಸಂಘಟಿಸದೆ ನಾಟಕೀಯ ಕ್ರಮಗಳ ಮೂಲಕ ಜನರ ಕಣ್ಣಿಗೆ ಮಣ್ಣೆರಚುತ್ತಿದೆ. ಏಕೆಂದರೆ ಕಾಂಗ್ರೆಸ್ ಹಾಗೂ ಬಿಜೆಪಿಯ ಆರ್ಥಿಕ ನೀತಿಗಳು ಒಂದೇ ಅಗಿವೆ. ಹಾಗಾಗಿ ಬಿಜೆಪಿಯು ಕೂಡ ಜನರು ಎದುರಿಸುತ್ತಿರುವ ಸಂಕಷ್ಟಗಳಿಗೆ ಕಾರಣವಾಗುವ ನೀತಿಗಳಲ್ಲಿ ಪಾಲುದಾರನಾಗಿದೆ. ಬಿಜೆಪಿಯು ಅಧಿಕಾರ ನಡೆಸಿದ ಅವಧಿಯಲ್ಲಿಯೇ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮಾಡುವ ಮೂಲಕ ಬುನಾದಿ ಹಾಕಿಕೊಟ್ಟಿತು. ಇವತ್ತು ಹೆಚ್ಚಿನ ಭ್ರಷ್ಟಾಚಾರ ನಡೆದಿರುವ ಅನಿಲ ಹಾಗೂ ಕಲ್ಲಿದ್ದಲು ಹಗರಣ ನಡೆದಿದ್ದು ಬಿಜೆಪಿ ಆಡಳಿತದ ಕಾಲದಲ್ಲಿ ಎನ್ನುವುದನ್ನು ಮರೆಯುವಂತಿಲ್ಲ. ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಕೇಂದ್ರದಲ್ಲಿ ಕಾಂಗ್ರೆಸ್ ಲೂಟಿ ಹೊಡೆಯುತ್ತಿದ್ದರೆ ರಾಜ್ಯದಲ್ಲಿ ಬಿಜೆಪಿಯು ಲೂಟಿ ಹೊಡೆಯುತ್ತಿದೆ. ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಸೇರಿದಂತೆ ಹಲವಾರು ಮಂತ್ರಿಗಳು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಜೈಲಿಗೆ ಹೋಗಿ ಬಂದಿದ್ದರೆ ಎಂದು ಪ್ರಕಾಶ ಕಾರಟ್ ಹೇಳಿದರು.

ಜನಪರ ಆಡಳಿತ ನೀಡಲು ವಿಫಲವಾಗಿರುವುದರಿಂದ ಹಾಗೂ ಭ್ರಷ್ಟಾಚಾರ ದಲ್ಲಿ ಮುಳುಗಿರುವ ರಾಜ್ಯ ಬಿಜೆಪಿ ಸರ್ಕಾರವು ತನ್ನ ವಿಫಲತೆಯನ್ನು ಜನರಿಂದ ಮರೆಮಾಚಲು ಹಿಂದುತ್ವದ ಹೆಸರಿನಲ್ಲಿ ಕೋಮುಗಲಭೆಗಳನ್ನು ಹುಟ್ಟು ಹಾಕುತ್ತಿದೆ. ಈ ಹಿನ್ನೆಲೆಯಲ್ಲಿಯೇ ಬೆಳಗಾವಿ, ಕರಾವಳಿಗಳಲ್ಲಿ ಕೋಮು ಗಲಭೆಗಳಾಗಿವೆ. ಇದು ಕರ್ನಾಟಕ ಮಾತ್ರವಲ್ಲದೆ ಬಿಜೆಪಿಯು ಆಡಳಿತವಿರುವ ಎಲ್ಲಾ ರಾಜ್ಯಗಳಲ್ಲಿಯೂ ನಡೆಯುತ್ತಿದೆ. ಗುಜರಾತ್, ಮಧ್ಯಪ್ರದೇಶ, ಛತ್ತೀಶ್‌ಘಡ ಮುಂತದ ಕಡೆ ಬಿಜೆಪಿಯು ಈ ತಂತ್ರ ಬಳಸುತ್ತಿದೆ ಎಂದರು.

ಧೋರಣೆ ಆಧಾರಿತ ಜನಪರ ಪರ್ಯಾಯ

ತನ್ನ ಭ್ರಷ್ಟಾಚಾರವನ್ನು ಮರೆ ಮಾಚಲು ಬಿಜೆಪಿಯು ಹಿಂದುತ್ವವನ್ನು ಹಾಗೂ ಕಾಂಗ್ರೆಸ್ ಜಾತ್ಯತೀತತೆಯನ್ನು ಜನರಿಗೆ ಹೇಳಲು ಬಯಸುತ್ತಿವೆ. ಆದರೆ ಇವೆರಡೂ ಕೂಡ ಒಂದೇ ಆರ್ಥಿಕ ನೀತಿ ಹೊಂದಿರುವುದರಿಂದ ಎರಡೂ ಪಕ್ಷಗಳನ್ನು ತಿರಸ್ಕರಿಸಬೇಕು. ಇಲ್ಲದಿದ್ದರೆ ಜನರಿಗೆ ಉಳಿಗಾಲವಿಲ್ಲ. ಅದಕ್ಕಾಗಿ ಜನರು ಪರ್ಯಾಯ ಹುಡುಕಬೇಕಾಗಿದೆ ಎಂದರು.

ಪರ್ಯಾಯ ಎಂದರೆ ಕೋಮುವಾದಕ್ಕೆ ವಿರುದ್ಧವಾಗಿ ಜಾತ್ಯತೀತತೆ. ಕಾಂಗ್ರೆಸ್-ಬಿಜೆಪಿಯು ಜನವಿರೋಧಿ ನೀತಿಗಳಿಗೆ ವಿರುದ್ಧವಾಗಿ ರೈತ, ಕಾರ್ಮಿಕ, ಕೂಲಿಕಾರರ ಪರವಾದ ನೀತಿಯಾಗಿದೆ. ಅದು ಒಂದು ಪ್ರಜಾಸತ್ತಾತ್ಮಕ ನೀತಿಯಾಗಿರುತ್ತದೆ. ಚುನಾವಣೆಯಲ್ಲಿ ಜನಪರ ನೀತಿ ಹೆಸರು ಹೇಳಿ ಆಧಿಕಾರಕ್ಕೆ ಬಂದಾಗ ಮತ್ತದೆ ಜನವಿರೋಧಿ ನೀತಿಗಳ ಜಾರಿ ಮಾಡುವ ಅವಕಾಶವಾದಿಗಳಿಗೆ ವಿರುದ್ಧವಾಗಿ ಜನರು ಪರ್ಯಾಯ ಕಟ್ಟಬೇಕು ಎಂದರು.

ಜನರು ಹಸಿವಿನಿಂದ ಸಾಯುವಂಥ ನೀತಿ ತರುತ್ತಿರುವ ಯುಪಿಎ ಸರ್ಕಾರದ ವಿರುದ್ಧ ಆಹಾರ ಭದ್ರತಾ ಕಾಯಿದೆ ಜಾರಿಗಾಗಿ 5 ಲಕ್ಷ ಸಹಿ ಸಂಗ್ರಹಿಸಿ ಪ್ರಧಾನಮಂತ್ರಿಗೆ ಸಲ್ಲಿಸಲಾಗುವುದು. 35 ಕೆಜಿ ಆಹಾರಧಾನ್ಯವನ್ನು ಪ್ರತಿ ಕೆಜಿಗೆ 2.00 ರೂಗಿಂತ ಹೆಚ್ಚಿಲ್ಲದಂತೆ ಒದಗಿಸಬೇಕು ಎಂಬುದು ಪ್ರಮುಖ ಒತ್ತಾಯವಾಗಿದೆ. ಕಾರ್ಮಿಕ ವಿರೋಧಿ-ದೇಶವಿರೋಧಿ ನೀತಿಗಳ ವಿರುದ್ದ ಫೆಬ್ರವರಿ 21,22 2013 ರಂದು ದೇಶದ ಕಾರ್ಮಿಕ ವರ್ಗ ನಡೆಸುತ್ತಿರುವ ಎರಡು ದಿನಗಳ ಆಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಸಿಪಿಐ(ಎಂ) ಪಕ್ಷ ಮತ್ತು ಎಡಪಕ್ಷಗಳು ಬೆಂಬಲಿಸಲಿವೆ ಎಂದು ಪ್ರಕಾಶ್ ಕಾರಟ್ ಅವರು ಹೇಳಿದರು.

ಭೂಮಿ, ಆಹಾರ, ನಿವೇಶನ, ಶಿಕ್ಷಣ, ಉದ್ಯೋಗ, ಆರೋಗ್ಯ ಹಕ್ಕಿಗಾಗಿ ಆಖಿಲ ಭಾರತ ಮಟ್ಟದ ಎರಡು ಜಾಥಾಗಳನ್ನು ಮಾರ್ಚಿಯಲ್ಲಿ ಸಂಘಟಿಸಲಾಗುವುದು. ಎರಡೂ ಜಾಥಾಗಳು ದೆಹಲಿಯಲ್ಲಿ ಸಂಗಮವಾಗಲಿದ್ದು, ಕನಿಷ್ಠ 5 ಲಕ್ಷ ಜನರನ್ನು ಸೇರಿಸಿ ಬೃಹತ್ ರ‍್ಯಾಲಿ ನಡೆಸಲಾಗುವುದು. ಆ ಸಂದರ್ಭದಲ್ಲಿ 5 ಕೋಟಿ ಸಹಿಯುಳ್ಳ ಮನವಿಯನ್ನು ಪ್ರಧಾನಮಂತ್ರಿಗೆ ಸಲ್ಲಿಸಿ ಜನರ ಅಹವಾಲು ಬಗೆಹರಿಸುವಂತೆ ಆಗ್ರಹಿಸಲಾಗುವುದು ಎಂದು ಅವರು ತಿಳಿಸಿದರು.

ನಂತರ ಮಾತನಾಡಿದ ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ರಾಜ್ಯದ ಬಿಜೆಲಿ ಸರಕಾರದ ದುರಾಡಳಿತವನ್ನು ಎಳೆ ಎಳೆಯಾಗಿಬಿಡಿಸಿಟ್ಟರು.

ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿದ್ದೇ ಅಕ್ರಮ ಮಾರ್ಗಗಳಿಂದ, ನಂತರದಲ್ಲಿ ಅದು ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುತ್ತಲೇ ಬಂತು. ಬಹುಮತವನ್ನು ಗಳಿಸಿಕೊಳ್ಳುವಲ್ಲಿ ಅದು ಆರಂಭಿಸಿದ ಆಪರೇಷನ್ ಕಮಲವೆಂಬ ಪಕ್ಷಾಂತರದ ಅನೈತಿಕತೆಯ ಪರಿಪಾಠವನ್ನು ಹುಟ್ಟುಹಾಕಿತು. ಸದನವನ್ನು ಅಪವಿತ್ರಗೊಳಿಸಿತು. ಅತೀ ಮಹತ್ವದ ಮಸೂದೆಗಳು ಚರ್ಚೆಯಿಲ್ಲದೇ ಅಂಗೀಕಾರವಾದವು. ಅಭಿವೃದ್ಧಿಯ ಹೆಸರಿನಲ್ಲಿ ರಾಜ್ಯದ ಜನತೆಯ ಮೇಲೆ 1.25 ಲಕ್ಷ ಕೋಟಿ ರೂ. ಸಾಲದ ಹೊರೆಯನ್ನು ಬಿಜೆಪಿ ಹೇರಿದೆ. ಯಡಿಯೂರಪ್ಪನವರು ಅನುಸರಿಸಿದ ಉದಾರೀಕರಣದ ನೀತಿಗಳಿಂದಾಗಿ ಕೃಷಿ ಮತ್ತು ಕೈಗಾರಿಕೆ ರಂಗಗಳು ದಿವಾಳಿಯಾದವು. ರೈತರ ಆತ್ಮಹತ್ಯೆಗಳು ನಿಲ್ಲಲೇ ಇಲ್ಲ. ಉದ್ಯೋಗ ಹುಡುಕಿಕೊಂಡು ಗ್ರಾಮೀಣ ಜನತೆ ವಲಸೆ ಹೋಗಬೇಕಾಯಿತು ಎಂದು ಅವರು ಸಂಕಷ್ಟಗಳ ಬಗ್ಗೆ ವಿವರಿಸಿದರು.



ಬಿಜೆಪಿ ಆಡಳಿತದಲ್ಲಿ ನಡೆದ ಭ್ರಷ್ಟಾಚಾರದ ಹಗರಣಗಳನ್ನು ವಿವರಿಸಿದ ಅವರು ಆ ಪ್ರಕರಣಗಳಿಂದಾಗಿ ಹಲವಾರು ಮಂತ್ರಿಗಳು ಮಾತ್ರವಲ್ಲ ಮೊಟ್ಟ ಮೊದಲ ಬಾರಿಗೆ ರಾಜ್ಯದ ಮುಖ್ಯಮಂತ್ರಿಯೊಬ್ಬ ಜೈಲು ಸೇರಬೇಕಾಗಿ ಬಂದುದು ನಾಚಿಕೆಗೇಡು ಎಂದರು. ಈ ಸರಕಾರ ಅಭಿವೃದ್ಧಿಯ ಹೆಸರಿನಲ್ಲಿ ಅಮೂಲ್ಯ ಗಣಿ ಹಾಗೂ ಭೂ ಸಂಪತ್ತನ್ನು ಲೂಟಿ ಮಾಡಿದೆ. ನಿವೇಶನ, ಉಳುಮೆಗೆ ಭೂಮಿ ನೀಡದ ಸರಕಾರ ಭೂಗಳ್ಳರಿಗೆ ಮನಸೋ ಇಚ್ಛೆ ಭೂ ಕಬಳಿಕೆಗೆ ಅವಕಾಶ ಕಲ್ಪಿಸಿದೆ. ಬಗ್ಗೆ ವರದಿ ನೀಡಿದ್ದರೂ ಅಂತಹವರ ಮೇಲೆ ಕ್ರಮ ಜರುಗಿಸದೇ ರಕ್ಷಿಸುತ್ತಿರುವುದ್ಯಾಕೆ, ಉಳಿದ ವಿರೋಧ ಪಕ್ಷಗಳೂ ಮಾತನಾಡುತ್ತಿಲ್ಲ ಯಾಕೆ ಎಂದು ಪ್ರಶ್ನಿಸಿದರು.

ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಮತ್ತು ನಂತರ ಕೋಮುಗಲಭೆಗಳನ್ನು ಹುಟ್ಟು ಹಾಕಿದೆ. ಅಲ್ಪಸಂಖ್ಯಾತರು, ಮಹಿಳೆಯರ ಮೇಲೆ ಧಾಳಿಗಳನ್ನು ನಡೆಸಲಾಯಿತು. ಕರಾವಳಿಯಂತೂ ಸತತವಾದ ಕೋಮುವಾದಿಗಳ ಅಟ್ಟಹಾಸಕ್ಕೆ ಸಾಕ್ಷಿಯಾಯಿತು. ಇಂತಹ ಸರಕಾರವನ್ನು ತೊಲಗಿಸಬೇಕಿದೆ ಎಂದು ಕರೆ ನೀಡಿದರು. ಮುಂದುವರಿದು ಮಾತನಾಡಿದ ಅವರು ಅಧಿಕೃತ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷ ತನ್ನ ಪಾತ್ರ ವಹಿಸುವಲ್ಲಿ ವಿಫಲವಾಗಿದೆ. ಜೆಡಿಎಸ್ ಪಕ್ಷವೂ ಜನರ ಪ್ರಶ್ನೆಗಳನ್ನೆತ್ತಿ ಹೋರಾಡದೇ ಉಳಿಯಿತು. ಹಾಗೆ ಇಂದಿನ ಯಡಿಯೂರಪ್ಪನವರ ಕೆಜೆಪಿ ಪಕ್ಷ, ಶ್ರೀರಾಮುಲುರವರ ಬಿಎಸ್‌ಆರ್ ಪಕ್ಷಗಳು ಭೂಗಳ್ಳರ ಮತ್ತು ಗಣಿಗಳ್ಳರ ಪಕ್ಷಗಳಾಗಿವೆ. ಈ ಯಾವ ಪಕ್ಷಗಳೂ ಪರ್ಯಾಯವಲ್ಲ ಎಂದರು. ಆದ್ದರಿಂದ ನೀತಿಗಳ ಆಧಾರದ ಜನ ಚಳುವಳಿಗಳ ಮೂಲಕ ಪರ್ಯಾಯವನ್ನು ರೂಪಿಸ ಬೇಕೆಂದರು. ಆ ಹಿನ್ನೆಲೆಯಲ್ಲಿ ಸಿಪಿಐ(ಎಂ) ರಾಜಕೀಯ ಆಂದೋಲನ ಸಾರಿದೆ. ಜಾಥಾಗಳನ್ನು ನಡೆಸಿ ಈ ಸಮಾವೇಶ ಸೇರಿದೆ. ಸಂಘರ್ಷವನ್ನು ಮುಂದುವರಿಸಲಾಗುವುದು ಎಂದರು.

ಸಭಿಕರನ್ನುದ್ದೇಶಿಸಿ ಮಾತನಾಡಿದ ಒಂದು ಜಾಥಾ ತಂಡದ ನಾಯಕರಾಗಿದ್ದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಮಾರುತಿ ಮಾನ್ಪಡೆಯವರು ರಾಜ್ಯದ ಬಿಜೆಪಿ ಸರಕಾರ ಅನುಸರಿಸುತ್ತಾ ಬಂದ ಕಾರ್ಮಿಕ ವಿರೋಧಿ ಕ್ರಮಗಳನ್ನು ಬಿಡಿಸಿಟ್ಟರು. ರಾಜ್ಯದಲ್ಲಿ ಜಾರಿಯಲ್ಲಿರುವ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿಗಳನ್ನು ತರುವ ಮೂಲಕ ಅದು ಭೂ ಮಾಫಿಯಾಗಳಿಗೆ, ಕಾರ್ಪೋರೇಟ್ ಕಂಪನಿಗಳಿಗೆ ಪರಭಾರೆ ಮಾಡಲು ಹೊರಟಿದ್ದು ಅದರ ವಿರುದ್ಧ ಹೋರಾಡಬೇಕೆಂದರು.

ಇನ್ನೊಂದು ಜಾಥಾ ತಂಡದ ನಾಯಕರೂ, ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಜಿ.ಎನ್.ನಾಗರಾಜ್ ರವರು ಮಾತನಾಡಿ 1980ರ ದಶಕದಲ್ಲಿ ಕಾಂಗ್ರೆಸ್ ನ ಗುಂಡೂರಾಯರ ಸರಕಾರ ನರಗುಂದ ನವಲಗುಂದದಲ್ಲಿ ಗುಂಡೇಟಿನಿಂದ ದಮನಗೊಳಿಸಲು ಮುಂದಾದಾಗ ಇಡೀ ರಾಜ್ಯದಲ್ಲೇ ಬಂಡಾಯ ಭುಗಿಲೆದ್ದು ಮುಂದಿನ ಚುನಾವಣೆಯಲ್ಲಿ ಆ ಸರಕಾರವನ್ನೇ ಕಿತ್ತೊಗೆದುದನ್ನು ಪ್ರಸ್ತಾಪಿಸಿದರು. ಆ ಅವಧಿಯಲ್ಲಿ ಒಂದೆಡೆ ರೈತ ಬಂಡಾಯ ,ಮತ್ತೊಂದೆಡೆ ಬೆಂಗಳೂರಿನಲ್ಲಿ ಕಾರ್ಮಿಕರ ಮಹಾ ಮುಷ್ಕರ, ಇನ್ನೊಂದೆಡೆ ದಲಿತ ಚಳುವಳಿ ಹೀಗೆ ಹಲವಾರು ಧೀಮಂತ ಚಳುವಳಿಗಳು ಹೊಸ ಪರ್ಯಾಯ ರಾಜಕೀಯ ಶಕ್ತಿಗಳನ್ನು ಹುಟ್ಟು ಹಾಕಿದವು. ಈಗಲೂ ಅಂತಹ ಜನಾಂದೋಲನಗಳೇ ಪರ್ಯಾಯ ಶಕ್ತಿಗಳನ್ನು ರೂಪಿಸ ಬಲ್ಲುದು ಮತ್ತು ರೂಪಿಸಬೇಕೆಂದರು.

ಸಮಾವೇಶದ ಅದ್ಯಕ್ಷತೆಯನ್ನು ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ವಿಜೆಕೆ ನಾಯರ್ ರವರು ವಹಿಸಿದ್ದರು. ಸಮಾವೇಶವನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಸ್.ವರಲಕ್ಷ್ಮಿಯವರು ಮಾತನಾಡಿದರು. ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರುಗಳಾದ ನಿತ್ಯಾನಂದಸ್ವಾಮಿ, ಬಿ.ಮಾಧವ ಜಿ.ಸಿ ಬೈಯ್ಯಾರೆಡ್ಡಿ, ಯು.ಬಸವರಾಜು, ಕೆ.ಶಂಕರ್ ಉಪಸ್ಥಿತರಿದ್ದರು. ಸ್ವಾಗತ ಮೀನಾಕ್ಷಿ ಸುಂದರಂ, ವಂದನಾರ್ಪಣೆ ಕೆ.ಪ್ರಕಾಶ್ ಮಾಡಿದರು.

ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯ......

ಪುಟ 16 ರಿಂದ.

ಸ್ವಾತಂತ್ರ್ಯ ಪೂರ್ವದಿಂದಲೂ ಕೂಡ ಕಮ್ಯುನಿಸ್ಟ್ ಪಕ್ಷ ದಲಿತರನ್ನು ಮೇಲ್ವರ್ಗದ ಶೋಷಣೆಯಿಂದ ವಿಮೋಚನೆ ಮಾಡಲು ಭೂಮಿ ಹಂಚಿಕೆಯ ಬಗ್ಗೆ ಪ್ರಶ್ನೆ ಎತ್ತುತ್ತಲೇ ಬಂದಿದೆ. ದಲಿತರಿಗೆ ಶಿಕ್ಷಣವೂ ಇಲ್ಲ, ಒಂದು ವೇಳೆ ಇದ್ದರೂ ಉದ್ಯೋಗದಲ್ಲಿ ಸಮರ್ಪಕ ಮೀಸಲಾತಿ ನೀತಿಯ ಜಾರಿ ಇಲ್ಲ. ಹೀಗಿರುವಾಗ ಅವರಿಗೆ ಜೀವನ ನಿರ್ವಹಣೆ ಮಾಡಲು ಭೂಮಿಯನ್ನು ಹಂಚುವುದು ಅತ್ಯವಶ್ಯವಾಗಿದೆ ಎಂದು ಜಿ.ವಿ ಶ್ರೀರಾಮರೆಡ್ಡಿ ಪ್ರತಿಪಾದಿಸಿದರು.

ಮೀಸಲಾತಿ ವಿರೋಧಿ ಪ್ರವೃತ್ತಿಗಳು: ಎರಡನೆಯದಾಗಿ ಮೀಸಲಾತಿ ಪ್ರಶ್ನೆ, ದಲಿತರಿಗೆ ಮೀಸಲಾತಿ ನೀಡಬೇಕು ಎಂದು ಹೇಳಿದಾಗಲೆಲ್ಲಾ ಅದಕ್ಕೆ ವಿರುದ್ಧವಾದ ಕೆಲವು ಅಸಂಬದ್ಧ ವಾದಗಳು ಮುಂದೆ ಮಾಡಲಾಗುತ್ತದೆ. ಖಾಸಗೀ ರಂಗದವರ ವಾದದಂತೆ, ಮಿಸಲಾತಿಯನ್ನು ಖಾಸಗೀ ಉದ್ಯೋಗದಲ್ಲಿ ನೀಡಲಾಗುವುದಿಲ್ಲ ಏಕೆಂದರೆ ಅಲ್ಲಿ ನೈಪುಣ್ಯತೆ, ಕುಷಲತೆಯ ಪ್ರಶ್ನೆ ಏಳುತ್ತದೆ. ದಲಿತರು ಅದಕ್ಕೆ ಅರ್ಹರಲ್ಲ ಎಂಬ ವಾದ ಇಟ್ಟು ಆ ಮೂಲಕ ದಲಿತರ ಆತ್ಮಗೌರವಕ್ಕೆ ಅವಮಾನ ಮಾಡುವಂತಹ ಕೆಲಸವನ್ನು ಇಲ್ಲ ವ್ಯವಸ್ಥಿತವಾಗಿ, ಯೋಜಿತವಾಗಿ ಮಾಡಲಾಗುತ್ತಿದೆ.

ಆದರೆ ಅದರ ನಿಜವಾದ ಅರ್ಥ ಬೇರೆಯೆ ಇರುತ್ತದೆ. ಹುಟ್ಟಿನಿಂದಲೇ ಯಾರೂ ನಿಪುಣರು, ಪ್ರತಿಭಾವಂತರೂ ಆಗಿರುವುದಿಲ್ಲ. ನಮ್ಮ ಸುತ್ತಮುತ್ತಲ ಪರಿಸರ ಹಾಗೂ ಅವಕಾಶಗಳಿಂದ ನಿಪುಣತೆ, ಪ್ರತಿಭೆ ಬರುತ್ತದೆ. ದಲಿತರಿಗೂ ಇತರರಂತೆ ಸಮಾನ ಶಿಕ್ಷಣ, ತರಬೇತಿ, ಪೂರಕ ಪರಿಸರ ನೀಡಿದರೆ ಅವರಲ್ಲಿಯೂ ನೈಪುಣ್ಯತೆ, ಕುಶಲತೆಯ ವಾದಕ್ಕೆ ಅಲ್ಲಿ ಜಾಗವೇ ಇಲ್ಲ. ಉತ್ತಮ ಶಿಕ್ಷಣ ನೀಡಿದರೆ ಪ್ರತಿಯೊಬ್ಬ ವ್ಯಕ್ತಿಯೂ ನಿಪುಣತೆಯನ್ನು ಪಡೆಯುತ್ತಾನೆನ್ನುವುದಕ್ಕೆ ಡಾ.ಬಿ.ಆರ್. ಅಂಬೇಡ್ಕರ್, ಜ್ಯೋತಿಬಾ ಫುಲೆ ಅಂತಹವರೆ ಸಾಕ್ಷಿ.

ಶಿಕ್ಷಣ: ಮೂರನೇ ಪ್ರಶ್ನೆ ಎಂದರೆ ಶಿಕ್ಷಣ. ದಿನದ ಎರಡು ಹೊತ್ತು ಅನ್ನಕ್ಕಾಗಿ ಪರದಾಡುವ ದಲಿತರ ಮಧ್ಯೆ ಶಿಕ್ಷಣ ಅತಿದೂರದಿಂದ ಹಾದು ಹೋಗುತ್ತದೆ. ಅದರಲ್ಲೂ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಅವರು ಶಿಕ್ಷಣ ಪಡೆಯುವುದು ಗಗನ ಕುಸುಮವೇ ಸರಿ! ಇತ್ತೀಚಿನ ದಿನಗಳಲ್ಲಿ ವಿಶ್ವ ವಿದ್ಯಾಲಯಗಳಲ್ಲಿ ಕೆಲವರು ಒಂದು ವಾದ ಮಂಡಿಸುತ್ತಿದ್ದಾರೆ. ದಲಿತರು ಸಂಶೋಧನೆಯ ಕೆಲಸಗಳಿಗೆ ಯೋಗ್ಯರಲ್ಲ, ಅವರ ಸಂಶೋಧನೆಗಳು ಕಳಪೆ ಗುಣಮಟ್ಟದ್ದಾಗಿರುತ್ತವೆ ಎಂಬುದು. ಅದನ್ನು ಪುಷ್ಟೀಕರಿಸಲು ಯಾವುದೋ ಒಬ್ಬ ವ್ಯಕ್ತಿ ಮಾಡಿದ ತಪ್ಪನ್ನು ಇಡೀ ಜನಾಂಗದ ಮೇಲೆ ಹೊರಿಸುವ ಕೆಲಸ ನಡೆಯುತ್ತಿದೆ ಎಂದು ಜಿ.ವಿ ಶ್ರೀರಾಮರೆಡ್ಡಿಯವರು ಜಾತಿವಾದಿ, ಪಟ್ಟಭದ್ರ ಶಕ್ತಿಗಳ ದಲಿತ ವಿರೋಧಿ ಮನೋಭಾವ ಮತ್ತು ಕುತಂತ್ರಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಮುಂದಿನ ದಿನದಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಹೋರಾಟ ರೂಪಿಸಲು ಈ ಸಮಾವೇಷ ಸ್ಪೂರ್ತಿಯಾಗಲಿ ಎಂದರು.

ತಲೆತಲಾಂತರಗಳಿಂದ ದಲಿತರು ದೌರ್ಜನ್ಯಕ್ಕೆ ಗುರಿ– ನಿತ್ಯಾನಂದ ಸ್ವಾಮಿ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ನಿತ್ಯಾನಂದ ಸ್ವಾಮಿ ಮಾತನಾಡಿ ದಲಿತರು ಸ್ವಾವಲಂಬಿಗಳಾಗಬೇಕು, ಇತರರ ಮುಂದೆ ಕೈಚಾಚಿ ನಿಲ್ಲುವ ಸ್ಥಿತಿಯಿಂದ ಹೊರಬರಬೇಕು. ಮೇಲ್ವರ್ಗದ ಕಪಿ ಮುಷ್ಠಿಯಿಂದ ದಲಿತರು ಹೊರಬರಬೇಕಾದರೆ ಶಿಕ್ಷಣ, ಉದ್ಯೋಗ, ಮತ್ತು ಆರೋಗ್ಯ ಅವರಿಗೆ ದೊರೆಯಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಗಳ ತಪ್ಪು ಆರ್ಥಿಕ ನೀತಿಯ ಪರಿಣಾಮವಾಗಿ ದಲಿತರಿಗೆ ಸಂವಿಧಾನಾತ್ಮಕವಾಗಿ ಬಂದಿರುವಂತಹ ಮೀಸಲಾತಿ ಹಕ್ಕು ಇಂದು ಅಪಾಯಕ್ಕೆ ಸಿಲುಕಿದ್ದು ಅದರಿಂದ ರಕ್ಷಿಸಲು ಸಿಪಿಐ(ಎಂ) ಪ್ರಯತ್ನಿಸುತ್ತಿದೆ ಎಂದರು.

ತಲೆತಲಾಂತರಗಳಿಂದ ದಲಿತರನ್ನು ದೌರ್ಜನ್ಯಕ್ಕೆ ಗುರಿಪಡಿಸಲಾಗುತ್ತಿದೆ. ಸ್ವಾತಂತ್ರ್ಯ ಪಡೆದ 60 ವರ್ಷಗಳ ನಂತರವೂ ಅವರ ಶೋಚನೀಯ ಸ್ಥಿತಿ ಮುಂದುವರಿದಿದೆ. ಅದಕ್ಕೆ ಕಾರಣ ಅವರು ಆರ್ಥಿಕವಾಗಿ ಸಬಲರಾಗಿ ಇಲ್ಲದಿರುವುದು. ಅವರು ಆರ್ಥಿಕವಾಗಿ ಸಬಲರಾಗಬೇಕಾದರೆ ಶತಮಾನಗಳಿಂದ ಅವರನ್ನು ವಂಚಿಸಲ್ಪಟ್ಟ ಭೂಮಿಯ ಹಕ್ಕನ್ನು ಅವರಿಗೆ ನೀಡಬೇಕು ಎಂದ ಅವರು ಇನ್ನು ಉದ್ಯೋಗ ರಂಗದಲ್ಲೂ ನೋಡಬೇಕಾದರೆ, ಯಾರಿಗೂ ಬೇಡವಾದ ಅತಿ ಕಡಿಮೆ ಆದಾಯದ ಉದ್ಯೋಗವನ್ನು ದಲಿತರಿಗೆ ನೀಡಲಾಗುತ್ತದೆ. ಆದರೆ ಇಂದು ಇಂತಹ ಕೆಳಮಟ್ಟದ ಉದ್ಯೋಗದಿಂದಲೂ ಸಹ ಅವರನ್ನು ವಂಚಿಸಿ ಅವುಗಳನ್ನು ಹೊರಗುತ್ತಿಗೆಗೆ ನೀಡಲಾಗುತ್ತಿದೆ.

ಸದಾಶಿವ ಆಯೋಗದ ವರದಿಯ ಪ್ರಕಾರ ದಲಿತರ ಜನಸಂಖ್ಯೆಯ ಆಧಾರದ ಮೇಲೆ ಅವರಿಗೆ ಒಳ ಮೀಸಲಾತಿ ಕೊಡಬೇಕು. ಆದರೆ ಇಂದು ಈ ಹೆಸರಿನಲ್ಲಿ ದಲಿತರ ಮಧ್ಯೆ ಬಿರುಕು ಉಂಟು ಮಾಡಿ ಮತಬ್ಯಾಂಕ್ ರಾಜಕೀಯ ಪಿತೂರಿ ನಡೆಸಲಾಗುತ್ತಿದೆ.

ಹೀಗಿರುವಾಗ ಸಿಪಿಐ(ಎಂ)ನ ಪ್ರಮುಖ ಜವಾಬ್ದಾರಿ ಎಂದರೆ ಮುಂದಿನ ದಿನಗಳಲ್ಲಿ ಖಾಸಗೀಕರಣದ ವಿರುದ್ಧ ಹೋರಾಟದ ಒಂದು ಭಾಗವೇ ಆಗಿರುವ ಖಾಸಗೀ ವಲಯದಲ್ಲಿ ಮೀಸಲಾತಿ ಅವಶ್ಯಕತೆ ಬಗ್ಗೆ ಚರ್ಚೆ ಹಾಗೂ ಹೋರಾಟ ನಡೆಸಲು ಜನರನ್ನು ಒಗ್ಗೂಡಿಸುವುದು, ಅಸ್ಪೃಶ್ಯತೆ, ಎರಡು ಲೋಟ ಪದ್ಧತಿ ಪಂಕ್ತಿ ಬೇಧ, ಮಡೆಸ್ನಾನ/ ಎಡೆಸ್ನಾನ ಮುಂತಾದವುಗಳನ್ನು ತೊಡೆದುಹಾಕುವುದು ಹಾಗೂ ದಲಿತರಲ್ಲಿ ಇವುಗಳ ಬಗ್ಗೆ ಅರಿವು ಮೂಡಿಸುವುದು. ದೇವಸ್ಥಾನಗಳಲ್ಲಿ, ದಲಿತರಿಗೆ ಪ್ರವೇಶ ದೊರೆಯುವಂತೆ ಮಾಡುವ ಪ್ರಯತ್ನ ಮಾಡಿ ಅವರನ್ನು ಎಲ್ಲರಂತೆ ಸಮಾನವಾಗಿ ಪರಿಗಣಿಸುವ ಪ್ರಯತ್ನ ಇವೆಲ್ಲ ನಮ್ಮ ಮುಂದಿರುವ ಸವಾಲು ಎಂದರು.

ರಾಜ್ಯದಲ್ಲಿ ದಲಿತರಿಗೆ ಸಿಗಬೇಕಾದ ಒಂದು ಲಕ್ಷ ಉದ್ಯೋಗಾವಕಾಶದ ವಂಚನೆ– ಮಾರುತಿ ಮಾನ್ಪಡೆ

ನಂತರ ಮಾಡನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಮಾರುತಿ ಮಾನ್ಪಡೆ, ದೇಶದಲ್ಲಿ ಉದಾರೀಕರಣದ ನೀತಿಗಳನ್ನು ಅತಿ ವೇಗವಾಗಿ ಜಾರಿಗೆ ತಂದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯ ಮುಂದಿದೆ. ರಾಜ್ಯದಲ್ಲಿ 5 ಲಕ್ಷ ಉದ್ಯೋಗಗಳನ್ನು ಹೊರಗುತ್ತಿಗೆಗೆ ನೀಡಲಾಗಿದ್ದು ಅದರಲ್ಲಿ 1 ಲಕ್ಷ ದಲಿತರಿಗೆ ಸಿಗಬೇಕಾದ ಉದ್ಯೋಗಾವಕಾಶದ ವಂಚನೆಯಾಗಿದೆ. ಇದು ಮೀಸಲಾತಿ ಪರಿಕಲ್ಪನೆಯನ್ನೇ ತೊಲಗಿಸುವ ಹುನ್ನಾರ ಎನಿಸುತ್ತಿದೆ.

ಇಂದು ನವ ಉದಾರೀಕರಣ ದಲಿತರನ್ನು ಮಾತ್ರ ಕಾಡಿಲ್ಲ. ಸಮಗ್ರ ಸಾಮಾನ್ಯ ಜನತೆ ಇದರ ಹೊಡೆತಕ್ಕೆ ಸಿಲುಕಿದೆ. ಅದರಲ್ಲೂ ದಲಿತರ ತಮ್ಮ ಒಂದು ದಿನದ ಹೊಟ್ಟೆ ಪಾಡಿಗಾಗಿ ಅತ್ಯಂತ ಕೆಳ ಮಟ್ಟದ ಕೆಲಸವನ್ನು ಮಾಡುತ್ತಿದ್ದಾರೆ. ದಲಿತ ಮಕ್ಕಳು ಶಿಕ್ಷಣ ಪಡೆಯಲು ಸಾಧ್ಯವಾಗದೆ ಬಾಲಕಾರ್ಮಿಕರಿಗಾಗಿ ಉಳಿದಿದ್ದಾರೆ ಚಪ್ಪಲಿ ಕಾರ್ಖಾನೆ, ಚರ್ಮದ ಉದ್ಯಮದಲ್ಲಿ, ಪಟಾಕಿ/ಸಿಡಿಮದ್ದು ತಯಾರಿಕೆಯ ಕೆಲಸಗಳಲ್ಲಿ ಚಿಕ್ಕ ಮಕ್ಕಳೇ ಕಾಣಸಿಗುತ್ತಾರೆ. ಆದರೆ ಅವರಿಗೆ ಯಾವುದೇ ರೀತಿಯ ಜೀವನದ ಭದ್ರತೆಯಾಗಲಿ, ಜೀವ ಭದ್ರತೆಯಾಗಲಿ ಇಲ್ಲ.

ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆಂದು ಇರುವ ವಿಷೇಷ ಘಟಕ ಯೋಜನೆಗೆ ಜನಸಂಖ್ಯೆಯ ಆಧಾರದ ಮೇಲೆ ನಿಧಿ ಹಂಚಿಕೆ ಆಗಬೇಕು ಎಂದು ಸಂವಿಧಾನದಲ್ಲಿಧೆ. ಆದರೆ ಕರ್ನಾಟಕ ಸರ್ಕಾರ ಈ ಸಾಲಿನ 42,000 ಕೋಟಿ ಬಜೆಟ್‌ನಲ್ಲಿ, ಅದರ 34 ಇಲಾಖೆಗಳಿಗೆ ದಲಿತರಿಗೆಂದು ಮೀಸಲಾಗಿಟ್ಟಿರುವ ನಿಧಿ ಕೇವಲ 7,200 ಕೋಟಿ. ಇನ್ನೂ 10,000 ಕೋಟಿ ಕೊಡಬೇಕಿತ್ತು. ಆದರೆ ಅದನ್ನು ನೀಡಲು ಸಾಧ್ಯವಿಲ್ಲ ಎಂಬುದು ಸರಕಾರದ ವಾದ. ಅಷ್ಟೆ ಅಲ್ಲದೇ ದಲಿತರ ಹೆಸರಿನಲ್ಲಿ ಬರುವ ನಿಧಿಯನ್ನು ದಲಿತರ ರಾಜಕೀಯ ಮುಖಂಡರು ದುರುಪಯೋಗ ಪಡಿಸಿಕೊಳ್ಳುತ್ತಿರುವ ಉದಾಹರಣೆ ಸಹ ಇದೆ.

ಪರಿಶಿಷ್ಟ ಜಾತಿಯ ಜನರಿಗೆ ಹೈನುಗಾರಿಕೆಗೆಂದು ದನ/ಹಸು ವಿತರಿಸುವ ಯೋಜನೆಯೊಂದಿದೆ. ಆದರೆ ಅದನ್ನು ದಲಿತರಿಗೆ ಹಂಚುವ ಬದಲು ತನಗೆ ಓಟು ನೀಡುವ ಜನರಿಗೆ ಹಂಚಿರುವ ಎಂ.ಎಲ್.ಎ. ಗಳ ಉದಾಹರಣೆಯೂ ಇದೆ. ಎಂದೂ ಮಾರುತಿ ಮಾನ್ಪಡೆಯವರು ವಿವರಿಸಿದರು.

ಕುಣಿ ತೋಡುವವರ ದಾರುಣ ಬದುಕು

ಎಷ್ಟೋ ಊರು, ಹಳ್ಳಿಗಳಲ್ಲಿ ದಲತ ವ್ಯಕ್ತಿ ಮರಣ ಹೊಂದಿದರೆ ದೇಹದ ಅಂತ್ಯ ಸಂಸ್ಕಾರ ನಡೆಸಲು ದಲಿತರಿಗ ಜಾಗವೇ ಸಿಗದಂತಹ ಪರಿಸ್ಥಿತಿ ಇರುವ ಬಗೆಗೆ ಮಾನ್ಪಡೆಯವರು ವಿವರಸಿದರು. ಸ್ಮಶಾನಗಳಲ್ಲಿ ಹೆಣ ಹೂಳಲು ಕುಣಿ ತೋಡುವ ಕೆಲಸ ಮಾಡುತ್ತಿರುವ ದಲಿತರ ಬವಣೆಯ ಬಗೆಗೆ ಮಾತನಾಡಿದ ಮಾನ್ಪಡೆಯವರು ಈ ಸಂಬಂಧ ನಿರ್ದಿಷ್ಟ ಉದಾಹರಣೆಯೊಂದನ್ನು ನೀಡಿದರು. ಹೆಣ ಹೂಳುವ ಒಂದು ಗುಂಡಿ ತೋಡಲು ಆ ವ್ಯಕ್ತಿಗೆ ನಾಲ್ಕಾಣೆ (25 ಪೈಸೆ) ಸಿಗುತ್ತಿತ್ತು. ಆದರೆ ಅವನ ಕೈಕಾಲುಗಳನ್ನು ರಕ್ಷಿಸಿಕೊಳ್ಳುವ ಯಾವುದೇ ಕವಚಗಳು ಅವನಲ್ಲಿ ಇರಲಿಲ್ಲ. ಅದನ್ನು ಕೊಳ್ಳುವ ಶಕ್ತಿಯು ಅವನಲ್ಲಿ ಇರಲಿಲ್ಲ. ಹೀಗೆ ಶೌಚಾಲಯ ತೊಳೆಯುವ ಕೆಲಸ, ಚರಂಡಿ ಒಳಗೆ ಇಳಿದು ಸ್ವಚ್ಚಗೊಳಿಸುವ ಕೆಲಸ ಮುಂತಾದವುಗಳನ್ನು ದಲಿತರಿಂದಲೇ ಮಾಡಿಸಲಾಗುತ್ತದೆ. ಅವರಿಗೆ ಬರುವ ಚರ್ಮ ರೋಗ, ಮತ್ತು ಇನ್ನಿತರೇ ಖಾಯಿಲೆಗಳ ಬಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಶಕ್ತಿ ಅವರಲ್ಲಿ ಇಲ್ಲ. ಹಾಗಾಗಿ ದಲಿತರಲ್ಲಿ ಮರಣ ಪ್ರಮಾಣ ಸಾಮಾನ್ಯ ಜನರಿಗಿಂತ ಹೆಚ್ಚಾಗಿಯೇ ಇದೆ ಎಂದು ಇಂತಹ ವೃತ್ತಿಯಲ್ಲಿ ತೊಡಗಿರುವ ದಲಿತರ ದಾರುಣ ಸ್ಥಿತಿಯನ್ನು ಮಾರುತಿ ಮಾನ್ಪಡೆಯವರು ವಿವರಿಸಿದರು.

ಗುಂಪು ಚರ್ಚೆ–ಪ್ರತಿನಿಧಿಗಳ ಚರ್ಚೆ

ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡ ಪ್ರತಿನಿಧಿಗಳು ಜಿಲ್ಲಾವಾರು ಗುಂಪುಗಳಾಗಿ ಗುಂಪು ಚರ್ಚೆ ನಡೆಸಿ ಅಲ್ಲಿ ಮೂಡಿಬಂದ ಚರ್ಚೆಯ ಸಾರವನ್ನು ವಿಚಾರ ಸಂಕಿರಣದಲ್ಲಿ ಮಂಡಿಸಿದರು.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಇಂತಹ ವಿಚಾರ ಸಂಕಿರಣ ಮತ್ತು ಸಮಾವೇಶಗಳನ್ನು ಸಂಘಟಿಸಲು ಮತ್ತು ಈಗಾಗಲೇ ನಡೆಸಲಾಗಿರುವ ಸಮೀಕ್ಷೆ ಮತ್ತು ಹೊಸ ಸಮೀಕ್ಷೆಗಳ ಮೂಲಕ ಜಾತಿ ತಾರತಮ್ಯ

ಪುಟ14 ನೋಡಿ

ಡಿಸೆಂಬರ್ –27 ಉಡುಪಿಯಲ್ಲಿ ಪಾದಯಾತ್ರೆ ಮತ್ತು ವಾಹನ ಜಾಥಗಳ ಸಮಾಗಮ ಬೃಹತ್ ಪ್ರತಿಭಟನೆ

ಧಾರ್ಮಿಕ ಕೇಂದ್ರಗಳಲ್ಲಿ ಪಂಕ್ತಿಭೇದ, ಎಡೆಸ್ನಾನ, ಮಡೆಸ್ನಾನಗಳನ್ನು ಖಂಡಿಸಿ ಡಿಸೆಂಬರ್ 21ರಿಂದ 24ರ ವರೆಗೆ ಕುಕ್ಕೆಸುಬ್ರಮಣ್ಯದಿಂದ ಉಡುಪಿಯತ್ತ ವಾಹನಜಾಥ ಆರಂಭವಾಗಲಿದೆ. 24ರಂದು ಮಂಗಳೂರಿನಿಂದ ಉಡುಪಿಯತ್ತ ಪಾದಯಾತ್ರೆ ಆರಂಭವಾಗಲಿದೆ. ಡಿಸೆಂಬರ್ 27 2012 ರಂದು ಉಡುಪಿಯಲ್ಲಿ ಪಾದಯಾತ್ರೆ ಮತ್ತು ವಾಹನಜಾಥಗಳ ಸಮಾಗಮ ಮತ್ತು ಬೃಹತ್ ಹೋರಾಟವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಯೋಜಿಸಿದೆ. ಅಂದು ಬೆಳಿಗ್ಗೆ 10.30ಕ್ಕೆ ಅಜ್ಜರಕಾಡುವಿನಿಂದ ಪ್ರತಿಭಟನಾ ಮೆರವಣಿಗೆ ಆರಂಭ ಮ. 1.00 ಕ್ಕೆ ಉಡುಪಿ ಕೃಷ್ಣ ಮಠದ ಎದುರು ಪ್ರತಿಭಟನಾ ಪ್ರದರ್ಶನ ನಡೆಯಲಿದೆ. ಈ ಹೋರಾಟವನ್ನು ಯಶಸ್ವಿಗೊಳಿಸುವ ಸಂಬಂಧ ನಿರ್ಣಯವನ್ನು ಅಂಗೀಕರಿಸಿಲಾಯಿತು.

ಅಮಾಯಕ ಮುಸ್ಲಿಂ ಯುವಕರ ಬೇಟೆ ನಿಲ್ಲಿಸಿ–ಸಿಪಿಐ(ಎಂ)

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರಕಾಶ್ ಕಾರಾಟ್ ಅವರ ನೇತೃತ್ವದ ಸಿಪಿಐ(ಎಂ) ನಿಯೋಗವೊಂದು ಇತ್ತೀಚೆಗೆ ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿ ಅವರನ್ನು ಭೇಟಿಯಾಗಿ ದೇಶದ ವಿವಿಧ ಭಾಗಗಳಲ್ಲಿ ಅಮಾಯಕ ಮುಸ್ಲಿಂ ಯುವಕರನ್ನು ಭಯೋತ್ಪಾದನಾ ಕೃತ್ಯಗಳ ಸಂಬಂಧಿತ ಪ್ರಕರಣಗಳಲ್ಲಿ ಬಂಧಿಸಿ, ವರ್ಷಗಟ್ಟಲೆ ಜೈಲುಗಳಲ್ಲಿ ಕೊಳೆಯಿಸಿ ಪೀಡಿಸುವುದನ್ನು ನಿಲ್ಲಿಸುವಂತೆ ಸರ್ಕಾರಕ್ಕೆ ಅಗತ್ಯ ನಿರ್ದೇಶನ ನೀಡಬೇಕೆಂದು ಆಗ್ರಹಿಸಿತು. ನಿಯೋಗದಲ್ಲಿ ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ ಜಮ್ಮು ಕಾಶ್ಮೀರ ರಾಜ್ಯದ ಶಾಸಕರೂ ಆಗಿರುವ ಕಾಂ. ಮೊಹಮ್ಮದ್ ಯೂಸೂಫ್ ತಾರಿಗಾಮಿ, ಪಕ್ಷದ ಕೇಂದ್ರ ಸಮಿತಿಯ ಸದಸ್ಯೆ ಕಾಂ. ಸುಭಾಷಿಣಿ ಅಲಿ, ಪಕ್ಷದ ದೆಹಲಿ ರಾಜ್ಯ ಸಮಿತಿಯ ಸದಸ್ಯ ಕಾಂ. ಸೆಹ್ಬಾ ಫರೂಕಿ ಅಲ್ಲದೆ 14 ವರ್ಷ ಜೈಲಿನಲ್ಲಿದ್ದು ಬಿಡುಗಡೆ ಹೊಂದಿದ ದೆಹಲಿಯ ಯುವಕ ಮೊಹಮ್ಮದ್ ಅಮೀರ್, 14 ವರ್ಷ ಜೈಲಿನಲ್ಲಿದ್ದು ಬಿಡುಗಡೆಯಾದ ಶ್ರೀನಗರದ ಮಕ್ಬೂಲ್ ಶಹಾ ಮತ್ತು 8 ವರ್ಷ ಜೈಲಿನಲ್ಲಿದ್ದು ಬಿಡುಗಡೆಯಾದ ಖಾನ್ಪುರದ ಯುವಕ ಸೈಯದ್ ವಾಸೀಫ್ ಹೈದರ್ ಇದ್ದರು.

ದೇಶದ ವಿವಿಧ ಭಾಗಗಳಲ್ಲಿ ಭಯೋತ್ಪಾದನಾ ದಾಳಿಗಳಲ್ಲಿ ಭಾಗವಹಿಸಿದ್ದಾರೆ ಎಂಬ ಆರೋಪ ಹೊರಿಸಿ, ಬಹುದೊಡ್ಡ ಸಂಖ್ಯೆಯಲ್ಲಿ ಮುಸ್ಲಿಂ ಯುವಕರನ್ನು ಬಂಧಿಸಿ 10 ರಿಂದ 14 ವರ್ಷಗಳವರೆಗೆ ಜೈಲುಗಳಲ್ಲಿಟ್ಟು, ಅನಂತರ ಅವರು ನಿರಪರಾಧಿಗಳೆಂದು ಘೋಷಿಸಿ ಬಿಡುಗಡೆ ಮಾಡಲಾಗುತ್ತಿರುವ ಅಮಾನುಷ ವಿದ್ಯಮಾನದ ಬಗ್ಗೆ ರಾಷ್ಟ್ರಪತಿಯವರಿಗೆ ಸಲ್ಲಿಸಲಾದ ಮನವಿಯಲ್ಲಿ ಅವರ ಗಮನ ಸೆಳೆಯಲಾಗಿದೆ. ಇಂತಹ ಅನೇಕ ಪ್ರಕರಣಗಳಲ್ಲಿ ತನಿಖಾ ಏಜೆನ್ಸಿಗಳು (ಪೋಲಿಸರು) ಮುಸ್ಲಿಂ ಯುವಕರ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿ ವರ್ತಿಸಿರುವುದನ್ನು ಹಾಗೂ ಅಮಾಯಕರ ಬಗ್ಗೆ ಆಧಾರರಹಿತ ಪ್ರಕರಣಗಳನ್ನು ದಾಖಲು ಮಾಡಿ ಸುಳ್ಳು ಸಾಕ್ಷಾಧಾರಗಳನ್ನು ನ್ಯಾಯಾಲಯದ



ಮುಂದೆ ಹಾಜರು ಪಡಿಸಿದನ್ನು ನ್ಯಾಯಾಲಯಗಳು ನೀಡಿದ ತೀರ್ಪುಗಳಲ್ಲಿ ಎತ್ತಿ ತೋರಿಸಿರುವುದನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ತನಿಖಾ ಸಿಬ್ಬಂಧಿಗಳಿಗೆ ನಿಜವಾದ ಅಪರಾಧಿಗಳನ್ನು ಬಂಧಿಸುವುದಕ್ಕಿಂತ ಹೆಚ್ಚಾಗಿ ತಮ್ಮ ವೈಫಲ್ಯವನ್ನು ಮುಚ್ಚಿ ಹಾಕಿ ತಮ್ಮ ತನಿಖೆಯ ಯಶಸ್ಸನ್ನು ಪ್ರದರ್ಶಿಸುವುದೇ ಮುಖ್ಯವಾಗಿದೆ.

ಇಂದು, ಮುಸ್ಲಿಂ ಯುವಕರು ಅತಿಹೆಚ್ಚು ಬಲಿಪಶುಗಳಾಗುತ್ತಿದ್ದಾರೆ. ಅಕ್ರಮ ಚಟುವಟಿಕೆ (ತಡೆಗಟ್ಟುವ) ಕಾಯ್ದೆಯ ಕರಾಳ ಕ್ರಮಗಳನ್ನು ಬಳಸಿ ಸಹಜ ನ್ಯಾಯದ ಪ್ರಕ್ರಿಯೆಯನ್ನೇ ನಿರಾಕರಿಸಲಾಗುತ್ತದೆ. ನ್ಯಾಯ ನಿರ್ಣಯದ ಪ್ರಕ್ರಿಯೆಗೂ ಯಾವುದೇ ಕಾಲಮಿತಿ ಇಲ್ಲ. ಅಮಾಯಕರನ್ನು ಬಲಿಪಶುಗಳನ್ನಾಗಿ ಮಾಡಿ ಸತಾಯಿಸಲಾಗುತ್ತದೆ ಎಂಬ ಅನುಮಾನ ಹಾಗೂ ಆಕ್ರೋಶ ಬೆಳೆಯುತ್ತಿದೆ. ಯುವಜನರ ಬದುಕನ್ನು ಬರ್ಬಾದ್ ಮಾಡಲಾಗುತ್ತಿದೆ. ಅವರ ಕುಟುಂಬಗಳು ಅಘೋಷಿತ ಸಾಮಾಜಿಕ ಬಹಿಷ್ಕಾರಕ್ಕೆ ತುತ್ತಾಗಿ ನರಳುತ್ತಿರುತ್ತಾರೆ. ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ನಡೆಸಲು ಭಾರೀ ಪ್ರಮಾಣದ ಸಾಲ ಮಾಡಿ ಸೋತು ಹೋಗಿರುತ್ತಾರೆ. ಪ್ರಭುತ್ವ ಪ್ರಾಯೋಜಿತ ಅನ್ಯಾಯದಿಂದ ಇಂತಹ ಅಸಂಖ್ಯಾತ ಕುಟುಂಬಗಳು ಸಾಮಾಜಿಕ ಸಹಾನುಭೂತಿ ವಂಚಿತರಾಗಿ ನರಕಯಾತನೆಯನ್ನು ಅನುಭವಿಸುತ್ತಿರುತ್ತಾರೆ.

ಉದಾಹರಣೆಗಾಗಿ, ಮೇಲೆ ಹೆಸರಿಸಿದ ಶ್ರೀನಗರದ ಯುವಕ ಸೈಯದ್ ಮಕ್ಬೂಲ್, ದೆಹಲಿಯ ಯುವಕ ಮೊಹಮ್ಮದ್ ಅಮೀರ್ ಮತ್ತು ಉತ್ತರ ಪ್ರದೇಶದ ಯುವಕ ವಾಸೀಫ್ ಹೈದರ್ ಮತ್ತು ಮುಮ್ತಾಜ್ ಅಹಮ್ಮದ್ ಅವರನ್ನು ಯಾವುದೇ ಕಾರಣವಿಲ್ಲದೆ ಬಂಧಿಸಲಾಗಿತ್ತು, ಆಗ ಅವರ ವಯಸ್ಸು ಕೇವಲ 18 ಅಥವ 19 ವರ್ಷ. ಅವರ ವಿರುದ್ಧ ಹತ್ತಾರು ಪ್ರಕರಣಗಳನ್ನು ದಾಖಲು ಮಾಡಿ 10 ರಿಂದ 14 ವರ್ಷಗಳವರೆಗೆ ಜೈಲಿನಲ್ಲಿ ಇಡಲಾಗಿತ್ತು. ಇತ್ತೀಚೆಗೆ ನ್ಯಾಯಾಲಯಗಳು ಅವರು ನಿರಪರಾಧಿಗಳೆಂದು ಘೋಷಿಸಿ ಅವರನ್ನು ಬಿಡುಗಡೆ ಮಾಡಿವೆ. ಈಗ ಅವರಿಗೆ ಉದ್ಯೋಗ ಇಲ್ಲ. ಅವರಿಗೆ ಯಾರೂ ಉದ್ಯೋಗ ಕೊಡುವವರಿಲ್ಲ. ಯಾವುದೇ ತಪ್ಪು ಮಾಡದ ಆ ಯುವಕರ ಭವಿಷ್ಯ ಕರಾಳವಾಗಿದೆ.

ಭಯೋತ್ಪಾದಕರಿಗೆ ಯಾವ ರಿಯಾಯ್ತಿ ತೋರಿಸುವ ಅಗತ್ಯ ಇಲ್ಲ. ಆದರೆ ಅಮಾಯಕರನ್ನು ಬಂಧಿಸಿ, ಹಿಂಸಿಸುವ ಪ್ರವೃತ್ತಿ ಗಂಭೀರ ಮಟ್ಟಕ್ಕೆ ಬೆಳೆದಿದ್ದು ಸರ್ಕಾರ ತಕ್ಷಣ ಅತ್ತ ಗಮನಹರಿಸುವುದು ಅತ್ಯಗತ್ಯವಾಗಿದೆ ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಸಿಪಿಐ(ಎಂ) ನಾಲ್ಕು ಅಂಶಗಳನ್ನು ಒಳಗೊಂಡ ಹಕ್ಕೊತ್ತಾಯವನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದೆ.

(1) ಇಂತಹ ಪ್ರಕರಣಗಳಲ್ಲಿ ಒಳಪಡಿಸಲಾದ ನಿರಪರಾಧಿಗಳಿಗೆ ಪರಿಹಾರ ಮತ್ತು ಪುನರ್ವಸತಿ.

(2) ಇಂತಹ ಪ್ರಕರಣಗಳನ್ನು ಒಂದು ವರ್ಷದ ಅವಧಿ ಒಳಗಾಗಿ ಇತ್ಯರ್ಥಪಡಿಸಲು ವಿಶೇಷ ನ್ಯಾಯಾಲಯಗಳ ಸ್ಥಾಪನೆ.

(3) ಸುಳ್ಳು ಪ್ರಕರಣಗಳನ್ನು ದಾಖಲುಮಾಡಿ ಸುಳ್ಳು ಸಾಕ್ಷಾದಾರಗಳನ್ನು ಹಾಜರು ಪಡಿಸಿದ್ದು ನ್ಯಾಯಾಲಯದಲ್ಲಿ ಸಾಬೀತಾದರೆ ಅಂತಹ ತನಿಖಾಧಿಕಾರಿಗಳ ವಿರುದ್ಧ ಕಠಿಣ ಕ್ರಮ.

(4) ಅಕ್ರಮ ಚಟುವಟಿಕೆಗಳ (ತಡೆಗಟ್ಟುವ) ಕಾಯ್ದೆ ಒಳಗೊಂಡಿರುವ ದುರುಪಯೋಗ ಮಾಡಲಾಗುವ ಕರಾಳ ಕ್ರಮಗಳನ್ನು ಪುನರ್‌ಪರಿಶೀಲಿಸಿ ತೆಗೆದು ಹಾಕಬೇಕು.

ಬಹುಮತ 'ತಯಾರಿ'

ಪುಟ 7 ರಿಂದ

ಬಂದಿದೆ. ವಾಲ್ಮಾರ್ಟ್ ಮೆಕ್ಸಿಕೊ ಆ ದೇಶದಲ್ಲಿ ತನ್ನ ಕಾರುಬಾರುಗಳಿಗೆ ಪರ್ಮಿಟ್‌ಗಳನ್ನು ಪಡೆಯಲು ಮಿಲಿಯಗಟ್ಟಲೆ ಡಾಲರುಗಳನ್ನು ತೆತ್ತಿದೆ ಎಂಬುದರ ಅರಿವು ವಾಲ್ಮಾರ್ಟ್‌ಗೆ ಏಳೆಂಟು ವರ್ಷಗಳ ಹಿಂದೆಯೇ ಇತ್ತು ಎಂದು ನ್ಯೂಯಾರ್ಕ್ ಟೈಮ್ಸ್ ಇತ್ತೀಚೆಗೆ ವರದಿ ಮಾಡಿದೆ.

ಹಾಗೆಯೇ, ಹಲವಾರು ದೇಶಗಳಲ್ಲಿ ಹಲವಾರು ಕಾರ್ಮಿಕ–ವಿರೋಧಿ ಧೋರಣೆಗಳಿಂದಾಗಿ ವಾಲ್ಮಾರ್ಟ್ ಟೀಕೆಗಳಿಗೊಳಗಾಗಿದೆ. ವಿಶ್ವಾದ್ಯಂತ ವಾಲ್ಮಾರ್ಟ್‌ನ ನೌಕರರ ಸಂಖ್ಯೆ 2.22 ಕೋಟಿಗಳಷ್ಟಿದೆ. ಕಡಿಮೆ ಸಂಬಳ, ಕೆಟ್ಟ ಕೆಲಸದ ಪರಿಸ್ಥಿತಿಗಳು, ಅಸಮರ್ಪಕ ಆರೋಗ್ಯಪಾಲನೆ, ಕಾರ್ಮಿಕ ಸಂಘ–ವಿರೋಧಿ ಕ್ರಮಗಳು ಮುಂತಾದ ವಿಷಯಗಳಲ್ಲಿ ಮೊಕದ್ದಮೆಗಳ ಮಹಾಪೂರವನ್ನೇ ಅದು ಎದುರಿಸುತ್ತಿದೆ. ವಾಲ್ಮಾರ್ಟ್ ಕಾರ್ಮಿಕರಲ್ಲಿ ಕೇವಲ 1.2 ಶೇ. ಮಾತ್ರವೇ ಆಯಾ ದೇಶದ ಬಡತನದ ರೇಖೆಯ ಮೇಲೆ ಬದುಕುತ್ತಿದ್ದಾರೆ. ದುರದೃಷ್ಟವಶಾತ್, ಈ ಎಲ್ಲ ಸಂಗತಿಗಳೂ ಭಾರತೀಯ ಸಂಸತ್ತಿಗೆ ಚೆನ್ನಾಗಿ ತಿಳಿದಿದ್ದರೂ, ಕೆಲವು ಪಕ್ಷಗಳು ಇತ್ತೀಚಿನ ಸಂಸದೀಯ ಮತದಾನದಲ್ಲಿ ಯುಪಿಎ–2 ಸರಕಾರಕ್ಕೆ ನೆರವಾಗಿವೆ.

ಈ 'ರಹಸ್ಯ'ವೂ ಬಯಲಾಗುತ್ತದೆ

ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರಕಾರಗಳಂತೂ ಒಂದು ಅಲ್ಪಮತವನ್ನು ಸದನದಲ್ಲಿ ಬಹುಮತವಾಗಿ ಪರಿವರ್ತಿಸುವ ತಂತ್ರದಲ್ಲಿ ನಿಷ್ಣಾತವಾಗಿವೆ. ನೋಮ್ ಚೋಮ್ಸ್ಕಿ, ವಾಲ್ಟರ್ ಲಿಪ್ಮನ್ ಮುಂತಾದವರು 'ಒಪ್ಪಿಗೆಯ ತಯಾರಿ' ಎಂದು ಮಾತನಾಡಿದ್ದಾರೆ. ಅವರ ಕ್ಷಮೆ ಕೇಳಿ ಅದನ್ನು ತುಸು ಬದಲಾಯಿಸಿ ಹೇಳುವುದಾದರೆ 'ಬಹುಮತವನ್ನು ತಯಾರಿಸುವ' ಇಂತಹ ಪರಿಣತಿ ಈ ಹಿಂದೆ ಜೆಎಂಎಂ ಲಂಚ ಮೊಕದ್ದಮೆಯಲ್ಲಿ(1993) ಮತ್ತು 'ವೋಟಿಗಾಗಿ ನೋಟು'(2008) ಹಗರಣದಲ್ಲಿ ಬಯಲಿಗೆ ಬಂದಿತ್ತು. ಈ ಬಾರಿ ಚರ್ಚೆಗಳಲ್ಲಿ ಬಹಿರಂಗವಾಗಿಯೇ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಯನ್ನು ವಿರೋಧಿಸಿದವರು ಸಂಖ್ಯಾತ್ಮಕವಾಗಿ ಬಹುಮತದಲ್ಲಿದ್ದರು. ಆದರೆ, ಅಗೋ ನೋಡಿ, ಮತದಾನದ ವೇಳೆಯಲ್ಲಿ ಎಲ್ಲವೂ ತಿರುವು ಮುರುವು. ಇದರ ಹಿಂದಿನ ರಹಸ್ಯ ಕಾಲಕ್ರಮೇಣ ಬಯಲಾಗುವುದು ಖಂಡಿತ.

ಈ ಎಲ್ಲ ಸಂಗತಿಗಳಿಂದಾಗಿ, ಯುಪಿಎ–2 ಸರಕಾರ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ತನ್ನ ನಿರ್ಧಾರವನ್ನು ಕಾರ್ಯಗತಗೊಳಿಸಲು ವಾಲ್ಮಾರ್ಟ್‌ನ ವಶೀಲಿಬಾಜಿ ಮತ್ತು ಇತರ ಚಟುವಟಿಕೆಗಳನ್ನು ಕುರಿತು ತನಿಖೆ ಪೂರ್ಣಗೊಳಿಸುವ ವರೆಗೆ ಕಾಯಬೇಕಾಗಿದೆ. ಅದೇನೇ ಇರಲಿ, ರಿಝರ್ವ್ ಬ್ಯಾಂಕ್ ಫೆಮಾ ಕಾನೂನಿನ ತಿದ್ದುಪಡಿಗಳನ್ನು ಸಂಸತ್ತು ಇತ್ಯರ್ಥ ಮಾಡುವ ವರೆಗಾದರೂ ಕಾಯಲೇಬೇಕು. ಇದನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. ಆದರೆ, ವಿಚಿತ್ರವೆಂದರೆ ಇನ್ನೂ ರಾಜ್ಯಸಭೆಯಲ್ಲಿ ಇದನ್ನು ಮಂಡಿಸಿಲ್ಲ.(ಈ ಸಂಪಾದಕೀಯ ಸಿದ್ದಗೊಂಡ ಮೇಲೆ ಡಿಸೆಂಬರ್–13 ರಂದು ಮಂಡಿಸಲಾಗಿದೆ.) ಯಾವುದೇ ಫೆಮಾ ನಿಯಮಾವಳಿಯ ತಿದ್ದುಪಡಿಯನ್ನು ಸರಕಾರ ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಲೇ ಬೇಕೆಂದು ಸ್ಪಷ್ಟವಾಗಿ ವಿಧಿಸಲಾಗಿದೆ. ಸರಕಾರ ಇದರಿಂದ ತಪ್ಪಿಸಿಕೊಳ್ಳುವಂತಿಲ್ಲ. ಈಗ ಇದು ಮುಂದಿನ ಬಜೆಟ್ ಅಧಿವೇಶನದಲ್ಲಿ ಮಾತ್ರ ಸಾಧ್ಯ. ಆದ್ದರಿಂದ ಕಾನೂನು ಪ್ರಕಾರ ಸರಕಾರ ಈ ಎಲ್ಲ ಸಂಗತಿಗಳು ಮುಂದಿನ ಬಜೆಟ್ ಅಧಿವೇಶನದ ವೇಳೆ ಇತ್ಯರ್ಥಗೊಳ್ಳುವ ವರೆಗೆ ತನ್ನ ನಿರ್ಧಾರವನ್ನು ಕಾರ್ಯಗತ ಗೊಳಿಸುವಂತಿಲ್ಲ.

ಈ ನಡುವೆ ದೇಶಾದ್ಯಂತ ಈ ನಿರ್ಧಾರದ ವಿರುದ್ಧ ಜನತೆಯ ಪ್ರತಿಭಟನೆಗಳು ಇನ್ನಷ್ಟು ಪ್ರಬಲವಾಗುತ್ತಿವೆ. ಅಂತಿಮವಾಗಿ, ಸರಕಾರ ತನ್ನ ನಿರ್ಧಾರವನ್ನು ದೇಶದ ಮತ್ತು ಜನತೆಯ ಹಿತದೃಷ್ಟಿಯಿಂದ ಕೈಬಿಡುವಂತೆ ಮಾಡುವುದು ಇಂತಹ ಜನತಾ ಪ್ರತಿಭಟನೆಗಳ ಬಲವೇ.

('ಪೀಪಲ್ಸ್ ಡೆಮೋಕ್ರಸಿ' ವಾರಪತ್ರಿಕೆಯ ಸಂಪಾದಕೀಯ ಆಧರಿಸಿ)

"ಅಂಗವಿಕಲರಿಗಾಗಿ ಸಂವಿಧಾನ ತಿದ್ದುಪಡಿ ಮಾಡಬೇಕು"

ಬೃಂದಾ ಕಾರಟ್

ಅಂಗವಿಕಲರಿಗೆ ಕೂಡ ಎಲ್ಲರಂತೆ ಮನುಷ್ಯತ್ವದ ಘನತೆಯೊಂದಿಗೆ ಬದುಕುವ ಹಕ್ಕಿದೆ. ಅಂಗವಿಕಲರ ಹಿತ ರಕ್ಷಣೆಗಾಗಿ ಸಂವಿಧಾನವನ್ನು ತಿದ್ದುಪಡಿ ಮಾಡಬೇಕು. ಸಂವಿಧಾನದ ವಿಧಿ 14ರಲ್ಲಿ ಅಂಗವಿಕಲತೆ ಆಧಾರದ ಮೇಲೆ ನಡೆಯುವ ತಾರತಮ್ಯವನ್ನು ನಿಷೇಧಿಸುವ ಅಂಶವನ್ನು ಸೇರಿಸಿ ಅಂಗವಿಕಲರ ಹಕ್ಕುಗಳನ್ನು ಮೂಲಭೂತ ಹಕ್ಕನ್ನಾಗಿ ಘೋಷಿಸಬೇಕು ಎಂದು ಮಾಜಿ ಸಂಸದರು, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಕಾಂ. ಬೃಂದಾ ಕಾರಟ್ ಅವರು ಪ್ರತಿಪಾದಿಸಿದರು.

ಅಂಗವಿಕಲರ ಬದುಕಿನ ಪ್ರಶ್ನೆಗಳ ಬಗೆಗೆ ಸಮಗ್ರವಾದ ವಿಶೇಷ ಗುರಿ ಮತ್ತು ಉದ್ದೇಶಗಳನ್ನು ಉಳ್ಳ ಅಖಿಲ ಭಾರತ ವ್ಯಾಪ್ತಿಯ ಸಂಘಟನೆ ಮತ್ತು ಪ್ರಬಲವಾದ ರಾಷ್ಟ್ರವ್ಯಾಪಿ ಅಂಗವಿಕಲರ ಮತ್ತು ಪಾಲಕರ ಬೃಹತ್ ಚಳುವಳಿ ರೂಪಿಸುವ ಉದ್ದೇಶದಿಂದ ಬೆಂಗಳೂರಿನ ಸ್ಕೌಟ್ ಅಂಡ್ ಗೈಡ್ಸ್ ಕಟ್ಟಡದಲ್ಲಿ ಡಿಸೆಂಬರ್ 9-10, 2012 ನಡೆದ ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆಯ ವಿಸ್ತೃತ ಸಭೆಯಲ್ಲಿ ಡಿ.10 ರಂದು ಸಭೆಯನ್ನು ಉದ್ದೇಶಿಸಿ ಆಶಯ ಭಾಷಣ ಮಾಡಿ ಅವರು ಅಂಗವಿಕಲರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಕಾಣುವ ಧೋರಣೆಯನ್ನು ಬದಲಿಸಬೇಕಿದೆ ಎಂದೂ ಹೇಳಿದರು.


ಲಿಂಗ, ಭಾಷೆ, ಪ್ರದೇಶ ಜಾತಿಗಳ ಆಧಾರದ ಮೇಲೆ ತಾರತಮ್ಯ ಆದರೆ ಶಿಕ್ಷೆ ಮತ್ತು ದಂಡ ವಿಧಿಸುವಂತಹ ಅಂಶ ಸಂವಿಧಾನದಲ್ಲಿದೆ. ಅಂಗವಿಕಲತೆಯ ಆಧಾರದಲ್ಲಿ ಸಹ ತಾರತಮ್ಯವನ್ನು ನಿಷೇಧಿಸುವ ಅಂಶ ಅದರಲ್ಲಿ ಸೇರುವುದು ಅಗತ್ಯ.

ಜಗತ್ತಿನಲ್ಲಿ ಕಳೆದ ಎರಡು ದಶಕಗಳಲ್ಲಿ ಅಂಗವಿಕಲರ ಸಂಖ್ಯೆಯಲ್ಲಿ ಬಾರಿ ಹೆಚ್ಚಳವಾಗಿದೆ. ಇದಕ್ಕೆ ಬಡತನ ಅಪೌಷ್ಟಿಕತೆ ಜೊತೆಗೆ ಅಮೆರಿಕದ ಯುದ್ಧದಾಹ ಕಾರಣವಾಗಿದೆ. ಅಮೇರಿಕ ದೇಶವು ಇರಾಕ್ ದೇಶದ ಮೇಲೆ ನಡೆಸಿದ ಯುದ್ಧ, ಬಾಂಬ್ ದಾಳಿಗಳಿಂದ ಕಳೆದ 20 ವರ್ಷಗಳಲ್ಲಿ 6 ಲಕ್ಷ ಜನರು ಅಂಗವಿಕಲರಾಗಿದ್ದಾರೆ. ಇಸ್ರೇಲ್ ದೇಶದ ಕ್ರೂರ ದಾಳಿಯಿಂದ ಪಾಲಿಸ್ಟೇನ್ ದೇಶದಲ್ಲಿ 38 ಸಾವಿರ ಜನ ಅಂಗವಿಕಲರಾಗಿದ್ದಾರೆ. 85 ಸಾವಿರ ಗಾಯಾಳುಗಳು ಇಸ್ರೇಲ್ ಜೈಲುಗಳಲ್ಲಿ ನರಳುತ್ತಿದ್ದಾರೆ. ಈ ಹಿಂಸೆಗಳಲ್ಲಿ ಕಣ್ಣು, ಕಿವಿ, ಕಾಲು ಕೈಗಳನ್ನು ಕಳೆದುಕೊಂಡಿದ್ದಾರೆ ಎಂದೂ ಬೃಂದಾ ಹೇಳಿದರು.

ಸಂವೇದನಾರಹಿತ ಸರ್ಕಾರ

ಕಳೆದ ಕೇಂದ್ರ ಬಜೆಟ್‌ನಲ್ಲಿ ದೊಡ್ಡ ಬಂಡವಾಳಗಾರರಿಗೆ 5 ಲಕ್ಷ ಕೋಟಿ ರೂಗಳ ತೆರಿಗೆ ವಿನಾಯಿತಿ ನೀಡಲಾಗಿದೆ. ದೊಡ್ಡ ಬಂಡವಾಳಗರ ಕಂಪನಿಗಳು ಸಾಮಾಜಿಕ ಹೊಣೆಗಾರಿಕೆ ದೃಷ್ಟಿಯಿಂದ ತೆರಿಗೆ ನೀಡಬೇಕೆಂಬ ವಿಚಾರವನ್ನು ಒಪ್ಪುತ್ತಿಲ್ಲ. ಈ ಕಂಪನಿಗಳಿಗೆ ಸರ್ಕಾರ ತೆರಿಗೆ ವಿನಾಯಿತಿ ನೀಡುವುದು ಬಿಟ್ಟು ಸಾಮಾಜಿಕ ಹೊಣೆಗಾರಿಕೆ ತೆರಿಗೆ ಹಾಕಿ ಅದನ್ನು ಅಂಗವಿಕಲರ ಕಲ್ಯಾಣ ಸೇರಿದಂತೆ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಕೆಮಾಡಬೇಕು ಎಂದು ಅವರು ಆಗ್ರಹಿಸಿದರು.

ಅಂಗವಿಕಲರ ಸಮಸ್ಯೆಗಳ ಬಗೆಗೆ ನಮ್ಮ ಆಳುವ ಸರ್ಕಾರಗಳು ಸಂವೇದನಾ ರಹಿತವಾಗಿವೆ. ಕೇಂದ್ರ ಸರ್ಕಾರ ಬಡವರಿಗೆ ನೀಡುತ್ತಿರುವ ಸಬ್ಸಿಡಿ ಕಡಿತ ಮಾಡುತ್ತಿದೆ. ಇನ್ನಷ್ಟು ಕಡಿತ ಮಾಡುವುದು ಹೇಗೆಂದು ಚಿಂತಿಸುತ್ತಿದೆ. ಆಹಾರ ಸಬ್ಸಿಡಿ ಕಡಿತದಿಂದ ಆಹಾರ ಬೆಲೆಗಳು ಹೆಚ್ಚುತ್ತಿವೆ. ಕುಟುಂಬದ ವೆಚ್ಚ ಏರುಪೇರಾಗಿ ಅಂಗವಿಕಲರಿಗೆ ಸೂಕ್ತ ಅನುಕೂಲ-ಗಮನ ಕೊಡಲಾಗುತ್ತಿಲ್ಲ. ಎಲ್ಲ ಅಂಗವಿಕಲರಿಗೆ ಬಿಪಿಎಲ್ ಕಾರ್ಡು ಕೊಡಬೇಕು. ಯಾರಿಗಾದರೂ ಈ ಸೌಲಭ್ಯ ಬೇಡವಾದರೆ ತಾವೇ ಬಿಟ್ಟುಕೊಡಬಹುದು.



ಬಿಪಿಎಲ್ ಕಾರ್ಡ್ ನೀಡಲು ಆಧಾರವಾದ ಪರಿಗಣನಾ ಅಂಶಗಳಲ್ಲಿ ಅಂಗವಿಕಲತೆ ಎಂಬ ಪದವೇ ಇಲ್ಲ. ದೇಶದ 51 ಶೇ. ಅಂಗವಿಕಲರಿಗೆ ಶಿಕ್ಷಣದ ಹಕ್ಕು ಇಲ್ಲ. ಗ್ರಾಮಾಂತರದಲ್ಲಿ ಈ ಪ್ರಮಾಣ ಶೇ.70-75 -80 ಇದೆ. ರೈಲ್ವೆ ಇಲಾಖೆಗೊಂದು, ರಾಜ್ಯ ಸಾರಿಗೆ ಇಲಾಖೆಗೊಂದು ಹೀಗೆ ಇಲಾಖೆಗೊಂದೊಂದು ಗುರುತಿನ ಚೀಟಿ ಮಾಡಿಸಬೇಕಾದ ಪರಿಸ್ಥಿತಿ ಇದೆ. ಅಂಗವಿಕಲರ ಸಮಸ್ಯೆಗಳ ಕುರಿತ ವಿಶ್ವ ಸಂಸ್ಥೆಯ ಶಿಫಾರಸ್ಸಿನಂತೆ ನಾನಾ ರೀತಿಯ ಗುರುತಿನ ಚೀಟಿ ಬದಲಿಗೆ ದೇಶವ್ಯಾಪಿ ಒಪ್ಪಿತವಾಗುವಂತಹ ಸಾರ್ವತ್ರಿಕ ಗುರುತಿನ ಚೀಟಿ ನೀಡಲು ದೇಶದ ಯೋಜನಾ ಆಯೋಗ ಕ್ರಮ ಕೈಗೊಳ್ಳಬೇಕು, ಎಲ್ಲ ಅಂಗವಿಕಲರಿಗೆ ಉಚಿತ ಆರೋಗ್ಯದ ಹಕ್ಕು, ಉಚಿತ ಶಿಕ್ಷಣದ ಹಕ್ಕು, ಆಹಾರದ ಹಕ್ಕು ದೊರೆಯುವಂತಾಗಬೇಕು ಎಂದೂ ಬೃಂದಾ ಅವರು ಆಗ್ರಹಿಸಿದರು.

ಸಂವಿಧಾನ ಮತ್ತು ಕಾರ್ಯಕ್ರಮದ ಕುರಿತು ಚರ್ಚೆ

ಈ ಸಭೆಯಲ್ಲಿ ತ್ರಿಪುರ, ಪಶ್ಚಿಮ ಬಂಗಾಳ, ಜಾರ್ಖಂಡ್, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ ಅಂಗವಿಕಲರ ಮತ್ತು ಪಾಲಕರ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು. ಚರ್ಚೆಯ ಮೂಲಕ ಇಲ್ಲಿ ರೂಪಿಸಲಾಗುತ್ತಿರುವ ಅಂಗವಿಕಲರ ಮತ್ತು ಪಾಲಕರ ಸಂಘಟನೆಯ ಸಂವಿಧಾನ ಮತ್ತು ಕಾರ್ಯಕ್ರಮದ ಪ್ರಮುಖ ಅಂಶ ಆಳುವ ಸರ್ಕಾರಗಳು ಅಂಗವಿಕಲರ ಪ್ರಶ್ನೆಯಲ್ಲಿ ಮಧ್ಯ ಪ್ರವೇಶ ಮಾಡಬೇಕು, ಸರ್ಕಾರ ಅಂಗವಿಕಲರ ಸಮಸ್ಯೆಗಳನ್ನು ಬಗೆ ಹರಿಸುವ ಹೊಣೆಗಾರಿಕೆಯನ್ನು ಹೊತ್ತು ಕೊಳ್ಳಬೇಕು ಎಂಬುದಾಗಿದೆ ಎಂದು ಬೃಂದಾ ಕಾರಾಟ್ ಅವರು ಇದೇ ಆಶಯ ಭಾಷಣದಲ್ಲಿ ಹೇಳಿದರು. ಮುಂದೆ ನಡೆಯಲಿರುವ ಪ್ರಥಮ ಆಖಿಲ ಭಾರತ ಸಮ್ಮೇಳನದಲ್ಲಿ ಸಂವಿಧಾನ ಕಾರ್ಯಕ್ರಮವನ್ನು ಅಂತಿಮಗೊಳಿಸಿ ಅಂಗವಿಕಲರ ಮತ್ತು ಪಾಲಕರ ಬೃಹತ್ ಚಳುವಳಿ ರೂಪಿಸುವ ತೀರ್ಮಾನದೊಂದಿಗೆ ಸಭೆ ಮುಕ್ತಾಯಗೊಂಡಿತು.

ಪ್ರಬಲವಾದ ರಾಷ್ಟ್ರವ್ಯಾಪಿ ಅಂಗವಿಕಲರ ಮತ್ತು ಪಾಲಕರ ಬೃಹತ್ ಚಳುವಳಿ ಅಗತ್ಯ

ಡಿ. 09. 2012 ರಂದು ಪಶ್ಚಿಮ ಬಂಗಾಳದ ಮಾಜಿ ಸಚಿವರು ಹಾಗೂ ಪಶ್ಚಿಮ ಬಂಗಾಳ ಅಂಗವಿಕಲರ ಸಂಘಟನೆಯ ಅಧ್ಯಕ್ಷರಾದ ಕಾಂತಿ ಗಂಗೂಲಿಯವರು ಸಭೆಯನ್ನು ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಅವರು ಆರಂಭದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದರು. 'ಪರಿವಾರ್' ಸಂಘಟನೆಯ ನಿರ್ದೇಶಕರಾದ ಗಡ್ಕರಿ ಅವರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ದೇಶದಲ್ಲಿ ಎಲ್ಲ ರೀತಿಯ ಅಂಗವಿಕಲತೆಗಳು ಇರುವಂತಹವರನ್ನೂ ಮತ್ತು ಅವರ ಕುಟುಂಬ ಸದಸ್ಯರನ್ನು ಒಳಗೊಳ್ಳುವಂತಹ ಸಂಘಟನೆಯನ್ನು ರೂಪಿಸುವುದು ಅಗತ್ಯವಾಗಿದೆ, ಎಂದ ಜಿ.ಎನ್.ನಾಗರಾಜ್ ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆಯು ತನ್ನ ಪ್ರಥಮ ಸಮ್ಮೇಳನಕ್ಕೂ ಮೊದಲೇ ದೇಶದ ಅತಿ ಹೆಚ್ಚು ಸದಸ್ಯರನ್ನುಳ್ಳ ಸಂಘಟನೆಯಾಗಿದೆ ಮತ್ತು ರಾಷ್ಟ್ರೀಯ ವ್ಯಾಪ್ತಿಯಲ್ಲಿ ವಿಶಾಲವಾಗಿ ಅಂಗವಿಕಲರನ್ನು ತಲುಪಿರುವ ಅತಿದೊಡ್ಡ ಸಂಘಟನೆಯಾಗಿದೆ ಇದು ಅಂಗವಿಕಲರನ್ನು ಮತ್ತು ಅವರ ಕುಟುಂಬ ಸದಸ್ಯರನ್ನು ಹಳ್ಳಿಯಿಂದ ದೆಹಲಿಯವರೆಗೆ ಸಂಘಟಿಸಿ ಹೋರಾಡಲಿದೆ. ಅಂಗವಿಕಲತೆ ಆಕಸ್ಮಿಕವಲ್ಲ, ಕೇವಲ ಅಪಘಾತವು ಅಲ್ಲ. ಅಂಗವಿಲ[illegible] ಸಮಸ್ಯೆಗೂ ನಮ್ಮ ಸಮಾಜದ ಸಾಮ[illegible] ರಚನೆ, ರಾಜಕೀಯ ವ್ಯವಸ್ಥೆಗೂ [illegible] ಸಂಬಂಧವಿದೆ. ಇತರ ಸಂಘಟನೆಗಳಿಗೆ [illegible] ಒಳನೋಟ ಇಲ್ಲದ್ದರಿಂದ ಅವು ಸಮಸ್ಯೆ[illegible] ಮೂಲವನ್ನು ಗುರುತಿಸುವಲ್ಲಿಂ[illegible] ವಿಫಲವಾಗುತ್ತವೆ. ಹಾಗಾಗಿ ಅವುಗ[illegible] ಅಂಗವಿಲರ ಸಮಸ್ಯೆಗಳಿಗೆ ಮೂಲಭ[illegible] ಪರಿಹಾರ ಒದಗಿಸಲಾರವು ಅಂದು [illegible] ಆಭಿಪ್ರಾಯ ಪಟ್ಟರು.

ದೇಶದಲ್ಲಿ ಸ್ವತಃ ಅಂಗವಿಕಲರಿಗ[illegible] ಅಂಗವಿಕಲರ ಪಾಲಕರಿಗೂ ಅಂಗವಿಕ[illegible] ಹಕ್ಕುಗಳು ಮತ್ತು ಅವರಿಗಾಗಿ ಇರುವ ಯೋಜ[illegible] ಸೌಲಭ್ಯಗಳ ಅರಿವು ಇಲ್ಲ. ಶಿಕ್ಷಣ, ಅರ್ಥ[illegible] ಆರೋಗ್ಯ ಮುಂತಾದ ಅಂಗವಿಕಲರ ಬದುಕಿ[illegible] ಕೆಲವು ಅಂಶಗಳ ಬಗೆಗೆ ಗಮನ ನೀಡು[illegible] ಸಂಘಟನೆಗಳು ಮತ್ತು ಎನ್.ಜಿ.ಓ. ಮಾತ್ರ ಅಲ್ಲ[illegible] ಕೆಲಸಮಾಡುತ್ತಿವೆ. ಅವು ಕೂಡ ಕೇವ[illegible] ಮಹಾನಗರಗಳಲ್ಲಿ ಮಾತ್ರ ಕೆಲಸ ಮಾಡುತ್ತಿ[illegible] ಗ್ರಾಮಾಂತರ ಪ್ರದೇಶಗಳು ಮತ್ತು ಪಟ್ಟಣಗಳ[illegible] ಈ ಸಂಘಟನೆಗಳು ತಲುಪಿಲ್ಲ. ನಗ[illegible] ಪ್ರದೇಶಗಳ ಮಧ್ಯಮ ವರ್ಗದ ಕುಟುಂಬಗಳ[illegible] ಮಾತ್ರ ತಮ್ಮ ಕುಟುಂಬ ಸದಸ್ಯರಾ[illegible] ಅಂಗವಿಕಲರಿಗೆ ಒಂದಷ್ಟು ಸೌಲಭ್ಯ ಒದಗಿಸ[illegible] ಸಾಧ್ಯ. ಬಡವರಿಗೆ ಕೆಳ ಮಧ್ಯಮ ವರ್ಗದವ[illegible] ಈ ಸೌಲಭ್ಯಗಳನ್ನು ಕೊಡಿಸ[illegible] ಸಾಧ್ಯವಾಗದಿರುವುದರಿಂದ ಅಂಗವಿಕ[illegible] ದಾರುಣ ಅವಸ್ಥೆಯಲ್ಲಿ ಬದುಕ ಬೇಕಾದ ಪ[illegible] ಇದೆ. ಈ ಹಿನ್ನೆಲೆಯಲ್ಲಿ ಸಮಗ್ರವ[illegible] ಅಂಗವಿಕಲರ ಬದುಕಿನ ಪ್ರಶ್ನೆಗಳ ಬಗೆಗೆ ವಿಶೇ[illegible] ಗುರಿ ಮತ್ತು ಉದ್ದೇಶಗಳನ್ನು ಉಳ್ಳ ಅಖಿ[illegible] ಭಾರತ ವ್ಯಾಪ್ತಿಯ ಸಂಘಟನೆ ರೂಪಿಸುವು[illegible] ಅಗತ್ಯವಾಗಿದೆ. ಮತ್ತು ಪ್ರಬಲವಾದ ರಾಷ್ಟ್ರವ್ಯಾ[illegible] ಅಂಗವಿಕಲರ ಮತ್ತು ಪಾಲಕರ ಬೃಹ[illegible] ಚಳುವಳಿ ರೂಪಿಸುವುದು ಅಗತ್ಯವಾಗಿದೆ ಎಂ[illegible] ಜಿ.ಎನ್.ನಾಗರಾಜ್ ಪ್ರತಿಪಾದಿಸಿದ[illegible] ಸಂಘಟನೆಯ ಅಖಿಲ ಭಾರತ [illegible] ಸಂಚಾಲಕರಾದ ಮುರಳೀಧರನ್ ಸಂಘಟನೆ[illegible] ಸಂವಿಧಾನದ ಕರಡನ್ನು ಸಭೆಯ ಮುಂ[illegible] ಮಂಡಿಸಿದರು.


ಗಾಲಿ ಕುರ್ಚಿಯಲ್ಲಿ ಮಾತ್ರವೇ ಓಡಾಡ[illegible] ಸಾಧ್ಯವಾದರೂ ಅಂಗವಿಲಕರ ಸಂಘಟನೆಗ[illegible] ಚಳುವಳಿಗಾಗಿ ನಾನು ಶ್ರಮಿಸುತ್ತೇನೆ ಎಂ[illegible] ಉತ್ಸಾಹದಿಂದ ಪಾಲ್ಗೊಂಡ ಪ್ರಭಾತ್ ರಾ[illegible] ಅಲ್ಲಿದ್ದರು. ಅಂಗವಿಕಲ ಮಹಿಳೆಯರು [illegible] ಯುವತಿಯರು ತಾವೇನು ಯಾರಿಗಿಂತ ಕಡಿ[illegible] ಇಲ್ಲ. ಎಂದು ದಿಟ್ಟತನದಿಂದ ಚರ್ಚೆಯ[illegible] ತೊಡಗಿದ್ದರು. ಆಟೋರಿಕ್ಷಾ ಚಾಲಕ[illegible] ಸಂಘಟನೆಯ ಮುಖಂಡರು, ಸ್ವತ[illegible] ಅಂಗವಿಕಲರೂ ಆದ ಕಾಂ. ವೆಂಕಟೇ[illegible] ಎರಡು ದಿನಗಳ ಈ ಸಭೆಯ ಯಶಸ್ವಿಗಾ[illegible] ಕೆಲಸ ಮಾಡುತ್ತಿದ್ದ ರೀತಿ ಅಂಗವಿಕಲರಲ್ಲ[illegible] ಸಾಮಾನ್ಯರು ನಾಚಿಕೊಳ್ಳುವಂತೆ ಮಾಡುತ್ತಿ[illegible]

ಜನಶಕ್ತಿ
ಕನ್ನಡ ವಾರಪತ್ರಿಕೆ

ಎಫ್‌ಡಿಐ ಮತದಾನದ ನಂತರ: ವಾಲ್‌ಮಾರ್ಟ್ ಸಾಲದೆಂಬಂತೆ ಅತ್ತ ಸೈಕಲ್, ಇತ್ತ ಆನೆ

ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿಯ ಪ್ರಶ್ನೆಯ ಮೇಲೆ ಸದನದಲ್ಲಿ ಮತದಾನ ನಡೆಯುವಂತೆ ಪ್ರತಿಪಕ್ಷಗಳು ಪಟ್ಟುಹಿಡಿದರೆ ಏನು ಮಾಡುವುದೆಂಬ ಭಯ ಕಾಡುತ್ತಿದ್ದ ಯುಪಿಎ ಈ ವರ್ಷವೂ ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ನಾಲ್ಕು ದಿನಗಳು ವ್ಯರ್ಥಗೊಳ್ಳಲು ಬಿಟ್ಟಿತು. ತೃಣಮೂಲ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡುದರಿಂದ ಅಲ್ಪಮತಕ್ಕಿಳಿದ ಕಾಂಗ್ರೆಸ್ ನೇತೃತ್ವದ ಯುಪಿಎ-2 ಸರಕಾರ ಹೇಗಾದರೂ ಬಹುಮತ ಉತ್ಪಾದಿಸಲು ಈ ನಾಲ್ಕು ದಿನಗಳನ್ನು ಬಳಸಿಕೊಂಡಿತು ಎಂಬುದೀಗ ಸ್ಪಷ್ಟವಾಗಿದೆ. ಎಫ್‌ಡಿಐ ವಿರುದ್ಧ ರಾಷ್ಟ್ರೀಯ ಹರತಾಳದಲ್ಲಿ ಭಾಗವಹಿಸಿದ್ದ ಪಕ್ಷಗಳು ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲೂ ಎಫ್‌ಡಿಐ ವಿರುದ್ಧವೇ ಮಾತನಾಡಿದವು. ಆದರೆ ಮತದಾನ ನಡೆಯುವ ವೇಳೆಗೆ ಎಸ್‌ಪಿ ಮತ್ತು ಬಿಎಸ್‌ಪಿ ಸದಸ್ಯರು ಸಭಾತ್ಯಾಗ ಮಾಡಿ ಪ್ರತಿಪಕ್ಷಗಳು ಮಂಡಿಸಿದ್ದ ಠರಾವು ಬಿದ್ದು ಹೋಗಲು ಅನುಕೂಲ ಮಾಡಿಕೊಟ್ಟವು. ರಾಜ್ಯಸಭೆಯಲ್ಲಂತೂ ಬಿಎಸ್‌ಪಿ ಪ್ರತಿಪಕ್ಷಗಳ ಠರಾವಿನ ವಿರುದ್ಧವೇ ಮತನೀಡಿ, ತನ್ನದೇ ವಿರೋಧವನ್ನೂ ವಿರೋಧಿಸಿತು.

ಯುಪಿಎ ಅಂಗವಾಗಿರುವ ಡಿಎಂಕೆಯ ಸದಸ್ಯರೊಬ್ಬರು ಇದು ವಿದೇಶಿ ನೇರ ಹೂಡಿಕೆಯಲ್ಲ, ವಿದೇಶಿ ನೇರ ಅತಿಕ್ರಮಣ ಎಂದೇ ಗುಡುಗಿದರು. ಅದರೆ ಕೊನೆಗೆ ಆ ಪಕ್ಷವೂ ಈ ವಿದೇಶಿ ನೇರ ಅತಿಕ್ರಮಣದ ಪರವಾಗಿ ಮತನೀಡಿತು! ಯುಪಿಎ-2 ಸರಕಾರದ ವಿರುದ್ಧ ಮತ ನೀಡಿದರೆ ಅದರಿಂದ ಕೋಮುವಾದಿ ಬಿಜೆಪಿಗೆ ಪ್ರಯೋಜನವಾಗಬಹುದಾದ್ದರಿಂದ ತಾನು ಹಾಗೆ ಮಾಡಲಾರೆ ಎಂಬುದು ಅದು ನೀಡಿರುವ ಸಬೂಬು. ನಿಜಕ್ಕೂ ವಿಚಿತ್ರ ತರ್ಕವೇ-ಒಂದಿಡೀ ಅವಧಿಯಲ್ಲಿ ಅದೇ ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರಕಾರದಲ್ಲಿ ಇದ್ದ ಒಂದು ಪಕ್ಷ ಇದೇ ಅಲ್ಲವೇ? ತೆರೆಯ ಹಿಂದೆ ಏನೇನು ನಡೆಯಿತೋ, ಅಂತೂ ಅಲ್ಪಮತದ ಯುಪಿಎ-2 ಸರಕಾರ ಮತ್ತೊಮ್ಮೆ ಬಹುಮತ ಗಿಟ್ಟಿಸಿಕೊಂಡಿದೆ.




ಈ ಸಭೆಯಿಂದ ಹೊರಬರುತ್ತ ಪ್ರಧಾನ ಮಂತ್ರಿಗಳು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ವಿರುದ್ಧದ ಠರಾವನ್ನು ಸೋಲಿಸುವ ಬಹುಮತ ತನ್ನ ಸರಕಾರಕ್ಕೆ ಇದೆ ಎಂದು ಹೆಮ್ಮೆಯಿಂದ ಘೋಷಿಸಿದ್ದರು. ಆದರೂ, ಸರಕಾರದ ಕಾರ್ಯಕ್ಷೇತ್ರದಲ್ಲಿ ಬರುವ ಒಂದು ವಿಷಯದ ಮೇಲೆ ಸಂಸತ್ತಿನಲ್ಲಿ ಮತದಾನ ಪಡೆಯುವ ಮೂಲಕ ಒಂದು ಪೂರ್ವ ನಿದರ್ಶನವನ್ನು ತಾನು ನಿರ್ಮಿಸ ಬಯಸುವುದಿಲ್ಲ ಎಂದು ಕಾಂಗ್ರೆಸ್ ಹೇಳುತ್ತಲೇ ಇತ್ತು.

ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ ಇಂತಹ ಪೂರ್ವನಿದರ್ಶನ ಈಗಾಗಲೇ ಮಾರ್ಚ್ 1, 2001ರಂದು ಬಾಲ್ಕೊ ಶೇರು ಮಾರಾಟದ ಸರಕಾರದ ನಿರ್ಣಯದ ಮೇಲೆ ಚರ್ಚೆ ಮತ್ತು ಮತದಾನ ನಡೆದಾಗಲೇ ನಿರ್ಮಾಣಗೊಂಡಿದೆ. ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿ ಒಂದು ಕಾರ್ಯಾಂಗದ ನಿರ್ಣಯ ಎಂಬುದೇ ಒಂದು ಸಂಪೂರ್ಣ ದೋಷಪೂರ್ಣ ತರ್ಕ ಎಂಬುದು ಸ್ವತಃ ಸಿದ್ಧ. ವಿದೇಶಿ ವಿನಿಮಯ ನಿರ್ವಹಣಾ ಕಾನೂನು(ಫೆಮಾ), 1999 ಈ ವಲಯದಲ್ಲಿ ಎಫ್‌ಡಿಐಯನ್ನು ಸ್ಪಷ್ಟಮಾತುಗಳಲ್ಲಿ ನಿಷೇಧಿಸಿದೆ. ಫೆಮಾ ನಿಯಮಗಳನ್ನು ರೂಪಿಸಿರುವುದು ರೀಝರ್ವ್ ಬ್ಯಾಂಕ್. ಈಗ ಎಫ್‌ಡಿಐಗೆ ಅನುಮತಿ ನೀಡುವ ಯಾವುದೇ ನಿರ್ಣಯ ಕೈಗೊಳ್ಳಬೇಕಾದರೆ ಈ ಫೆಮಾ ನಿಯಮಗಳ ತಿದ್ದುಪಡಿ ಆಗಬೇಕಾಗಿದೆ. ಇಂತಹ ಯಾವುದೇ ತಿದ್ದುಪಡಿಯನ್ನು ರಿಝರ್ವ್ ಬ್ಯಾಂಕ್ ಇನ್ನೂ ಪ್ರಕಟಿಸದಿದ್ದಾಗ, ಈ ನಿರ್ಣಯವನ್ನು ಕಾರ್ಯಗತಗೊಳಿಸುವಾಗ ಅಗತ್ಯ ಕಾನೂನು ಪ್ರಕ್ರಿಯೆಯನ್ನು ಪಾಲಿಸಿಲ್ಲ ಎಂದು ಆಪಾದಿಸುವ ಒಂದು ರಿಟ್ ಅರ್ಜಿ ಸುಪ್ರಿಂ ಕೋರ್ಟಿನ ಮುಂದೆ ಬಂತು. ಅಕ್ಟೋಬರ್ 15, 2012ರಂದು ಸುಪ್ರಿಂ ಕೋರ್ಟ್ ಇದನ್ನು ಗಮನಿಸಿದಾಗ, ರಿಝರ್ವ್ ಬ್ಯಾಂಕ್ ಎರಡು ವಾರಗಳೊಳಗೆ ಅಗತ್ಯ ತಿದ್ದುಪಡಿಗಳನ್ನು ಪ್ರಕಟಿಸುವುದಾಗಿ ಅಟಾರ್ನಿ ಜನರಲ್ ಸರ್ವೋಚ್ಚ ನ್ಯಾಯಾಲಯಕ್ಕೆ ಮುಚ್ಚಳಿಕೆ ಕೊಟ್ಟರು. ಈ ಪ್ರಕಾರ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶವಾಗುವಂತೆ ಸಂಬಂಧಪಟ್ಟ ನಿಯಮಕ್ಕೆ ತಿದ್ದುಪಡಿಯನ್ನು ರಿಝರ್ವ್ ಬ್ಯಾಂಕ್ ಪ್ರಕಟಿಸಿತು. ಇದು ಭಾರತದ ರಾಜಪತ್ರ(ಗಝೆಟ್)ದಲ್ಲಿ ಅಕ್ಟೋಬರ್ 30,2012ರಂದು ಪ್ರಕಟಗೊಂಡಿತು.

ಫೆಮಾ ಕಾನೂನು, 1999 ರ ವಿಭಾಗ 48 ರಿಝರ್ವ್ ಬ್ಯಾಂಕ್ ಈ ಕಾನೂನಿನ ಅಡಿಯಲ್ಲಿ ನಿಯಮಾವಳಿಗಳಿಗೆ ಮಾಡುವ ಯಾವುದೇ ತಿದ್ದುಪಡಿಯನ್ನು 'ಸಾಧ್ಯವಾದಷ್ಟು ಬೇಗನೇ' ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಬೇಕು ಎಂದು ಸ್ಪಷ್ಟ ಮಾತುಗಳಲ್ಲಿ ವಿಧಿಸಿದೆ. ಹೀಗೆ ಮಂಡಿಸಿದ ಮೇಲೆ ಎರಡೂ ಸದನಗಳ ಯಾವುದೇ ಸದಸ್ಯರು ರಿಝರ್ವ್ ಬ್ಯಾಂಕ್ ತಿದ್ದುಪಡಿಗೆ ತಿದ್ದುಪಡಿಗಳನ್ನು ಸೂಚಿಸಬಹುದು, ಅಥವ ರಿಝರ್ವ್ ಬ್ಯಾಂಕ್ ತಿದ್ದುಪಡಿಯನ್ನೇ ರದ್ದುಗೊಳಿಸಲು ಕೇಳಬಹುದು. ಇದನ್ನು 30 ದಿನಗಳೊಳಗೆ ಮಾಡಬೇಕು. ಇಂತಹ ಯಾವುದೇ ತಿದ್ದುಪಡಿಗಳನ್ನು ಸದನ ಪರಿಶೀಲಿಸಬೇಕು ಮತ್ತು ನಿರ್ಧರಿಸಬೇಕು. ಇದು ಮತದಾನದ ಮೂಲಕ ಮಾತ್ರವೇ ಸಾಧ್ಯ. ಆದ್ದರಿಂದ ಸಂಸತ್ತಿನಲ್ಲಿ ಈ ವಿಷಯದಲ್ಲಿ ಮತದಾನವನ್ನು ಅದು ತಪ್ಪಿಸಲು ಸಾಧ್ಯವಿರಲಿಲ್ಲ.

ಆದರೆ ಕಾಂಗ್ರೆಸ್ ಹೇಗಾದರೂ ಬಹುಮತ ಗಿಟ್ಟಿಸಲು ಎಂತಹ ಮಟ್ಟಕ್ಕೂ ಇಳಿಯಬಲ್ಲುದು ಎಂಬುದು ಈ ಹಿಂದೆ ಮತ್ತೆ-ಮತ್ತೆ ಕಂಡು ಬಂದಿದೆ. 1993ರಲ್ಲಿ ಸಿಪಿಐ(ಎಂ)ನ ಅವಿಶ್ವಾಸ ಠರಾವನ್ನು ಎದುರಿಸಬೇಕಾಗಿ ಬಂದಾಗ ಅಲ್ಪಮತದಲ್ಲಿದ್ದ ಕಾಂಗ್ರೆಸ್ ಸರಕಾರ ಎಂತಹ ವಿಧಾನಗಳನ್ನು ಬಳಸಿ ಆ ಠರಾವನ್ನು ಸೋಲಿಸಿತು ಎಂಬುದನ್ನು ಈಗ ಕುಖ್ಯಾತವಾಗಿರುವ ಝಾರ್ಖಂಡ್ ಲಂಚ ಮೊಕದ್ದಮೆ ಬಯಲು ಮಾಡಿದೆ. 2008ರಲ್ಲಿ ಭಾರತ-ಅಮೆರಿಕ ಪರಮಾಣು ವ್ಯವಹಾರವನ್ನು ವಿರೋಧಿಸಿ ಎಡಪಕ್ಷಗಳು ತಮ್ಮ ಬಾಹ್ಯ ಬೆಂಬಲವನ್ನು ಹಿಂತೆಗೆದುಕೊಂಡಾಗ ಯುಪಿಎ-1 ಸರಕಾರ ಅಲ್ಪಮತಕ್ಕೆ ಇಳಿಯಿತು. ಆಗ ಅದು ಮತದಾನದಲ್ಲಿ ಗೆದ್ದದ್ದು ನಾಚಿಕೆಹೀನ ಕುದುರೆ ವ್ಯಾಪಾರದ ಮೂಲಕ. 'ಓಟಿಗಾಗಿ ನೋಟು' ಹಗರಣದಲ್ಲಿ ಅದು ಬಯಲಾಗಿದೆ. ಈ ಬಾರಿಯೂ ಬಹುಮತ ಗಿಟ್ಟಿಸಲು ಕುದುರಿಸಿದ ವ್ಯವಹಾರಗಳೇನು ಎಂದು ದೇಶದ ಮುಂದೆ ಬಯಲಾಗಲು ಬಹಳ ಸಮಯವೇನೂ ಕಾಯಬೇಕಾಗಿ ಬರಲಿಕ್ಕಿಲ್ಲ. ಒಂದು ಸಂಕೇತ ಈಗಾಗಲೇ ಸಿಕ್ಕಿದೆ. ಈ ಬಹುಮತ ಉತ್ಪಾದನೆಯಲ್ಲಿ ವಾಲ್ ಮಾರ್ಟ್ ಅಥವಾ ಭಾರತದ ಬಂಡವಾಳಶಾಹಿಗಳ ಪಾತ್ರದ ಬಗ್ಗೆ ಊಹಾಪೋಹಗಳೆದ್ದಿವೆ. ಯುಪಿಎ-2 ಸರಕಾರ ಅರೆಮನಸ್ಸಿನಿಂದಲೇ ಈಗ ಇದರ ನ್ಯಾಯಾಂಗ ತನಿಖೆಗೆ ಒಪ್ಪಿದೆ. (ಈ ಸಂಚಿಕೆಯಲ್ಲಿ ಈಬಗ್ಗೆ ಪ್ರಕಟವಾಗಿರುವ ಪ್ರತ್ಯೇಕ ಲೇಖನವನ್ನು ನೋಡಿ).

ಈ ನಡುವೆ ಈ ಯುಪಿಎ-2 ಸರಕಾರ ತನ್ನ ಉಳಿದ ಅಧಿಕಾರಾವಧಿಯ ಆದ್ಯಂತವೂ ಈ 'ಬಹುಮತ ಉತ್ಪಾದನೆ'ಯ ಕೆಲಸ ಮಾಡುತ್ತಲೇ ಇರಬೇಕಾಗುತ್ತದೆ ಎಂಬುದರ ಸಂಕೇತವೂ ಕಾಣಬಂದಿದೆ. ಪರಿಶಿಷ್ಟ ಜಾತಿ/ಪಂಗಡಗಳ ಅಭ್ಯರ್ಥಿಗಳಿಗೆ ಬಡ್ತಿಯಲ್ಲಿ ಮೀಸಲಾತಿಯ ಪ್ರಶ್ನೆಯಲ್ಲಿ ಎಫ್‌ಡಿಐ ಮತದಾನದಲ್ಲಿ ನೆರವಾದ ಎಸ್‌ಪಿ, ಬಿಎಸ್‌ಪಿಗಳ ನಡುವಿನ ಕಿತ್ತಾಟ ಅದನ್ನು ಮತ್ತೊಮ್ಮೆ ಪೇಚಿಗೆ ಸಿಲುಕಿಸಿದೆ-ಸೈಕಲ್ ಸವಾರಿ ಮತ್ತು ಆನೆಸವಾರಿ ಒಂದೇ ವೇಳೆಗೆ ಮಾಡಬೇಕಾದ ಪೇಚು.



ವೇದರಾಜ ಎನ್.ಕೆ.

ಸತತ ಏಳನೇ ತಿಂಗಳೂ ರಫ್ತು ಇಳಿಕೆ, ಆಮದು ಏರಿಕೆ

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಮತ್ತಿತರ 'ಆರ್ಥಿಕ ಸುಧಾರಣೆ'ಗಳ ಕ್ರಮಗಳ ಮೂಲಕ ದೇಶದ ಆರ್ಥಿಕವನ್ನು ಆವರಿಸಿದ್ದ ಕಾರ್ಮೋಡಗಳು ಕರಗಿವೆ ಎಂದು ಪ್ರಧಾನ ಮಂತ್ರಿಗಳು ಘೋಷಿಸಿದ ಒಂದು ತಿಂಗಳ ನಂತರವೂ ಕಾರ್ಮೋಡಗಳು ಕರಗುವ ಲಕ್ಷಣಗಳೇನೂ ಕಾಣುತ್ತಿಲ್ಲ. ಈ ವಾರ ಪ್ರಕಟವಾದ ಆಮದು-ರಫ್ತು ಅಂಕಿ-ಅಂಶ ತದ್ವಿರುದ್ಧವಾದುದನ್ನೆ ತೋರಿಸುತ್ತಿವೆ. ಕಳೆದ ವರ್ಷ ನವಂಬರಿಗೆ ಹೋಲಿಸಿದರೆ, ರಫ್ತು ಪ್ರಮಾಣದಲ್ಲಿ 4.17ಶೇ. ಇಳಿಕೆಯಾಗಿದೆ, ಆದರೆ ಆಮದಿನಲ್ಲಿ 6.18 ಶೇ. ಏರಿಕೆಯಾಗಿದೆ. ಒಟ್ಟು ವ್ಯಾಪಾರ ಕೊರತೆ 19.28 ಶತಕೋಟಿ ಡಾಲರುಗಳಿಗೇರಿದೆ.

ಈ ಪರಿಸ್ಥಿತಿಯನ್ನು ಸುಧಾರಿಸಲು ವಾಣಿಜ್ಯ ಮಂತ್ರಿಗಳು ಕೆಲವು ಕ್ರಮಗಳನ್ನು ಪ್ರಕಟಿಸಲಿದ್ದಾರಂತೆ; ಕ್ರಮಗಳೆಂದರೆ ಯಥಾಪ್ರಕಾರ ರಫ್ತು ಉತ್ತೇಜನೆಯ ಹೆಸರಿನಲ್ಲಿ ಇನ್ನಷ್ಟು ಸಬ್ಸಿಡಿಗಳು! 'ಹಣಕಾಸು ಕೊರತೆ'ಯ ಪ್ರಶ್ನೆ ಇಲ್ಲಿ ಅದನ್ನು ಬಾಧಿಸಲಾರದು.

★

ಒಂದು ವರ್ಷವಾದರೂ ಒಂದು ರೂಪಾಯಿ 'ವರ್ಗಾವಣೆ'ಯೂ ಇಲ್ಲ!

ಇದು 'ನಗದು ವರ್ಗಾವಣೆ' ಯೋಜನೆಯ ಒಂದು ಪ್ರಾಯೋಗಿಕ ಕಾರ್ಯಕ್ರಮದ ಹೆಚ್ಚಿನ ಫಲಾನುಭವಗಳ ಅನುಭವ.

ಪುಟ 15 ಕ್ಕೆ

ಜಗದಗಲ

ಶರತ್‌ಚಂದ್ರ

14ನೇ ಕಮ್ಯುನಿಸ್ಟ್ ಪಕ್ಷಗಳ ಅಂತರ್‍ರಾಷ್ಟ್ರೀಯ ಸಭೆ ಲೆಬನಾನಿನಲ್ಲಿ

14ನೇ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಅಂತರ್‍ರಾಷ್ಟ್ರೀಯ ಸಭೆ ಲೆಬನಾನಿನ ರಾಜಧಾನಿ ಬೈರೂತಿನಲ್ಲಿ ನವೆಂಬರ್ 23ರಿಂದ 3 ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು. ಈ ಸಭೆಯಲ್ಲಿ 44 ದೇಶಗಳಿಂದ ಬಂದ 66 ಪಕ್ಷಗಳ 100 ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ವಿಷಯ ಹೀಗಿತ್ತು." ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿಯ ಆಕ್ರಾಮಕತೆಯ ವಿರುದ್ಧ, ಜನತೆಯ ಸಾಮಾಜಿಕ-ಆರ್ಥಿಕ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಆಕಾಂಕ್ಷೆಗಳನ್ನು ಈಡೇರಿಸಲು, ಸಮಾಜವಾದ ಸ್ಥಾಪಿಸಲು - ಹೋರಾಟಗಳನ್ನು ಬಲಗೊಳಿಸಿ". ಲೆಬನಾನಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಡಾ.ಖಲೀದ್ ಹದಾದಾ ಸಭೆಯನ್ನು ಉದ್ಘಾಟಿಸಿದರು. ಉಪ ಪ್ರಧಾನ ಕಾರ್ಯದರ್ಶಿ ಮತ್ತು ಅಂತರ್‍ರಾಷ್ಟ್ರೀಯ ವಿಭಾಗದ ಮುಖ್ಯಸ್ಥೆ ಮೇರಿ ನಸಿಫ್-ದೆಬ್ಸ್ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಲೆಬನಾನಿ ಕಮ್ಯುನಿಸ್ಟ್ ಪಕ್ಷದ ಶ್ರೀಮಂತ ಕ್ರಾಂತಿಕಾರಿ ಚರಿತ್ರೆಯನ್ನು ದಾಖಲಿಸಿದ ಒಂದು ಕಿರುಚಿತ್ರವನ್ನು ಉದ್ಘಾಟನೆಯಲ್ಲಿ ಪ್ರದರ್ಶಿಸಲಾಯಿತು.



ಡಾ.ಖಲೀದ್ ಉದ್ಘಾಟಿಸಿ ಮಾತನಾಡುತ್ತಾ ಅಮೆರಿಕದ 'ಹೊಸ ಮಧ್ಯ ಪ್ರಾಚ್ಯ' ನೀತಿ ಮತ್ತು ಆಕ್ರಾಮಕತೆಯನ್ನು ಟೀಕಿಸಿ, ಇಸ್ರೇಲಿ ಯುದ್ಧಕೋರತನದ ವಿರುದ್ಧ ಗಾಜಾ ಪಟ್ಟಿ ಮತ್ತು ಪ್ಯಾಲೆಸ್ಟೈನ್ನರ ಧೀರ ಪ್ರತಿರೋಧವನ್ನು ಶ್ಲಾಘಿಸಿದರು. ಉದ್ಘಾಟನೆಯ ನಂತರ ಸಭೆ 'ಬೈರೂತ್ ಘೋಷಣೆ'ಯ ಕರಡನ್ನು ಮಂಡಿಸಲಾಯಿತು. ಸಭೆ ಆ ಕರಡನ್ನು ಚರ್ಚೆಗೆ ಎತ್ತಿಕೊಂಡಿತು. ಚರ್ಚೆ ಏಳು ಗೋಷ್ಟಿಗಳಲ್ಲಿ ನಡೆಯಿತು. ಎರಡನೇ ದಿನ ಬೈರೂತಿನಲ್ಲಿ ಇರುವ ವಿಶ್ವಸಂಸ್ಥೆಯ ಕಚೇರಿಯ ಮುಂದೆ ಗಾಜಾ ಪಟ್ಟಿಯ ಮೇಲೆ ಇಸ್ರೇಲಿ ಬರ್ಬರ ದಾಳಿಯ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಇದರಲ್ಲಿ ಸಭೆಯ ಪ್ರತಿನಿಧಿಗಳ ಭಾಗವಹಿಸಿದರು. ಭಾರತದ ಸಿಪಿಐ(ಎ ಸೇರಿದಂತೆ ಹಲವು ಪ್ರಮುಖ ಪಕ್ಷ (ರಶ್ಯಾ, ದ.ಆಫ್ರಿಕಾ, ಗ್ರೀಸ್, ಲೆಬ ಪ್ಯಾಲೆಸ್ಟೈನ್) ಪ್ರತಿನಿಧಿಗಳ ಪ್ರತಿಭಟನಾ ಪ್ರದರ್ಶನವನ್ನು ಉದ್ದೇ ಮಾತನಾಡುವಂತೆ ಕೇಳಿಕೊಳ್ಳಲಾಯಿ

ಎಲ್ಲಾ ಪ್ರತಿನಿಧಿಗಳು ತಮ್ಮ ದೆ ಅಥವಾ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಯ ಆಕ್ರಾಮಕತೆ ವಿರುದ್ಧ ಪ್ರತಿರೋಧ, ದೇಶೀ ಸರ್ಕಾರಗಳ ವಿರುದ್ಧ ಕಾರ್ಮಿ ಜನತೆಯ ಹೋರಾಟಗಳು; ಆರ್ಥಿ ಬಿಕ್ಕಟ್ಟಿನ ಪರಿಣಾಮಗಳು; ಕಮ್ಯುನಿ ಮತ್ತು ಕಾರ್ಮಿಕ ಪಕ್ಷಗಳ ಬ ಮತ್ತು ಪಾತ್ರ ಇವುಗಳ ಬಗ್ಗೆ ವಿಷ ಒತ್ತುಕೊಟ್ಟು ಮಾತನಾಡಿದರು. ಲ್ಯಾಟಿ ಅಮೆರಿಕದ 13 ಪಕ್ಷಗಳು ಇತ್ತೀಚೆಗೆ ಸಭೆ ತಮ್ಮ ಖಂಡದ ಬೆಳವಣಿಗೆಗಳ ಅಂಗೀಕರಿಸಿದ ಸಾಮಾನ್ಯ ಹೇಳಿಕೆ ಬಗ್ಗೆ ಮಾ ಕೊಟ್ಟರು. ಯುರೋಪಿನ ಪಕ್ಷಗಳು ಯು ಬಿಕ್ಕಟ್ಟು, ಹೆಚ್ಚುತ್ತಿರುವ ನಾಟೋ ಮಿಲಿ ಆಕ್ರಾಮಕತೆ ಬಗ್ಗೆ ಮಾತನಾಡಿದರು.

ಕೂಲಂಕಷ ಚರ್ಚೆಯ ನಂತರ 'ಬೈರೂ ಘೋಷಣೆ'ಯನ್ನು ಅಂಗೀಕರಿಸಲಾಯಿತು.

ಟರ್ಕಿಯಲ್ಲಿ ಸಿರಿಯಾದ ಮೇಲೆ ಅತಿಕ್ರಮಣದ ವಿರುದ್ಧ ಶಾಂತಿ ಸಮ್ಮೇಳನ

ಸಾಮ್ರಾಜ್ಯಶಾಹಿ ತನ್ನ 'ಹೊಸ ಮಧ್ಯಪ್ರಾಚ್ಯ' ನೀತಿಯ ಭಾಗವಾಗಿ ಸಿರಿಯಾದ ಅತಿಕ್ರಮಣ ಮತ್ತು ಅಲ್ಲಿ 'ಸರ್ಕಾರ ಬದಲಾವಣೆ'ಗೆ ಹುನ್ನಾರ ನಡೆಸುತ್ತಿರುವಾಗ ಶಾಂತಿಪ್ರಿಯ ಶಕ್ತಿಗಳು ಕೈಕಟ್ಟಿಕೊಂಡು ಕುಳಿತಿಲ್ಲ. ವಿಶ್ವ ಶಾಂತಿ ಮಂಡಳಿಯ ಭಾಗವಾಗಿರುವ ಟರ್ಕಿ ಶಾಂತಿ ಸಂಘಟನೆ ನವಂಬರ್ 24-25 ರಂದು ಟರ್ಕಿಯ ಅಂಟಾಕಿಯದಲ್ಲಿ ಸಿರಿಯಾದ ಅತಿಕ್ರಮಣದ ವಿರುದ್ಧ ಒಂದು ಅಂತರ್‍ರಾಷ್ಟ್ರೀಯ ಶಾಂತಿ ಸಮ್ಮೇಳನ ಸಂಘಟಿಸಿತು. ಅಂಟಾಕಿಯ ಸಿರಿಯಾದ ಗಡಿಯಲ್ಲಿ ಇರುವ ಹಟಾಯ್ ಪ್ರಾಂತ್ಯದಲ್ಲಿ ಇದ್ದು, ಸಿರಿಯಾ ಗಡಿ ಪ್ರದೇಶದಲ್ಲಿ ವಿದೇಶೀ ಸಶಸ್ತ್ರ ಬಾಡಿಗೆ ಬಂಟರ ಅಟಾಟೋಪಗಳ ದುಷ್ಪರಿಣಾಮಗಳ ಬಗ್ಗೆ ಅಲ್ಲಿನ ನಾಗರಿಕರಿಂದ ನೇರವಾಗಿ ಪ್ರತಿನಿಧಿಗಳು ಕೇಳಿ ತಿಳಿದುಕೊಂಡರು. ಸಮ್ಮೇಳನದಲ್ಲಿ ಅಲ್ಲಿನ ಪಾರ್ಲಿಮೆಂಟು ಸದಸ್ಯರು, ಮೇಯರುಗಳು, ಪತ್ರಕರ್ತರು, ಬುದ್ಧಿಜೀವಿಗಳು, ಇಂಜಿನೀಯರುಗಳು ಈ ಪ್ರದೇಶವನ್ನು ರಣರಂಗವಾಗಿಸಿ ಶಾಂತಿ ಕದಡಿರುವ ಬಗ್ಗೆ ದೂರಿದರು. ಎಲ್ಲಾ ದೇಶಗಳ ಅಲ್-ಖೈದಾ ಗೆರಿಲ್ಲಾಗಳು, ಸಿರಿಯಾದ ವಿರೋಧಿ ಶಕ್ತಿಗಳಿಗೆ ನಾಟೋ ಮಿಲಿಟರಿ ತರಬೇತಿ, ಶಸ್ತ್ರಾಸ್ತ್ರ ಧನ ಸಹಾಯದಲ್ಲಿ ಟರ್ಕಿ ಸರ್ಕಾರ ಮತ್ತು ನಾಟೋದ ಸಕ್ರಿಯ ಪಾತ್ರದ ಬಗೆಗೂ ದೂರಿದರು. ಶಾಂತಿ ಕದಡುವುದನ್ನು ವಿರೋಧಿಸಿ ಹಲವು ರ್‍ಯಾಲಿಗಳು ನಡೆದಿವೆ. ಇದರಿಂದಾಗಿ ವಿದೇಶೀ ಗೆರಿಲ್ಲಾ ಚಟುವಟಿಕೆಯನ್ನು ಅವರು ಚದುರಿಸಬೇಕಾಗಿ ಬಂದಿದೆ.

ಈ ಸಮ್ಮೇಳನದಲ್ಲಿ ಭಾರತ ಸೇರಿದಂತೆ ಹಲವು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದಿಂದ ಎಐಪಿಎಸ್‌ಒ(ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆ) ಪರವಾಗಿ ದೇಬಾಶಿಸ್ ಚಕ್ರಬರ್ತಿ ಭಾಗವಹಿಸಿದ್ದರು. ಸಮ್ಮೇಳನ ಘೋಷಣೆಯೊಂದನ್ನು ಅಂಗೀಕರಿಸಿ ನಾಟೋ ಸಿರಿಯಾದಲ್ಲಿ ನೇರವಾಗಿ ಪರೋಕ್ಷವಾಗಿ ಅತಿಕ್ರಮಣ ಭಯೋತ್ಪಾದನೆ ನಡೆಸುವುದನ್ನು, ಸತ್ಯ ತಿರುಚಿ ಸಿರಿಯಾ ಸರ್ಕಾರದ ಬಗ್ಗೆ ಅಪಪ್ರಚಾರ ಮಾಡುವುದನ್ನೂ, ಸಿರಿಯನ್ನರ ಸಾರ್ವಭೌಮತೆ ಮನ್ನಿಸದಿರುವುದನ್ನು ಬಲವಾಗಿ ಖಂಡಿಸಿತು. ಟರ್ಕಿ ನಾಟೋ ಪರವಾಗಿ ಸಿರಿಯಾದಲ್ಲಿ ಮೂಗು ತೂರಿಸುವುದನ್ನು ನಿರ್ದಿಷ್ಟವಾಗಿ ಖಂಡಿಸಿ ಅದನ್ನು ತಕ್ಷಣ ನಿಲ್ಲಿಸಬೇಕೆಂದು ಒತ್ತಾಯಿಸಿತು. ಕೊನೆಯ ದಿನ ಅಂಟಾಕಿಯದ ದೊಡ್ಡ ಮೈದಾನಿನಲ್ಲಿ ಶಾಂತಿ ಸಂಗೀತ ಸಭೆ ಇತ್ತು. ಟರ್ಕಿಯ ಪ್ರಸಿದ್ಧ ಗಾಯಕರು ಪ್ರಗತಿಪರ ಬ್ಯಾಂಡುಗಳ ಸ್ಫೂರ್ತಿಯುತ ಸಂಗಿತಕ್ಕೆ ದೊಡ್ಡ ಸಂಖ್ಯೆಯಲ್ಲಿ ಇದ್ದ ಜನ ಹೆಜ್ಜೆ ಹಾಕಿದರು. 'ಯುದ್ಧಕೋರರಿಗೆ ಇಲ್ಲಿ ಜಾಗ ಇಲ್ಲ', 'ಸಿರಿಯಾದ ಸುದ್ದಿಗೆ ಹೋಗಬೇಡಿ' ಮುಂತಾದ ಘೋಷಣೆಗಳು ಮುಗಿಲು ಮುಟ್ಟಿದವು. ಟರ್ಕಿ ಶಾಂತಿ ಸಂಘಟನೆ ಜತೆಗೆ ಈ ಶಾಂತಿ ಸಮ್ಮೇಳನದ ಸಂಘಟನೆಯಲ್ಲಿ ಟರ್ಕಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ದೊಡ್ಡ ಪಾತ್ರ ವಹಿಸಿದ್ದವು.

ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯ......

ಪುಟ 10 ರಿಂದ

ಅಸ್ಪೃಶ್ಯತೆ ಆಚರಣೆಗಳ ವಿರುದ್ಧ ನಿರ್ದಿಷ್ಟವಾಗಿ ದಲಿತರಿಗೆ ದೇವಾಲಯ ಪ್ರವೇಶ ನಿಷೇಧದ ವಿರುದ್ಧ ಹಾಗೂ ಹೋಟೆಲುಗಳಲ್ಲಿ ಎರಡು ಲೋಟ ಪದ್ಧತಿಯಂತಹ ಆಚರಣೆ ಹಾಗೂ ತಾರಮ್ಯಗಳ ವಿರುದ್ದ ಮತ್ತು ದಲಿತರಿಗೆ ಕ್ಷೌರ ನಿರಾಕರಣೆಯಂತಹ ಧೋರಣೆಗಳ ವಿರುದ್ದ ಹೋರಾಟಗಳನ್ನು ವ್ಯಾಪಕಗೊಳಿಸುವುದಾಗಿ ಪ್ರತಿನಿಧಿಗಳು ಉತ್ಸಾಹದಿಂದ ಮಾತನಾಡಿದರು.

ಬಜೆಟ್ ಪೂರ್ವ ರ್‍ಯಾಲಿ ಯಶಸ್ವಿಗೆ ನಿರ್ಧಾರ

ಬಜೆಟ್‌ನಲ್ಲಿ ದಲಿತ ಸಬಲೀಕರಣಕ್ಕೆ ಅಗತ್ಯವಾದ ಸೂಕ್ತ ಬಜೆಟ್ ನೀಡಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ಇರುವ ವಿಶೇಷ ಘಟಕ ಯೋಜನೆಗಳ ಪರಿಣಾಮಕಾರಿ ಜಾರಿಗೆ ಕ್ರಮವಹಿಸಬೇಕು ಮುಂತಾದ ಬೇಡಿಕೆಗಳಿಗಾಗಿ ಆಗ್ರಹಿಸಿ ಫೆಬ್ರವರಿ ತಿಂಗಳಲ್ಲಿ ನಡೆಸಲು ಉದ್ದೇಶಿಸಿರುವ ರಾಜ್ಯದ ಮಟ್ಟದ ಬೃಹತ್ ಬಜೆಟ್ ಪೂರ್ವ ರ್‍ಯಾಲಿಯನ್ನು ಸರ್ವರೀತಿಯಲ್ಲಿಯೂ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಶ್ರಮಿಸುವುದಾಗಿ ಈ ಸಂದರ್ಭದಲ್ಲಿ ಮಾತನಾಡಿದ ಪ್ರತಿನಿಧಿಗಳು ದೃಢ ವಿಶ್ವಾಸ ಹೇಳಿದರು.

ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ) ರಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎ ನಾಗರಾಜ್ ವೇದಿಕೆಯಲ್ಲಿದ ಅಧ್ಯಕತೆಯನ್ನು ಮತ್ತೊಬ್ಬ ರಾಜ್ಯ ಕಾರ್ಯದ ಮಂಡಳಿ ಸದಸ್ಯರಾದ ಯು. ಬಸವರಾ ವಹಿಸಿದ್ದರು. ಅವರು ಅಸ್ಪೃಶ್ಯರು ಎಂಬ ಕಾ ಮದುವೆ ಮಂಟಪದಲ್ಲಿ ಮದುವೆ ನಡೆಯ ಅವಕಾಶ ನೀರಾಕರಿಸಿದ ಕುರುಗೋ ಪ್ರಕರಣದಲ್ಲಿ ಸಿಪಿಐ(ಎಂ) ಮಧ್ಯ ಪ್ರವೇಶದಿ ಮದುವೆ ಯಶಸ್ವಿಯಾಗಿ ನಡೆದ ಪ್ರಕರಣವ ವಿವರಿಸಿದರು. ವೇದಿಕೆಯಲ್ಲಿ ಕೃಷ್ಣಪ್ಪಕೊಂಚ ಜಿ. ಚಂದ್ರಶೇಖರ, ಚಂದ್ರಹೊಸ್ ಬಿ.ರಾಜಶೇಖರ ಮೂರ್ತಿ, ನರಸಿಂಹ ನಾಗರಾಜ, ಕೃಷ್ಣ, ಅನಂತನಾ ಮುಂತಾದವರು ಉಪಸ್ಥಿತರಿದ್ದರು. ಆರಂಭ ಗೋಪಾಲಕೃಷ್ಣ ಅರಳಹಳ್ಳಿ ಸ್ವಾಗತಿಸಿದ ರಾಜಶೇಖರ ಮೂರ್ತಿ ವಂದನೆ ಸಲ್ಲಿಸಿದ

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ ದರ್ಬಾರ್....

ಪುಟ 13 ರಿಂದ

ರಾಜಸ್ತಾನದ ಅಳ್ವಾರ್ ಜಿಲ್ಲಾಡಳಿತ ಕಳೆದ ಡಿಸೆಂಬರಿನಲ್ಲಿ ಕೋಟ್‌ಕಾಸಿಂ ಎಂಬ ಬ್ಲಾಕಿನಲ್ಲಿ ರಾಜ್ಯ ಸರಕಾರ ಮತ್ತು ಪೆಟ್ರೋಲಿಯಂ ಮಂತ್ರಾಲಯದ ಸಹಕಾರದೊಂದಿಗೆ ಈ ಕಾರ್ಯಕ್ರಮವನ್ನು ಆರಂಭಿಸಿತ್ತು. ಸೀಮೆಎಣ್ಣೆಯನ್ನು ಮೊದಲ 3ಲೀಟರಿಗೆ 15ರೂ.25ಪೈಸೆಯ ಸಬ್ಸಿಡಿ ಬೆಲೆಯಲ್ಲಿ ಕೊಡುವ ಬದಲು ಕಾರ್ಡುದಾರರು ಮಾರುಕಟ್ಟೆ ಬೆಲೆಯಲ್ಲಿ, ಅಂದರೆ 49ರೂ.10 ಪೈಸೆ ತೆತ್ತು ಸೀಮೆ ಎಣ್ಣೆ ಖರೀದಿಸಬೇಕು. ಪ್ರತಿತಿಂಗಳು ಮೂರು ಲೀಟರುಗಳ ಮಾರುಕಟ್ಟೆ ಬೆಲೆ ಮತ್ತು ಸಬ್ಸಿಡಿ ಬೆಲೆಗಳ ವ್ಯತ್ಯಾಸವನ್ನು ನೇರವಾಗಿ ಕಾರ್ಡುದಾರರ ಬ್ಯಾಂಕ್ ಖಾತೆಗೆ ಮೂರು ತಿಂಗಳಿಗೊಮ್ಮೆ ಜಮಾ ಮಾಡುವ ಕಾರ್ಯಕ್ರಮ ಇದು.

ಈಗ ಗ್ರಾಮಸ್ಥರು ಪ್ರತಿದಿನ ನ್ಯಾಯಬೆಲೆ ಅಂಗಡಿಗೆ ಬಂದು ತಮ್ಮ ರಾಜಸ್ತಾನ ಗ್ರಾಮೀಣ ಬ್ಯಾಂಕ್ ಅಥವ ಸ್ಟೇಟ್ ಬ್ಯಾಂಕಿನ ಪಾಸ್‌ಬುಕ್ ಅನ್ನು ಮುಂದೆ ಹಿಡಿಯುತ್ತಾರೆ. ಆದರೆ ಖಾತೆ ತೆರೆದು ಒಂದು ವರ್ಷವಾದರೂ ಅದು ಈಗಲೂ ತೋರಿಸುತ್ತಿರುವುದು ರೂ.0.00. ತಾವು ಇದುವರೆಗೂ ಈ ಹಣದ ಮುಖವನ್ನೇ ಕಂಡಿಲ್ಲ ಎನ್ನುತ್ತಾರೆ ಆ ಇಡೀ ಬ್ಲಾಕಿನ 25,000 ಕುಟುಂಬಗಳಲ್ಲಿ ಹೆಚ್ಚಿನ ಮಂದಿ. ಬಹುಪಾಲು ಕುಟುಂಬಗಳಿಗೆ ಕಳೆದ ಒಂದು ವರ್ಷದಲ್ಲಿ ಒಂದೂ ಕಂತೂ ಸಿಕ್ಕಿಲ್ಲ. ಕೆಲವರಿಗಷ್ಟೇ ಒಂದು ಕಂತು ಸಿಕ್ಕಿದೆ.

ಧರಂಪಾಲ್ ಬಿಲಹೇಡಿ ಎಂಬ ಹಳ್ಳಿಯಲ್ಲಿ ಟೈಲರ್ ವೃತ್ತಿ ನಡೆಸುವಾತ. ದಿನಕ್ಕೆ ಹನ್ನೆರಡು ಗಂಟೆಗೂ ಹೆಚ್ಚು ಕಾಲ ವಿದ್ಯುತ್ ಹೋಗಿರುತ್ತದೆ. ಆಗೆಲ್ಲ ಅಡುಗೆಗೆ ಕಟ್ಟಿಗೆ, ದೀಪಕ್ಕೆ ಮೋಂಬತ್ತಿ ಬಳಸಬೇಕು. ಏಕೆಂದರೆ ಸೀಮೆಎಣ್ಣೆಯ ಸಬ್ಸಿಡಿ ಒಂದು ರೂಪಾಯಿ ಕೂಡ ಆತನ ಖಾತೆಗೆ ಇನ್ನೂ 'ವರ್ಗಾವಣೆ' ಆಗಿಲ್ಲ.

ಈ ಬ್ಲಾಕಿನಲ್ಲಿ ಸೀಮೆಎಣ್ಣೆ ಮಾರಾಟ 70ಶೇ. ಇಳಿದಿದೆಯಂತೆ. ಬಹುಶಃ ಯುಪಿಎ ಸರಕಾರಕ್ಕೆ ಬೇಕಾಗಿರುವುದು ಇಷ್ಟೇ-ಸಬ್ಸಿಡಿ ಹಣವನ್ನು ಉಳಿಸುವುದು, ಅದು ಪೆಟ್ರೋಲಿಯಂ ಉತ್ಪನ್ನಗಳ ಆಮದು ಪ್ರಮಾಣವನ್ನು ಈ ರೀತಿಯಲ್ಲಿ ಇಳಿಸಿ! ಅಕ್ಷರಶಃ 'ಆಟ ಬದಲಾಯಿಸುವ' ಯೋಜನೆ-ಯುಪಿಎ-2 ಹಣಕಾಸು ಮಂತ್ರಿಗಳು ಹೇಳಿರುವಂತೆ! ಆದರೆ ಇದೊಂದು ಗಂಭೀರ ಪ್ರಶ್ನೆ ಎಂದು ಅವರೊಂದಿಗೆ ಕಾಂಗ್ರೆಸ್ ಪಕ್ಷದ ಪರವಾಗಿ 'ನಗದು ವರ್ಗಾವಣೆ' ಎಂಬ 'ಕ್ರಾಂತಿಕಾರಿ' ಯೋಜನೆಯನ್ನು ಸ್ವಾಗತಿಸಿದ್ದ ಯುಪಿಎ-2 ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹೇಳಿದ್ದಾರೆ.

★

ಎಲ್‌ಪಿಜಿ ರಾಜಕೀಯ: ಯುಪಿಎ ಸರಕಾರಕ್ಕೆ ಚುನಾವಣಾ ಆಯೋಗದ ನೋಟೀಸ್

ಯುಪಿಎ-2 ಸರಕಾರ ಎರಡು ತಿಂಗಳ ಹಿಂದಷ್ಟೇ, ಅಡುಗೆ ಅನಿಲದ ಮೇಲೆ ಸರಕಾರ ಭಾರೀ ಸಬ್ಸಿಡಿ ಕೊಡುತ್ತಿದೆ, ಅದನ್ನು ಕಡಿತ ಮಾಡಲೇಬೇಕಾಗಿದೆ, ಎಂದು ಸಿಲಿಂಡರುಗಳ ಸಂಖ್ಯೆಯನ್ನು ವರ್ಷಕ್ಕೆ ಆರಕ್ಕೆ ಸೀಮಿತಗೊಳಿಸಿತು. ಅದಕ್ಕಿಂತ ಹೆಚ್ಚು ಸಿಲಿಂಡರುಗಳ ಬಳಕೆಗೆ 'ಮಾರುಕಟ್ಟೆ ಬೆಲೆ' ಅಂದರೆ ದುಪ್ಪಟ್ಟು ಬೆಲೆ ತೆರಬೇಕು ಎಂದು ಹೇಳಿತು; ರಾಜ್ಯ ಸರಕಾರಗಳು ಬೇಕಾದರೆ ಅದನ್ನು ಹೆಚ್ಚಿಸಬಹುದು, ಆದರೆ ಅದರ ಹೊರೆಯನ್ನು ತಾವೇ ಹೊರಬೇಕು ಎಂದೂ ಹೇಳಲಾಯಿತು. ದೇಶಾದ್ಯಂತ ಇದಕ್ಕೆ ವಿರೋಧ ವ್ಯಕ್ತವಾದರೂ ತಾನು ಜಗ್ಗುವುದಿಲ್ಲ ಎಂದಿತು. ಆದರೆ ನಂತರ ಆ ಸಂಖ್ಯೆಯನ್ನು 9ಕ್ಕೆ ಏರಿಸುವ ಯೋಚನೆಯಿದೆ ಎಂಬ ಸೂಚನೆಗಳು ಬರಲಾರಂಭಿಸಿದವು. ಈ ವಾರ ಪೆಟ್ರೋಲಿಯಂ ಮಂತ್ರಿಗಳು '9ಕ್ಕೆ ಏರಿಸುವುದು ಖಂಡಿತ' ಎಂದರು.

ಇದಕ್ಕೆ ತಕ್ಷಣವೇ ಚುನಾವಣಾ ಆಯೋಗ ಬಲವಾದ ಆಕ್ಷೇಪ ವ್ಯಕ್ತಪಡಿಸಿರುವುದಾಗಿ ವರದಿಯಾಗಿದೆ. ಯುಪಿಎ-2 ಮಂತ್ರಿಗಳ ಹೇಳಿಕೆಯನ್ನು ತಾನಾಗಿಯೇ ಗಮನಕ್ಕೆ ತಗೊಂಡ ಆಯೋಗ ಪೆಟ್ರೋಲಿಯಂ ಇಲಾಖೆಗೆ ಮತ್ತು ಮಂತ್ರಿಗಳಿಗೆ ಎರಡು ಪ್ರತ್ಯೇಕ ಪತ್ರಗಳನ್ನು ಕಳಿಸಿದೆಯಂತೆ. ಹಿಮಾಚಲ ಪ್ರದೇಶ ಮತ್ತು ಗುಜರಾತ್ ವಿಧಾನ ಸಭೆಗಳಿಗೆ ಚುನಾವಣೆಗಳ ಪ್ರಕ್ರಿಯೆ ನಡೆಯುತ್ತಿದ್ದು, ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ, ಇಂತಹ ಪ್ರಕಟಣೆ ಅತ್ಯಂತ ಆಕ್ಷೇಪಣಾರ್ಹ, ಇದಕ್ಕೆ ವಿವರಣೆ ನೀಡಬೇಕು ಎಂದು ಮಂತ್ರಿಗಳಿಗೆ ಪತ್ರ ಹೋದರೆ, ಇಲಾಖೆಯ ಕಾರ್ಯದರ್ಶಿಗಳಿಗೆ ಕಳಿಸಿದ ಪತ್ರದಲ್ಲಿ ಇಂತಹ ಯೋಚನೆಗಳಿದ್ದರೆ, ಅದನ್ನು ತಕ್ಷಣವೇ ನಿಲ್ಲಿಸಬೇಕು. ಮತ್ತು ಈ ಬಗ್ಗೆ ದೃಢಪಡಿಸಬೇಕು ಎಂದು ಹೇಳಲಾಗಿದೆಯಂತೆ.

ನಗದು ವರ್ಗಾವಣೆಯ ವಿಷಯದಲ್ಲಿ ಚುನಾವಣಾ ಆಯೋಗಕ್ಕೆ ನೀಡಿದ ವಿವರಣೆಯಲ್ಲಿ ಯುಪಿಎ-2 ಸರಕಾರ, ಇದು ಹೊಸ ಪ್ರಕಟಣೆಯಲ್ಲ, ಕಳೆದ ಬಜೆಟಿನಲ್ಲಿಯೇ ಪ್ರಕಟಿಸಿದ ಕ್ರಮ ಎಂದು ನುಣುಚಿಕೊಳ್ಳಲು ಪ್ರಯತ್ನಿಸಿತ್ತು. ಆದರೆ ಈ ವಿಷಯದಲ್ಲಿ ಅದಕ್ಕೂ ಅವಕಾಶವಿರಲಿಲ್ಲ. ಪೆಟ್ರೋಲಿಯಂ ಮಂತ್ರಿಗಳು ಈಗ ಇಂತಹ ನಿರ್ಣಯವೇನೂ ಕೈಗೊಂಡಿಲ್ಲ ಎಂದು ಸಮಜಾಯಿಷಿ ಕೊಟ್ಟಿದ್ದಾರೆ; 100ಕ್ಕೂ ಹೆಚ್ಚು ಎಂಪಿಗಳು, ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಇಂತಹ ಬೇಡಿಕೆ ಇಟ್ಟಿರುವುದರಿಂದ ಈ ಬಗ್ಗೆ ಮರು ವಿಮರ್ಶೆ ನಡೆಯುತ್ತಿದೆ, ಸುದ್ದಿಗಾರರ ಪ್ರಶ್ನೆಗೆ ಉತ್ತರಿಸುತ್ತಾ ಇದನ್ನು ಹೇಳಬೇಕಾಗಿ ಬಂತಂತೆ. ಆದರೆ ನಿರ್ಣಯ ಕೈಗೊಂಡಿಲ್ಲ ಎಂದ ಮೇಲೆ 'ಖಂಡಿತ' 9ಕ್ಕೆ ಏರಿಸುವ ಮಾತಾಡಲು ಹೇಗೆ ಸಾಧ್ಯ?

ಒಟ್ಟಾರೆಯಾಗಿ ಶ್ರೀಮಂತ ವರ್ಗಗಳ ಪರವಾದ ಕ್ರಮಗಳನ್ನೇ ಕೈಗೊಳ್ಳುತ್ತಾ, ನಾಮಮಾತ್ರಕ್ಕೆ ಒಂದೆರಡು ಬಡವರ ಪರ ಎಂಬ ಫಲಕ ಹೊತ್ತ ಕಾರ್ಯಕ್ರಮಗಳನ್ನು ತೋರಿಸುವುದು, ಚುನಾವಣೆ ಸಮೀಪಿಸುವಾಗ ಬಡವರ್ಗಗಳ ಪರವಾಗಿರುವಂತೆ ನಟಿಸುವುದು ಈಗ ಆಳುವ ವರ್ಗಗಳ ಪಕ್ಷಗಳ ಚಾಳಿಯೇ ಆಗಿಬಿಟ್ಟಿದೆ. ತಾನು ಅನುಸರಿಸುತ್ತಿರುವ ನವ-ಉದಾರವಾದಿ ಸುಧಾರಣೆಗಳು ನಿಜವಾಗಿಯೂ ಅದು ಹೇಳುತ್ತಿರುವಂತೆ ದೇಶದ ಮತ್ತು ಜನರ ಹಿತದೃಷ್ಟಿಯಿಂದ ಇದ್ದರೆ ಅದರ ಮಂತ್ರಿ-ಮಾಗದರಿಗೆ ಇಂತಹ ಗೋಸುಂಬೆ ಕಸರತ್ತುಗಳ ಅಗತ್ಯ ಬೀಳುತ್ತಿರಲಿಲ್ಲ.

ಕಡಲ ತಡಿ....

ಪುಟ 6 ರಿಂದ

ಸರಕಾರವು ನಡೆಸುತ್ತಿರುವ ಮಾನವ ಹಕ್ಕುಗಳ ಕ್ರೂರ ದಮನದ ವಿರುದ್ಧ ವಿಶ್ವ ಮಾನವ ಹಕ್ಕುಗಳ ದಿನವಾದ ಡಿಸೆಂಬರ್ 10 ರಂದು ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಗಣ್ಯರನ್ನೊಳಗೊಂಡ ದ.ಕ.ಜಿಲ್ಲೆಯ ಇನ್ನೂರರಷ್ಟು ನಾಗರಿಕರು ಜಿಲ್ಲಾಧಿಕಾರಿ ಕಚೇರಿ ಎದುರು ಕೈಗೆ ಕೋಳ ತೊಟ್ಟುಕೊಂಡು ಪ್ರತಿಭಟನೆ ನಡೆಸಿದರು.

ಹತ್ತು ನಿಮಿಷಗಳ ಕಾಲ ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದ್ದು ಬಿಟ್ಟರೆ, ಈ ಪ್ರತಿಭಟನೆಗಳಲ್ಲಿ ಭಾಷಣಗಳಿರಲಿಲ್ಲ. ಕೈಕೋಳ ತೊಟ್ಟು ಕೊಂಡಿದ್ದವರೂ ಒಳಗೊಂಡು ಎಲ್ಲರೂ ಮುಕ್ಕಾಲು ಗಂಟೆ ಕಾಲ ಸತತ ಘೋಷಣೆಗಳನ್ನು, ಸರಕಾರಕ್ಕೆ ಛೀಮಾರಿ ಧಿಕ್ಕಾರ ಕೂಗಿದರು. ಹಿರಿಯ ವಿಚಾರವಾದಿ ಸಿ.ಎನ್.ಶೆಟ್ಟಿ, ಪಿಯುಸಿಎಲ್‌ನ ಪಿ.ಡಿ.ಡೇಸಾ ಚಿಂತಕರಾದ ಪಟ್ಟಾಭಿರಾಮ ಸೋಮಯಾಜಿ, ಜಿ.ರಾಜಶೇಖರ್, ಮಾನವ ಹಕ್ಕುಗಳ ಹೋರಾಟಗಾರರಾದ ಕಾಸರಗೋಡು ಸುಬ್ರಹ್ಮಣ್ಯ, ಯದುಪತಿ ಗೌಡ ಮತ್ತು ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ಶೇಷಗಿರಿ, ಉಡುಪಿಯ ಸತ್ಯಕುಮಾರ್ ಕಲ್ಪತರು, ದಲಿತ ಹಕ್ಕುಗಳ ಸಮಿತಿಯ ಶಿವಕುಮಾರ್, ಸುಳ್ಯದ ಕೆ.ಎಲ್.ಅಶೋಕ್ ಚಂದ್ರಶೇಖರ್, ಸಿಪಿಐ(ಎಂ)ನ ಯಾದವ ಶೆಟ್ಟಿ, ಜೆ.ಬಾಲಕೃಷ್ಣ ಶೆಟ್ಟಿ, ಪರಮೇಶ್ವರನ್ ಉಡುಪಿ, ವಸಂತ ಆಚಾರಿ, ನಿರಾಶ್ರಿತರ ಸಮಿತಿಯ ನಾಡೀಯ ಫೆರ್ನಾಂಡೀಸ್, ಮೀನುಗಾರ ಮಹಿಳೆಯರ ಸಂಘಟನೆಯ ಕಲ್ಯಾಣಿ, ಜಾನಪದ ಕಲಾವಿದ ಗೋಪಾಲ ಬಂಗೇರ, ಹಿರಿಯ ವಕೀಲ ರವೀಂದ್ರನಾಥ ಮತ್ತು ಹಿರಿಯ ಪತ್ರಕರ್ತ ಹರ್ಷರಾಜ್, ಜನವಾದಿ ಮಹಿಳಾ ಸಂಘಟನೆಯ ವಿಲಾಸಿನಿ ಉದ್ಯಾವರ, ಪ್ರಗತಿಪರ ಕಲಾವಿದರಾದ ಜನಾರ್ದನ ಕೆಸರ, ಕಂಪಯ್ಯ ಕಲ್ಲಡ್ಕ, ಸಮುದಾಯದ ವಾಸುದೇವ ಉಚ್ಚಿಲ, ಸಂಘಟನೆಗಳ ಪ್ರಮುಖ ಪದಾಧಿಕಾರಿಗಳು ಕೈಕೋಳ ತೊಟ್ಟು ಘೋಷಣೆ ಕೂಗಿ ಪ್ರತಿಭಟಿಸಿದರು. ಖ್ಯಾತ ಸಾಹಿತಿ ಸಾರಾ ಅಬೂಬಾಕರ್ ಈ ಹಿಂದೆ ಪೋಲೀಸ್ ಹಿಂಸೆಗೆ ಒಳಗಾಗಿದ್ದ ವಿಠಲ ಮಲೆಕುಡಿಯ ಇವರೂ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಎಸ್‌ಎಫ್‌ಐನ ರಾಜ್ಯ ಸಮಿತಿ ಸದಸ್ಯ ಜೀವನ್‌ರಾಜ್ ಕುತ್ತಾರ್ ಸ್ವಾಗತಿಸಿದರು. ಜನವಾದಿ ಮಹಿಳಾ ಸಂಘಟನೆಯ ವಿಲಾಸಿನಿ ವಂದಿಸಿದರು.

★

ದರ ಪರಿಷ್ಕರಣೆಗೆ ಆಗ್ರಹಿಸಿ ಮಂಗಳೂರಿನಲ್ಲಿ ಆಟೋ ರಿಕ್ಷಾ ಚಾಲಕರ ಪ್ರತಿಭಟನೆ:

ಫೆಡರೇಶನ್ ಆಫ್ ಕರ್ನಾಟಕ ಆಟೋ ಡ್ರೈವರ್ಸ್ ಯೂನಿಯನ್ (ಸಿಐಟಿಯು) ದ.ಕ.ಜಿಲ್ಲಾ ಸಮಿತಿ, ಕರ್ನಾಟಕ ರಕ್ಷಣಾ ವೇದಿಕೆ ಆಟೋ ರಿಕ್ಷಾ ಘಟಕ, ಮ.ನ.ಪಾ.ಆಟೋ ರಿಕ್ಷಾ ಚಾಲಕರ ಸಂಘ, ಬಿ.ಎಂ.ಎಸ್. ಸಂಯೋಜಿತ ರಿಕ್ಷಾ ಮಜ್ದೂರ್ ಸಂಘ – ಈ ನಾಲ್ಕು ಸಂಘಟನೆಗಳು ಆಟೋ ರಿಕ್ಷಾ ದರಗಳನ್ನು ಪರಿಷ್ಕರಿಸಬೇಕೆಂದು ಆಗ್ರಹಿಸಿ ಡಿಸೆಂಬರ್ 3 ರಂದು ದ.ಕ. ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಂಯುಕ್ತ ಪ್ರತಿಭಟನೆಯನ್ನು ನಡೆಸಿದವು.

ಸಿಐಟಿಯು ಸಂಯೋಜಿತ ಆಟೋ ರಿಕ್ಷಾ ಫೆಡರೇಶನಿನ ಜಿಲ್ಲಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು. ಸಿಐಟಿಯು ಸಂಯೋಜಿತ ಫೆಡರೇಶನಿನ ಜಿಲ್ಲಾ ಕಾರ್ಯದರ್ಶಿ ಎಲ್.ಟಿ.ಸುವರ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುನ್ನೂರಕ್ಕೂ ಹೆಚ್ಚು ಆಟೋ ಚಾಲಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದು ಗಮನಾರ್ಹವಾಗಿತ್ತು. ಪ್ರದರ್ಶನದ ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

★

ಮಂಗಳೂರಿನಲ್ಲಿ ಬಂದರು ತಲೆಹೊರೆ ಕಾರ್ಮಿಕರ ಸಮಾವೇಶ:

ಮಂಗಳೂರು ಬಂದರು ತಲೆಹೊರೆ ಕಾರ್ಮಿಕರ ವಾರ್ಷಿಕ ಸಮಾವೇಶವು ಡಿಸೆಂಬರ್ 4 ರಂದು ಬಂದರು ತಲೆಹೊರೆ ಕಾರ್ಮಿಕ ಸಂಘ (ಸಿಐಟಿಯು) ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದು, ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಕೂಡಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಅಹಮ್ಮದ್ ಬಾವಾ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಮಾವೇಶಕ್ಕೆ ಮೊದಲು ಮುನ್ನೂರೈವತ್ತಕ್ಕೂ ಮೀರಿ ತಲೆಹೊರೆ ಕಾರ್ಮಿಕರು ಬಂದರಿನಿಂದ ಸಮಾವೇಶ ನಡೆದ ಪುರಭವನದವರೆಗೆ ಆಕರ್ಷಕ ಮೆರವಣಿಗೆ ನಡೆಸಿದರು.

ಸಮಾವೇಶವು 15 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದು, ಅಹಮ್ಮದ್ ಬಾವಾ ಅಧ್ಯಕ್ಷರಾಗಿ, ನಝೀರ್ ಬೆಂಗರೆ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ.

ಉದಾರೀಕರಣದ ಹೊಡೆತದಿಂದ ಸಾಮಾಜಿಕ ನ್ಯಾಯದ ರಕ್ಷಣೆಗಾಗಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯ'

ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಪ್ರಕಾಶ್ ಕಾರಾಟ್ ಪ್ರತಿಪಾದನೆ

ವರದಿ : ಭಾರತಿ ಗಾಂವ್ಕರ್

ದೇಶದ ಬಹುಪಾಲು ಜನತೆ, ನವ ಉದಾರೀಕರಣ ಹೊಡೆತಕ್ಕೆ ಸಿಕ್ಕಿ ನರಳುತ್ತಿರುವ ಸಂದರ್ಭದಲ್ಲಿ, ಅತ್ಯಂತ ತಳ ಮಟ್ಟದಲ್ಲಿರುವ ದಲಿತರ ಸ್ಥಿತಿ ಶೋಚನೀಯತೆಯನ್ನು ಮೀರಿದೆ. ಬಂಡವಾಳಶಾಹಿ ಪರ ರಾಜಕೀಯ ಪಕ್ಷಗಳ ಮುಖಂಡರುಗಳು ಚುನಾವಣೆ ಸಂದರ್ಭದಲ್ಲಿ ದಲಿತರ-ಹಿಂದುಳಿದ ವರ್ಗದವರ ನಾಮ ಜಪಿಸುತ್ತಾರೆ. ಗೆದ್ದು ಬಂದ ಮೇಲೆ ದಲಿತರೆನ್ನುವ ಪದವನ್ನೇ ಮರೆತು ಬಿಟ್ಟಿರುತ್ತಾರೆ. ಇನ್ನು ದಲಿತರ ಬದುಕಿನ ಸ್ಥಿತಿ, ಉದ್ಯೋಗ, ಶಿಕ್ಷಣ, ಆರೋಗ್ಯದಂತಹ ವಿಷಯಗಳ ಬಗೆಗೆ ಕಾಳಜಿ ದೂರದ ಮಾತು.

ಸ್ವಾತಂತ್ರ್ಯಪೂರ್ವದಿಂದಲೂ ಸಹ ದಲಿತರ ಸ್ಥಿತಿಗಳ ಸುಧಾರಣೆಗಾಗಿ ಕಮ್ಯುನಿಸ್ಟ್ ಪಕ್ಷ ಧ್ವನಿ ಎತ್ತುತ್ತಲೇ ಬಂದಿದೆ. ಸಾಮಾಜಿಕ ದಮನದ ವಿರುದ್ಧ ಹಾಗೂ ದಲಿತರ ಆರ್ಥಿಕ ಸಬಲೀಕರಣಕ್ಕಾಗಿ ನಡೆದ ಇಂತಹ ಜನಪರ ಚಳುವಳಿಗಳ ಫಲವಾಗಿಯೇ ದಲಿತರು ತಮ್ಮ ಮೇಲಿನ ದೌರ್ಜನ್ಯಗಳ ನಡುವೆಯೂ ಒಂದಷ್ಟು ಉಸಿರಾಡುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಚಳುವಳಿಯನ್ನು ಬಲಗೊಳಿಸುವ ಪ್ರಯತ್ನದ ಭಾಗವಾಗಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಮುಂದಿನ ದಿನಗಳಲ್ಲಿ ದೃಢವಾದ ಜಾತಿ ತಾರತಮ್ಯ-ದೌರ್ಜನ್ಯ ವಿರೋಧಿ ಹೋರಾಟವನ್ನು ಮತ್ತು ದಲಿತ ಸಬಲೀಕರಣಕ್ಕಾಗಿ ಆಂದೋಲನ ವನ್ನು ಯೋಜಿಸಿದ್ದು ಇದಕ್ಕೆ ಪೂರಕವಾಗಿ ನಮ್ಮ ಪ್ರಸ್ತುತ ಸಮಾಜದ ಒಂದು ಪ್ರಧಾನ ಪ್ರಶ್ನೆಯಾಗಿ ಎದ್ದು ಬಂದಿರುವ 'ಖಾಸಗಿ ವಲಯದಲ್ಲಿ ಮಿಸಲಾತಿ ಅಗತ್ಯತೆಗೆ' ವಿಷಯವಾಗಿ ಬೆಂಗಳೂರಿನ ಸ್ವಾತಂತ್ಯ ಉದ್ಯಾನವನದಲ್ಲಿ ವಿಚಾರ ಸಂಕಿರಣ ಒಂದನ್ನು 12/12/12 ರಂದು ಏರ್ಪಡಿಸಿತ್ತು. ರಾಜ್ಯದ ನಾನಾ ಜಿಲ್ಲೆಗಳ ಪ್ರತಿನಿಧಿಗಳು ದಲಿತರು ಮತ್ತು ದಲಿತೇತರರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.









ಉದಾರೀಕರಣದ ಹೊಡೆತದಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆ- ಕಾರಾಟ್

ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಾಟ್ ಅವರು ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ದಲಿತರು ಎದುರಿಸುತ್ತಿರುವ ಸವಾಲುಗಳು ಮತ್ತು ಮುಂದಿನ ದಿನಗಳಲ್ಲಿ ಅವರು ಧ್ವನಿ ಎತ್ತಲೇ ಬೇಕಾದ ವಿಷಯಗಳ ತಿಳಿಸಿದರು. ಉದಾರೀಕರಣದ ನೀತಿಗಳ ಹೊಡೆತದಿಂದ ಸಾಮಾಜಿಕ ನ್ಯಾಯದ ರಕ್ಷಣೆಗಾಗಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾಗಿ ಅತ್ಯಂತ

ಅಗತ್ಯ ಎಂದು ಪ್ರತಿಪಾದಿಸಿದ ಅವರು ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಎನ್ನುವ ಪರಿಕಲ್ಪನೆಯನ್ನೇ ತೆಗೆದು ಹಾಕಿರುವ ಪರಿ ದಲಿತ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯನ್ನು ಮತ್ತು ಅವರ ಬದುಕಿನ ಸಂಕಷ್ಟಗಳನ್ನು ಹೆಚ್ಚಿಸಿದೆ ಎಂದು ತಿಳಿಸಿದರು.

ನವ ಉದಾರೀಕರಣದ ನೀತಿಗಳ ಪರಿಣಾಮವಾಗಿ ಸಾರ್ವಜನಿಕ ವಲಯದ ಕಂಪನಿಗಳನ್ನು ಖಾಸಗೀ ಕರಣ ಗೊಳಿಸ ಲಾಗುತ್ತಿದೆ. ಸಾರ್ವಜನಿಕ ವಲಯದಲ್ಲಿ ಕನಿಷ್ಠ ಕೆಲವು ಪ್ರತಿಶತ ಉದ್ಯೋಗವಾದರೂ ದಲಿತರ ಹಿಂದುಳಿದ ವರ್ಗದವರ ಸಲುವಾಗಿ ಮೀಸಲಿಡಲಾಗುತ್ತಿತ್ತು. ಖಾಸಗೀ ವಲಯದಲ್ಲಿ ನೈಪುಣ್ಯತೆ, ವೃತ್ತಿಪರತೆ ಹೆಸರಿನಲ್ಲಿ ಅಂತಹ ಒಂದು ಪ್ರಕ್ರಿಯೆಯನ್ನೇ ತೆಗೆದುಹಾಕಲಾಗಿದೆ. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಇನ್ನು ಮುಂದೆ ಸಾರ್ವಜನಿಕ ವಲಯದ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಸಂದರ್ಭದಲ್ಲಿ, ಮೀಸಲಾತಿ ನೀಡಬೇಕು ಎಂಬ ಒಂದು ಶರತ್ತನ್ನು ವಿಧಿಸಬೇಕು, ಹಾಗೂ ಮೀಸಲಾತಿಗೆ ಈ ಹಿಂದೆ ಇದ್ದ ಪ್ರಕ್ರಿಯೆಯನ್ನು ಖಾಸಗಿ ವಲಯದಲ್ಲಿ ಮಾಡಬೇಕು ಎಂದು ಒತ್ತಾಯಿಸುತ್ತೇವೆ ಎಂದರು.

ಶಿಕ್ಷಣ ರಂಗದಲ್ಲಿ ದಲಿತರ ಸ್ಥಿತಿ ಮಾಡನಾಡುತ್ತಾ, ಎಲ್ಲ ದಲಿತ ಮಕ್ಕಳಿಗೂ ಶಿಕ್ಷಣ ಪಡೆಯುವ ಅವಕಾಶ ಸಿಗಬೇಕು. ಅದರಲ್ಲೂ ಖಾಸಗಿ ವ್ಯಕ್ತಿಗಳ ಕೈಯಲ್ಲಿರುವ ಶಿಕ್ಷಣ ಸಂಸ್ಥೆಗಳಿರುವದರಿಂದ ದಲಿತರಿಗೆ ಶಿಕ್ಷಣ ಸಿಗುವದು ಅತಿ ಕಠಿಣ, ಕಾರಣ ಅವರಿಗೆ ನೀಡಬೇಕಾದ ಶುಲ್ಕವನ್ನು ಪಾವತಿಸುವ ಶಕ್ತಿ ಇರುವುದಿಲ್ಲ. ಅದರಲ್ಲೂ ಉನ್ನತ ಶಿಕ್ಷಣದ ವಿದ್ಯಾ ಸಂಸ್ಥೆಗಳು ಬಹುತೇಕ ಖಾಸಗೀ ಒಡತನದಲ್ಲಿದ್ದು ಅಲ್ಲಿ ದಲಿತರ ವಿದ್ಯಾರ್ಥಿಗಳು ಓದುವುದು ಬಹುತೇಕ ಅಸಾಧ್ಯ.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ಇರುವ ವಿಶೇಷ ಘಟಕ ಯೋಜನೆಗಳ ಪರಿಣಾಮಕಾರಿ ಜಾರಿಗೆ ಒತ್ತಾಯಿಸಿದ ಕಾಂ. ಪ್ರಕಾಶ್ ಕಾರಾಟ್. ಕೇಂದ್ರ ರಾಜ್ಯ ಸರ್ಕಾರಗಳು ಅದಕ್ಕಾಗಿ ನಿಗದಿತ ನಿಧಿಯನ್ನು ಮೀಸಲಿಡುತ್ತಿವೆ. ಅದನ್ನು ಸರಿಯಾಗಿ ದಲಿತರಿಗೆ ತಲುಪಿಸುವ ಕೆಲಸವಾಗಬೇಕು - ಬಹುತೇಕ ಕಡೆಗಳಲ್ಲಿ ದಲಿತರಿಗೆಂದು ಮೀಸಲಿಟ್ಟ ಹಣ ಇತರ ಕೆಲಸಗಳಿಗೆ ಬಳಸಲಾಗುತ್ತಿದೆ ಅಥವಾ ಅದನ್ನು ವರ್ಷ ಪೂರ್ತಿ ಬಳಸದೇ ಕೊನೆಗೆ ಅದು ವಾಪಸ್ಸು ಕೇಂದ್ರಕ್ಕೆ ಹೋಗುವಂತಹ ಉದಾಹರಣೆಗಳೂ ಸಹ ಇವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ವಿಷಯದ ಬಗ್ಗೆ ಗಮನ ಹರಿಸಬೇಕು, ಅಷ್ಟಲ್ಲದೆ ದಲಿತರಿಗೆಂದು ಬಿಡುಗಡೆಯಾದ ಹಣ, ಹಿಂದಿನ ವರ್ಷದ ನಿಧಿ ಉಳಿದಲ್ಲಿ ಆ ನಿಧಿ ಮುಂದಿನ ವರ್ಷಕ್ಕೆ ಮುಂದುವರಿಯುವರಿಯಲು ಅವಕಾಶ ನೀಡುವಂತಹ ಕಾನೂನೊಂದನ್ನು ತರಬೇಕೆಂದು ಒತ್ತಾಯಿಸಿದರು.

ಭೂಮಿ, ಶಿಕ್ಷಣ ಮತ್ತು ಮೀಸಲಾತಿ..ಮೂರು ಮುಖ್ಯ ಅಂಶಗಳು– ಜಿ.ವಿ.ಶ್ರೀರಾಮರೆಡ್ಡಿ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಕಾಂ. ಜಿ. ವಿ. ಶ್ರೀರಾಮ ರೆಡ್ಡಿಯವರು ಮಾತನಾಡಿ, ಸರಕಾರ ಮೀಸಲಾತಿ ಆಧಾರದ ಮೇಲೆ ಉದ್ಯೋಗ ನೀಡುವುದನ್ನು ನಿಲ್ಲಿಸಿ ದಶಕಗಳೇ ಕಳೆದಿವೆ. ಅಷ್ಟೆ ಅಲ್ಲದೆ ಖಾಲಿ ಇರುವ ಲಕ್ಷಾಂತರ ಹುದ್ದೆಗಳನ್ನು ಭರ್ತಿಮಾಡುವ ಯಾವ ಸುಳಿವೂ ಕಾಣುತ್ತಿಲ್ಲ ಎಂದು ರಾಜ್ಯ ಸರ್ಕಾರದ ದಲಿತ ವಿರೋಧಿ ಧೋರಣೆಯನ್ನು ಖಂಡಿಸಿದರು. ಮುಂದುವರಿದು ಮಾತನಾಡಿದ ಅವರು ಮೂರು ಮುಖ್ಯ ಅಂಶಗಳನ್ನು ಸಭಿಕರ ಮುಂದಿಟ್ಟರು.



ದಲಿತರಿಗೆ ಭೂಮಿ ಹಂಚಿಕೆ:

ಮೊದಲನೆಯದಾಗಿ ದಲಿತರಿಗೆ ಭೂಮಿ ನೀಡುವ ವಿಷಯ; ದೇಶದ ಕೃಷಿಯೋಗ್ಯವಾದ 80% ಪ್ರತಿಶತ ಭೂಮಿ ಕೇವಲ 20% ಜನರ ಕೈಯಲ್ಲಿದೆ. 100 ರಲ್ಲಿ 80% ಜನಸಂಖ್ಯೆ ಕೃಷಿ ಕಾರ್ಯದಲ್ಲಿ ತೊಡಗಿದ್ದಾರೆ. ಅವರಲ್ಲಿ ಬಹುತೇಕ ಜನ ದಲಿತರೇ ಆಗಿದ್ದಾರೆ.

ಪುಟ 10 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No-12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST)and Printed at : Kriya Prakashana,12,18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH